ಬೆಲೆ: ಎರಡು ಆಣೆ

ಜಾಹೀರಾತಿಗಾಗಿ ವಿಚಾರಿಸಿರಿ

ಕರ್ಮವೀರ

ಜಾಹೀರಾತಿಗಾಗಿ ವಿಚಾರಿಸಿರಿ

ಸಂಪಾದಕರು : ಹ. ರಾ. ಪುರೋಹಿತ, ಎಂ. ಎ. ‖ ಅಖಿಲ ಕರ್ನಾಟಕದಲ್ಲಿ ಅತ್ಯಂತ ಜನಪ್ರಿಯ ವಾರಪತ್ರಿಕೆ ‖ Editor H. R. Purohit, M. A.

ಸಂಪುಟ ೧೯] ಹುಬ್ಬಳ್ಳಿ ಸೋಮವಾರ ತಾರೀಖು ೧೨—೫—೧೯೪೭ [ಸಂಚಿಕೆ ೬

ಏಶ್ಯ ಜನಾಂಗ ಪರಿಷತ್ತಿನ ಆವಶ್ಯಕತೆ

ಮಿತ್ರ ಜನಾಂಗ ಕೊನೆಗೊಂಡದ್ದೆಂತು?
ಏಶ್ಯ ಪರಿಷತ್ತಿಗೆ ಮಹಾತ್ಮರ ಸಂದೇಶವೇನು?

ಲೇ— ಶಂ. ಮುಳಿಯೆ ತಿಮ್ಮಪ್ಪಯ್ಯನವರು

೧) ಪಾಶ್ಚಾತ್ಯ ಜನಾಂಗಗಳಿಗೆ ಸಾಮಾನ್ಯವಾಗಿ- ಅಮೇರಿಕದವರಿಗೆ ಒಂದಿಷ್ಟು ವಿಶೇಷವಾಗಿ- ಈ ನಮ್ಮ ಏಶ್ಯಜನಾಂಗ ಸಂಘಟನೆಯ ಪ್ರಯತ್ನವನ್ನು ಪರಾಂಬರಿಸಿ ಸಂಶಯವಾಗಿತ್ತಂತೆ. ಪರಿಷತ್ತು ಕೂಡಿ ನಿರ್ಧಾರವಾದ ಉದ್ದೇಶಸಿದ್ಧಿಯ ಮಸೂದೆಗಳೆಲ್ಲ ಪ್ರಕಟವಾದುವು. ಮಹಾತ್ಮಾ ಗಾಂಧಿಯವರ ಸಮ್ಮೇಳನಾಂತದ ಸಂದೇಶ ಸಾರವೂ ಗೊತ್ತಾಯಿತು. ಈಗ ಪಾಶ್ಚಾತ್ಯ ಜನಾಂಗಗಳ ಸಂಶಯದೃಷ್ಟಿ ತಿಳಿದು ಸ್ವಚ್ಛವಾಗಿರಬೇಕೆಂದು ತೋರುತ್ತಿದೆ. ಈ ಸಂದರ್ಭದಲ್ಲಿ ನಮ್ಮ ನಾಡಿನ ಸಾಮಾನ್ಯ ಜನರೆದೆಯಲ್ಲಿ ಭಾಸವಾಗುತ್ತಿರುವುದಕ್ಕನುವಾಗಿ ಈ ಏಶ್ಯಜನಾಂಗ ಸಮ್ಮೇಳನ ಯಾಕೆ ತಲೆಯೆತ್ತಿತು? ಪ್ರಪಂಚದ ಎಲ್ಲ ರಾಷ್ಟ್ರಗಳ ಆಗುಹೋಗುಗಳ ಪರಿಣತಿಗಳನ್ನು ಪರಾಂಬರಿಸಿ, ಗುರಿದೋರಿಸುವ ಮಿತ್ರರಾಷ್ಟ್ರ (Allied Nations) ಗಳ ಸಂಸ್ಥೆಯೊಂದಿರುವಲ್ಲಿ ಈ ಏಶ್ಯನ್ ಜನಾಂಗ ಸಂಸ್ಥೆ ಬೇರೇನು ಮಾಡಲಿದೆ? ಎಂಬವುಗಳನ್ನು ಸಂಗ್ರಹವಾಗಿ ವಿಸ್ತರಿಸಬೇಕಾಗಿದೆ.

೨) ಹಿಂದಿನ ಮಹಾ ಯುದ್ಧವು ಅಧಿಕವಾದೊಡೆ ಅಮೇರಿಕದ 'ಯುನೈಟೆಡ್ ಸ್ಟೇಟ್ಸ'ನ ಅಧ್ಯಕ್ಷರಾಗಿದ್ದ ವಿಲ್ಸನ್ ಮಹಾಶಯ ನಾಯಕತ್ವದಿಂದ 'ಜನಾಂಗ ಸಂಘ' (League of Nations) ಎಂಬ ಸಂಸ್ಥೆಯೊಂದು ತಲೆದೋರಿತು. ಪ್ರಪಂಚದೊಳಗಿನ ರಾಷ್ಟ್ರಗಳ ಅನ್ಯೋನ್ಯ ವಿವಾದಗಳನ್ನೆಲ್ಲ ಅದು ಬಗೆಹರಿಸತಕ್ಕದು ಎಂಬ ನಿಯಮವಾಗಿ ... ಎಲ್ಲ ಜನಾಂಗಗಳ ಪ್ರತಿನಿಧಿಗಳೂ ಅವರೊಳಗೆ ಸದಸ್ಯರಾಗಿದ್ದರು. ಚಿಕ್ಕ ದೊಡ್ಡ ಎಲ್ಲ ರಾಷ್ಟ್ರಗಳೂ ಸೇರಿ, ಅಪಾರವಾದ ಆ ಸಂಘದ ವೆಚ್ಚದಲ್ಲಿ ಹೊಣೆಗಾರರು. ಆದರೇನು? 'ಇದಮಿತ್ಥಂ' ಎಂದು ಹೇಳುವ ಸಾಗಿಸುವ ಜವಾಬುದಾರಿಕೆ ಎಲ್ಲ ಪ್ರಬಲ ರಾಷ್ಟ್ರಗಳಲ್ಲೇ ಅಡಕವಾಗಿತ್ತು. 'ಹೀಗೆ ಸುಖಸಂಕಥಾವಿನೋದದಿಂ' ಜನಾಂಗ ಸಂಘದ ಆಳಿಕೆ ಸಾಗುತ್ತಿರುವಲ್ಲಿ ಮೆಲ್ಲನೆ ಅತಿ ಪೂರ್ವದ ಜಪಾನು ಬಡ ಚೀನವನ್ನು ನೂಕಲಾರಂಭಿಸಿತು. ಜನಾಂಗ ಸಂಘದಲ್ಲಿ ಬರುತ್ತಿರುವ ವಾದವಿವಾದಗಳು "ಪುಸ್ತಕದ ಬದನೆಕಾಯಂತಹುದು" ಎಂದ ಕವಿಯ ಮಾತುಗಳೇ ಆಗ ತೊಡಗಿದುವು. ಪಾಶ್ಚಾತ್ಯ ರಾಷ್ಟ್ರಗಳು ಹೊರಗಿಂದ ಹೊರಗೆ ಹೇಗಿದ್ದರೂ ಒಳಗಿಂದೊಳಗೆ ಜಪಾನಿನ ನಿರಂಕುಶಾಧಿಕಾರದ ಬೆಂಕಿಗೆ ಗಾಳಿ ಬೀಸಲಾರಂಭಿಸಿದುವು. ಪಶ್ಚಿಮ ಭಾಗದಲ್ಲಿ ಮುಸಲೋಲಿನಿಯವರ ಸರ್ವಾಧಿಕಾರದಿಂದ ಪ್ರಮತ್ತವಾದ ಇಟಲಿ, ಬಡ 'ಈಥಿಯೋಪಿಯ'ವನ್ನು ಗಿಳಂಕರಿಸಲು ಹವಣಿಸಿತು. ಅದಕ್ಕೆ ಹಿಟ್ಲರರ ಅಧಿಕಾರದಿಂದ ಮದವೇರಲಾರಂಭಿಸಿದ ಜರ್ಮನಿ ಪೂರ್ಣ ನೆರವಾಯಿತು. ಜಪಾನು ಜರ್ಮನಿ ಇಟಲಿಗಳೆಂಬ ತ್ರಿದೋಷಗಳು ಒಳಗೊಳಗೇ ಹೆಣೆದೊಂದಾಗಿ ತಮ್ಮ ಪಶ್ಚಿಮ ಪ್ರಾಂತದೇಶದ ಹತ್ತಿರಕ್ಕೆ ಅವರಿಸಿದಾಗಲೆ ಇದೊಂದು ವಿಶಿಷ್ಟಸನ್ನಿಪಾತವೆಂದು ಇಂಗ್ಲಂಡೇ ಮೊದಲಾದ ಪಾಶ್ಚಾತ್ಯ ಜನಾಂಗಗಳಿಗೆ ಮುಂದಟ್ಟಾದುದು. ಆ ಮೊದಲೆ ಬುದ್ಧಿವೃದ್ಧರಾದ ಕೆಲವರು-ವಿಶೇಷವಾಗಿ ನಮ್ಮ ಮಹಾತ್ಮಾ ಗಾಂಧಿಯವರು ನಿದಾನವನ್ನರಿತು "ಅಪಾಯಕರ ರೋಗ ಲಕ್ಷಣವಿದು." ಎಂದು ಸಾರಿ ಸೂಚಿಸುತ್ತಿದ್ದುದೆಲ್ಲ ಮರಳಿನ ನೀರಾಗಿದ್ದುದು ಲೋಕವಿದಿತವಷ್ಟೆ. ಹೀಗಾಗಲಿಕ್ಕೆ ಆಯಾ ಪ್ರಬಲ ಜನಾಂಗಸಂಬಂಧಿ ಸದಸ್ಯರ ಅಹಂಮಮತೆಗಳೇ ಕಾರಣವಲ್ಲವೆ? ಈ ಮಾತನ್ನಾಲಿಸಿ ಯಾರೂ ಬೇಸರಿಸಲಾಗದು, ಕೋಪಿಸಲಾಗದು. ಈಗ ಪರಿಣಾಮವೊದಗಿದುದೇನು ? ವಿರೋಧಿಗಳು ಹತರಾದರು, ಜಿತರಾದರೇನೋ ನಿಜ. ಪ್ರಮುಖೋದ್ದೇಶವೆಂದು ಎಲ್ಲರೂ ಸಾರುವ ಲೋಕಶಾಂತಿ ಎಲ್ಲಿದೆ? ಇಲ್ಲದಿರುವುದಿದು ಬರಿಯ ಯುದ್ಧಫಲವಾದ ಬರಗಾಲ—ದುರ್ಭಿಕ್ಷಗಳ ಫಲಮಾತ್ರವೇ ಅಲ್ಲ. ಪ್ರಮುಖಮಿತ್ರ ಜನಾಂಗಗಳ ಅನೈಕ್ಯದಿಂದ ಸದಸ್ಯನೊಬ್ಬನು ಗುದ್ದಕ್ಕೆಳೆದರೆ, ಇನ್ನೊಬ್ಬನು ನೀರಿಗೇ ಒಯ್ಯುವ ದೃಶ್ಯವನ್ನು ನಾವೆಲ್ಲ ನೋಡುತಿದ್ದೇವೆ. ಇಂಥ ಮತಭೇದವು ಒದಗಿದ ಕೂಡಲೆ ಅದನ್ನು ಪರಾಂಬರಿಸಿ ಸಿದ್ಧಾಂತಿಸುವ ನಿಷ್ಪಕ್ಷಪಾತಿಗಳಾದ ನ್ಯಾಯಶಾಸ್ತ್ರಪಂಡಿತರ ಸಭೆಗೆ ಅದನ್ನೊಪ್ಪಿಸಬೇಕು. ಅವರ ಹೇಳಿಕೆಗೆ ಎಲ್ಲರೂ ತಲೆಬಾಗಬೇಕು. ಹಾಗಿಲ್ಲದೆ, ಈಮಿತ್ರ ಜನಾಂಗ ಸಂಘದ ಪ್ರಬಲ ಸದಸ್ಯರು ತಮ್ಮ 'ವೆಟೊ ಪವರ್' ಅಥವಾ ಅಸಮ್ಮತಿಯ ಅಧಿಕಾರದಿಂದ ಕಾರ್ಯಕ್ರಮದ ಶ್ವಾಸವನ್ನೇ ಕಟ್ಟಿಬಿಡುತ್ತಾರೆ. ಈ ಸಂದರ್ಭದಲ್ಲಿ ಚಾಣಕ್ಯನ ಅಭಿಪ್ರಾಯವನ್ನು ಪರಾಂಬರಿಸಿರಿ—

"ವಿವಾದೇ ಧರ್ಮಮನುಸ್ಮರೇತ್"

೪೮೯, ಚಾ. ಸೂತ್ರ

ಉಭಯ ಪಕ್ಷಗಳಿಗೆ ವಿವಾದ ಒದಗಿ ಕಾರ್ಯಕ್ಕೆ ತಡೆಯಾದಲ್ಲಿ ಧರ್ಮಬೋಧೆಯನ್ನು ಸರಿಯಾಗಿ ಆಯಾ ವಿವಾದಿಗಳು ಮನದಿ ಸ್ಮರಿಸಿಕೊಳ್ಳಲಿ, ಎನ್ನುತ್ತಾನೆ. ಯಾಕೆಂದರೆ ಜಳ್ಳು ಮಾತಲ್ಲವಿದು; ಅವನೆದೆಯ ಬೆಟ್ಟಿಗೇ ಮೀಸಲಾದ ಆಣೆ ಮುತ್ತಿನ ಮಾತು. ಈ ಮಾತನ್ನನುಸರಿಸುತ್ತ ಹೋದರೆ, ಅಹಂ ಮಮತೆಗಳಿಲ್ಲದೆ ಸತ್ಯಾನುಸಾರವಾಗಿ ಪ್ರಪಂಚವನ್ನೇ ಧಾರಣವೆಸಗುವ, ಪ್ರತಿಯೊಬ್ಬನು ಸುಸಂಸ್ಕೃತ ಸದಸ್ಯನ ಅಂತಃಕರಣದಲ್ಲಿ ನೆಲಸಿರಬೇಕಾದ ಧಾರಕಶಕ್ತಿ ಅಥವಾ ಪರಾಂಬರಿಕೆಯ ತಿರುಳಾದ ಹುರುಳು. ಅದಿದ್ದವನೇ ಅಂಥ ಮಿಕ್ಕ ಜನಾಂಗ ಸಂಘದಲ್ಲಿ ಸದಸ್ಯನಾಗಿರಲು ಅರ್ಹನು ಎಂದರೆ ತಪ್ಪಾದೀತೆ? ಮಾನವ ಸ್ವಭಾವವಾದ ಅಹಂಮಮತೆಗಳ ಸಂಕಲೆಯಿಂದಾಗಿ ಒಮ್ಮೊಮ್ಮೆ ಚಂಚಲಚಿತ್ತನಾಗಬಹುದು; ಆದರೆ, ವಿವಾದ ತಿಕ್ಕಾಟಕ್ಕೆಡೆಯಾದ ಕೂಡಲೆ "ಧರ್ಮಮನುಸ್ಮರೇತ್"— ಧರ್ಮವೇನೆಂದು ಅದರ ಸ್ವರೂಪವನ್ನು ತಾನೇ ನೆನಸಿಕೊಂಡರೆ-ಮುತ್ತಿನ ನಿಮಿಷದಲ್ಲಿಯೇ ಅತನೆದೆ ಅಚ್ಚಗನ್ನಡಿಯಾಗಬೇಕಲ್ಲವೆ ? ಇಂಥ ಧಾರ್ಮಿಕ ಸದಸ್ಯರೇ ಎಲ್ಲರಾದರೆ ವಿವಾದ ಸಿದ್ಧಾಂತಕ್ಕೆ ಯಾವ ಮಧ್ಯಸ್ಥರೂ ಬೇಕಾಗಿಲ್ಲ. ನಮ್ಮ ಮಿತ್ರ ಜನಾಂಗ ಸಂಘದೊಳಗೆ ಹಾಗಿರುವ ಸದಸ್ಯ ಮಹಾಶಯರೆಷ್ಟು ಮಂದಿಯನ್ನು ಕಾಣಬಹುದು ? ಇಂಥವರ ಕೈಗೆ 'ವೆಟೋಪಾವರೂ'ಸೇರಿದಲ್ಲಿ ಮತ್ತೇನಾಗಬೇಕು? ಈ ಸಂಗತಿಯನ್ನು ಪಾಕಿಸ್ತಾನ ನಿವಾಸಿಗಳಾದ ನಮ್ಮ 'ಮುಸ್ಲಿಮ್-ಲೀಗಿ'ನ ಪ್ರಮುಖ ವ್ಯಕ್ತಿ (High Command).ಗಳು ಶಾಂತಚಿತ್ತರಾಗಿ ಪರಾಂಬರಿಸಬೇಕು. ಎಂದು ಇಲ್ಲಿಯೇ ಸೂಚಿಸಬೇಕಾಗಿದೆ.

ಮಿತ್ರ ಜನಾಂಗ ಸಂಘ ಕೊನೆಗೊಂಡದ್ದು ಹೇಗೆ?

ಮಿತ್ರಜನಾಂಗ ಸಂಘವು ಹೀಗೆ ಒಳಜಗಳಗಳಿಂದ ಕೊನೆಗಾಣದಾಗಲಿಕ್ಕೆ, ಅದರ ಚಿರಾಭ್ಯಸ್ತವಾಗಿ ಹರಿದುಬಂದ ಬಳಕೆಯೇ ಕಾರಣ. ಒಂದು ದೃಷ್ಟಾಂತವನ್ನು ಮಾತ್ರ ಸೂಚಿಸುವ; ಈ ಸೂಚನೆಯನ್ನು ಭಾವಿಸಿ "ಏಶ್ಯನ್ ಜನಾಂಗ"ವಾಗಲಿ, ಬರಿಯ ಹಿಂದುಸ್ತಾನವಾಗಲಿ, ಅಥವಾ ಈ ಲೇಖಕ ವ್ಯಕ್ತಿಯಾಗಲಿ 'ಪ್ರತಿಗಾಮಿ'ಯಾಗಿದೆ ಎಂದು ಯಾರೂ ಭಾವಿಸಬಾರದು. ಬರಿಯ ಅಹಿಂಸಾ ಶಸ್ತ್ರ ಮಾತ್ರದಿಂದಲೆ ಎದೆದುಂಬಿದ ಸುರಿವ ನುಡಿ ಇದೆಂದು ಭಾವಿಸಿಕೊಳ್ಳಬೇಕು:— ಈ ಮಿತ್ರವರ್ಗದೊಳಗೆ ಬರಿಯ ಪ್ರಧಾನವ್ಯಕ್ತಿಗಳೆನ್ನಿಸುವ ನಾಲ್ಕೋ ಐದೋ ಪ್ರತಿನಿಧಿ (Big four or Big five) ಗಳು ಮಾತ್ರವೆ ಸೇರಿ ನಿರ್ಧರಿಸಿ ಜಪಾನಿನ 'ಹಿರೋಶಿಮಾ' ಎಂಬೂರಿಗೇ ಅಣುಬಾಂಬನ್ನು ಹಾಕಿ ಅಮೇರಿಕದವರು ಅದೊಂದು ಮಹಾಯಾಗವನ್ನು ಪೂರ್ತಿ ಮಾಡಿದ್ದರಲ್ಲವೆ ? ಜಪಾನಿನ ರಾಜಕೀಯಾಧಿಕಾರಿ—ಕೂಟವು ಹಿಟ್ಲರನೊಡಗೂಡಿ ಅಮೇರಿಕಕ್ಕೆ ಅನ್ಯಾಯವೆಸಗಿದುದೇನೊ ನಿಜ. ಆದರ ಸಹಸ್ರಾಪರಾಧವದು. ಅದಕ್ಕಾಗಿ ಒಂದೂ ಅರಿಯದ ನಿರಪರಾಧಿಗಳಾದ ಲಕ್ಷಾಧಿಕ-ದೇಶೀಯ ಜನರನ್ನು ಕಣ್ಮುಚ್ಚಿ ಸುಟ್ಟುಬಿಡುವುದೆ ? ಅವರೂ ಜಪಾನೀಯರೇನೋ ಹೌದು. ಹೀಗೆಂದರೆ "ನೀನಲ್ಲವಾದರೆ ನಿನ್ನಪ್ಪ, ನನ್ನನ್ನು ನಿಂದಿಸಿರಬೇಕು" ಎಂದು ಬಡ ಕುರಿಮರಿಯನ್ನು ತೋಳಂಕರಿಸಿದ ಆ ಗೀಳದ ಹೆಗಳಿಕೆಯ ಕಥೆಯೇ ಅದೀತು. ಜಪಾನಿನಂತೆಯೇ ಹಗೆಗಳಾದ, ಜರ್ಮನಿ-ಇಟಲಿಗಳನ್ನಿವರು ಈ ಬಗೆಯಲ್ಲೇಕೆ ಮರ್ದಿಸಲಿಲ್ಲ? ಕಡುವೈರಿಗಳೊಳಗೂ ಜಾನಾಂಗಿಕವಾದ ಪಂಕ್ತಿ ಭೇದವೇನು ? ಏಶ್ಯನ್ ಜನಾಂಗದವರು-ವಿಶೇಷವಾಗಿ, ಜಪಾನಿನ ಹಿಂದಿನ ಅವಿನಯವನ್ನು ಸಂಪೂರ್ಣವಾಗಿ ನಿಂದಿಸುವ ಹಿಂದುಸ್ತಾನವು-ಈ ವರ್ತನೆಯನ್ನು 'ಅಸಹ್ಯಾವಿನಯ' ಎನ್ನದಿರಲಾರದು. ಅಸಹ್ಯಯುದ್ಧವನ್ನು ಬಲುಬೇಗನೆ ಅಂತಗೊಳಿಸಲಿಕ್ಕೆ ಸ್ವಸೈನ್ಯನಾಶವನ್ನು ತಡೆಯಲಿಕ್ಕೆ ಹೀಗೆ ಮಾಡಬೇಕಾಯಿತು ಎನ್ನುವ ಅಕಾಂಡಭಾವಿತಗಳನ್ನಾಲಿಸಿ ಎದೆಯುಕ್ಕಿ ನಗೆ ಹರಿಯುತ್ತಿದೆ. ಏನು ಪ್ರಪಂಚೋದ್ಧಾರಕರೆಂಬ ಧಾರ್ಮಿಕ ಕಂಚುಕವನ್ನು ತೊಟ್ಟುಕೊಂಡ ದಿರುದಾಂತರು ಇಲಿ ಹೆಗ್ಗಣಗಳ ಕಾಟದ ನಿವೃತ್ತಿಗೆಂದು ಮನೆಯನ್ನೇ ಅಗ್ನಿದೇವನಿಗೆ ಸಮರ್ಪಿಸುವುದೆ? "ಶಾಂತಂ ಪಾಪಂ, ಶಾಂತಂ ಪಾಪಂ" ಎಂದು ಜಪಿಸುತ್ತಾ ಎರಡೂ ಕಿವಿಗಳನ್ನು ಮುಚ್ಚಿಕೊಳ್ಳಬೇಕು.

ಈ ಅವಿನಯ ಸ್ವರೂಪವು ಎದೆಗುದಿಯುತ್ತಿದ್ದರೂ ಇತ್ತಣ ಮುಂದಾಳುಗಳಾರೂ ಅತಿ ಸ್ಫುಟವಾಗಿ ಹೇಳಿಲ್ಲವೆಂದು ತೋರುತ್ತಿದೆ. ನಡೆದ ಏಶ್ಯನ್-ಸಮ್ಮೇಳನಾಂತ್ಯದಲ್ಲಿ ಮಹಾತ್ಮಾ ಗಾಂಧಿಯವರು ಪಾಶ್ಚಾತ್ಯರಿಗೆ ಸಾರಿ ಹೇಳಿದ ಸಂದೇಶದೊಳಗೆ ಇದೂ ಅಡಕವಾಗಿ ಭಾಸವಾಗುತ್ತಿದೆ. 'ಮನಃ ಪರಮಾಣುವನ್ನು ಶುದ್ಧಬುದ್ಧಿ ಜ್ವಾಲೆಯಲ್ಲಿ ಪರಿಶುದ್ಧೀಕರಿಸಿರಿ; ಅಹಿಂಸಾತತ್ವದ ಸತ್ಯಸಾರವನ್ನು ಎತ್ತೆತ್ತಲೂ ಹರಿಯಿಸಿರಿ. ಅಣು ಬಾಂಬಿನಿಂದ ಕರಿಮುರಿಯಾದ ಭಾಗವೆಲ್ಲ ಶಾಶ್ವತವಾಗಿರುವಂತೆ ಅರಳಿ ಪರಿಮಳಿಸುತ್ತಿದೆ' ಎಂಬ ಸಂದೇಶ ತಾತ್ಪರ್ಯವನ್ನು ಪರಾಂಬರಿಸಿರಿ. ಮನುಷ್ಯನಿಗೆ, ಹಗೆಯಲ್ಲಿ ಕೋಪವೇರಿ ಆ ಕೋಪವನ್ನು ಹೇಗೆ ಯಾವ ಕಡೆಗೆ ತಿರುಗಿಸಬೇಕು ಎಂಬುದನ್ನು ಚಾಣಕ್ಯನ ಮಾತಿನಿಂದ ಭಾವಿಸಿರಿ:—

ಯದ್ಯಪಕಾರಿಣಿ ಕೋಪಃ ಕೋಪೇ
ಕೋಪ ಏವ ಕರ್ತವ್ಯ:— "೩೫೧"
(ಚಾ. ಸೂತ್ರ)

(ಎಲೈ ಮಾನವನೇ) " ಅಪಕಾರವೆಸಗಿದಾತನಲ್ಲಿ ತನಗೆ ಕೋಪವುಂಟಾಗಿ ಬಿಟ್ಟಿತು ಎನ್ನುತ್ತೀಯೋ ಹಾಗಾದರೆ ಕೋಪದಲ್ಲೇ ಕೋಪಗೊಳ್ಳಬೇಕು " ಎಂಬು ಸೂತ್ರಾರ್ಥವು. ಇದನ್ನು ಇನ್ನಷ್ಟು ಸರಳವಾಗಿ ಪರಾಂಬರಿಸಿರಿ:— ಒಬ್ಬನು ನಮಗೆ ಅಪಕಾರವನ್ನೆಸಗಿದರೆ ಅತನಲ್ಲಿ ಕೋಪವಾಗುತ್ತಿದೆ. ಇದು ವೈಯಕ್ತಿಕ ದ್ವೇಷದಿಂದಲ್ಲ; ಅತನೆಸಗಿದ ಅಪಕಾರದಿಂದಾಗಿ— ಎಂದರೆ, ಉಪಾಧಿಪೂರ್ವಕವಾಗಿ ಸಂಭವಿಸಿದುದು. ಅತನೇ ಉಪಕಾರವೆಸಗಿದ್ದರೆ ಅವನಲ್ಲಿ ಪುನಃ ಪ್ರೇಮವೊದಗುವುದನ್ನು ಕಾಣುತ್ತೇವೆಯಲ್ಲವೆ? ಅದರಿಂದ ಆತನು ತನಗೆ, ಒಮ್ಮೆ ಅಪಕಾರವೆಸಗಿದುದೇಕೆ? ಎಂಬುದನ್ನು ಮೊದಲು ನಿರ್ಧರಿಸಬೇಕು. ಸಂದರ್ಭಾನುಸಾರವಾಗಿ ಉಂಟಾದ ಕೋಪದಿಂದಲೇ ಅಪಕಾರವೆಸಗಿದುದು ಎಂಬುದನ್ನು ಕಂಡು ಹಿಡಿಯಬಹುದು. ಅಂಥ ಕೋಪವನ್ನೇ ಬಗೆಹರಿಸಬೇಕಲ್ಲದೆ, ಅದರಿಂದ ಅಪಕಾರಗೈದ ಪಾತ್ರದಲ್ಲಿ ಕೋಪಿಸುವುದರಿಂದ ಫಲವೇನು? 'ಗಾಯ ಪೊತ್ತಿಟ್ಟು ಮದ್ದೊತ್ತಿಟ್ಟ' ಎಂಬ ಗಾದೆಯಂತೆ ಹಾಸ್ಯಾಸ್ಪದವಾಗಬಾರದು. ಅಪಕಾರಿಯಲ್ಲಿ ಕೋಪವೇರಿ ಪ್ರತ್ಯಪಕಾರಗೆಯ್ಯಬಾರದು. 'ಕೋಪೇ ಕೋಪ ಏವ ಕರ್ತವ್ಯ' ಎಂದರೆ— 'ಉಷ್ಣಮುಷ್ಣೇನ ಶಾಮ್ಯತಿ' ಎಂಬ ಚತುರ ವೈದ್ಯರ ಬೋಧನೆಯಂತೆ 'ಮುಳ್ಳನ್ನು ಮುಳ್ಳಿನಿಂದ ತೆಗೆಯಬೇಕು' ಎಂಬ ನಾಡವರ ಮಾತಿನಂತೆ ತನ್ನ ಕೋಪವನ್ನೇ ತಡೆದು ಶಾಂತತೆಯನ್ನೊಂದಬೇಕು ಎಂದು ಸಾರಾರ್ಥ. 'ಚಾಣಕ್ಯ' ಎಂದಕೂಡಲೆ ಅಧುನಿಕ ಸುಸಂಸ್ಕೃತರೆಂಬವರು ನಿಂದಿಸುವುದುಂಟು. ಅನ್ನವಿದ್ದರೂ ಉಣ್ಣದೆ ಹೊಟ್ಟೆಯುರಿದುಕೊಳ್ಳುವ ಅಂಥವರ ವರ್ತನೆಗೇನೆನ್ನಬೇಕು?

೩ ಈ ವರೆಗೂ ಪಾಶ್ಚಾತ್ಯರಲ್ಲಿ— ವಿಶೇಷವಾಗಿ ದಕ್ಷಿಣ ಅಫ್ರಿಕದಲ್ಲಿ ಬಳೆದು ಬಂದ ವರ್ಣದ್ವೇಷದ ಪರಿಣಾಮವನ್ನಿಲ್ಲಿ ಇಲ್ಲಿ ವಿಸ್ತರಿಸಬೇಕಾಗಿಲ್ಲ. ಹಿಂದಣ ಪ್ರಪಂಚ ನಾಯಕರೊಳಗೆ ಒಬ್ಬರೆಂದು ಹೆಸರು ಹೋದ ಶ್ರೀ. ಜೆ. ಸಿ. ಸ್ಮಟ್ಸ ಸಾಹೇಬರ ಸರಕಾರದ ಧೋರಣವೆಂಬ ಕನ್ನಡಿಯಲ್ಲಿ ಅದೆಲ್ಲ ಪ್ರತಿಬಿಂಬಿಸುತ್ತಿದೆ. ಇದು ಪಾಶ್ಚಾತ್ಯ ಜನಾಂಗಕ್ಕೆ ಪೌರ್ವಾತ್ಯ ಜನಾಂಗದಲ್ಲಿ ನೆಲಸಿದ ನೀತರಣೆಯನ್ನೇ ಆ ಕನ್ನಡಿ ಕಾಣಿಸುವುದು. ಸತ್ಯ-ಶಾಂತಿ-ಧರ್ಮಗಳಿಂದ ಆ ಅಶಾಂತತಾ ಪ್ರವೃತ್ತಿಯನ್ನು ತಿದ್ದೊಗೆಯಲಿಕ್ಕಾಗಿಯೇ ಏಶ್ಯನ್ ಜನಾಂಗ ಸಮ್ಮೇಳನ ಉದಯಿಸಿದೆ. ಅದರಲ್ಲಿ ಮುಯ್ಯಿಗೆ ಮುಯ್ಯಿ ಮೊನೆ ಇಲ್ಲ. ಈಗಿನ ಮಿತ್ರ ಜನಾಂಗ ಸಂಘದಲ್ಲಿ ಅಸಹಕಾರವೆಸಗುವ ಉದ್ದೇಶವೇ ಅದಕ್ಕಿಲ್ಲ. ಸಾಧ್ಯವಾದ ನೆರವನ್ನೆಲ್ಲ ಒದಗಿಸಿ ಅದು ಕೈಗೊಡುತ್ತಲೇ ಇರುವುದು. ಈ ವಿಷಯದಲ್ಲಿ ಇನ್ನೂ ಸಂಶಯವಾದರೆ ಹಿಂದೆ ಸೂಚಿಸಿದ ಚಾಣಕ್ಯನ ಬೇರೊಂದು ಸೂತ್ರವನ್ನೇ ಉತ್ತರವಾಗಿ ಉದ್ಧರಿಸಿ ಹೇಳಬೇಕಾಗುವದು—

"ಸ್ವಯಮಶುದ್ಧಃ ಪರಾನಾಶಂಕತೇ"

೬೨೬, ಚಾ. ಸೂತ್ರ

ತಾನು ಅಶುದ್ಧಹೃದಯನಾಗಿದ್ದವನು, ಶುದ್ಧಹೃದಯರಾದ ಇತರರನ್ನು ನಂಬಲಾರನು, ಎಂಬುದೇ ಸೂತ್ರಾರ್ಥ. ನಂಬಿಸುವ, ನಂಬದಂತೆ ಮಾಡುವ ಸಾಧನವೆಂದರೆ ಮನಸ್ಸು. ಆ ಮನಸ್ಸೇ ಅಶುದ್ಧವಾಗಿರುವಲ್ಲಿ ನಂಬುವುದಾದರೂ ಹೇಗೆ?

" ಮನಏವ ಮನುಷ್ಯಾಣಾಂ ಕಾರಣಂ ಬಂಧಮೋಕ್ಷಯೋಃ" ಎಂಬುದು ಭಗವದ್ಗೀತಾವಚನ. ಮನುಷ್ಯರ ಕಷ್ಟ ಸುಖಗಳೆರಡಕ್ಕೂ ಅವರವರ ಮನಸಿನ ಅಂತರ್ದ್ವಂದ್ವಗಳೇ ಕಾರಣಗಳು. ಅದನ್ನವಧರಿಸಿ ಪಾಶ್ಚಾತ್ಯ ಜನಾಂಗಗಳು ಪಾಶ್ಚಾತ್ಯ ಜನಾಂಗಗಳಲ್ಲಿ ಬೇರೂರಿದ ಸಂಶಯವನ್ನು ಹರಿದೊಗೆಯಬೇಕು, ಎಂದು ಪ್ರಾರ್ಥಿಸುತ್ತೇನೆ. ಪಾಶ್ಚಾತ್ಯ ಜನಾಂಗವು ಈ ಪೌರ್ವಾತ್ಯ ಜನಾಂಗವೆಂದರೆ ಸಹೋದರರು

—೧೩ನೇ ಪುಟಕ್ಕೆ

ಮೂವತ್ತನೆಯ ಕನ್ನಡ ಸಾಹಿತ್ಯ ಸಮ್ಮೇಳನ
ಹರಪನಹಳ್ಳಿ

ಸ್ವಾಗತಾಧ್ಯಕ್ಷ ಶ್ರೀ ವಸುಪಾಲಪ್ಪನವರ ಭಾಷಣ



ಸ್ವಾಗತಾಧ್ಯಕ್ಷ ಶ್ರೀ. ವಸುಪಾಲಪ್ಪನವರು

ಈಗ ನಡೆಯಲಿರುವ ೩೦ ನೆಯ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಸ್ವಾಗತವನ್ನು ಬಯಸುವ ಸುಯೋಗವು ನನಗೆ ದೊರೆತಿರುವದು ನನ್ನ ಪೂರ್ವಾರ್ಜಿತ ಪುಣ್ಯ. ನಾನು ಇದುವರೆಗೂ ರಾಜಕೀಯ ರಂಗದಲ್ಲಿ ಅಲ್ಪ ಸ್ವಲ್ಪ ಸೇವೆಯನ್ನು ಸಲ್ಲಿಸಿರುವೆನೇ ವಿನಾ ಸಾಹಿತ್ಯದಲ್ಲಿ ನನಗೆ ಹೆಚ್ಚು ಪರಿಚಯವಿಲ್ಲ. ನಾನೇನೂ ದೊಡ್ಡ ಸಾಹಿತಿಯೂ ಅಲ್ಲ. ಹರಪನಹಳ್ಳಿಯಂಥ ಚಿಕ್ಕ ಹಳ್ಳಿಗೆ ಹಿರಿಯ, ನುರಿತ, ಅರಿತ ಸಾಹಿತಿಗಳನ್ನು ಹೃತ್ಪೂರ್ವಕವಾಗಿ ಸ್ವಾಗತಿಸಲು ನನಗೆ ಬಹಳ ಸಂತೋಷವಾಗುತ್ತದೆ. ಎಂದು ಹೇಳಿ ಸಮ್ಮೇಳನವನ್ನು ಮುಂದೂಡಲು ಬಂದ ಅನಾನುಕೂಲತೆಗಳನ್ನು ವಿವರಿಸಿ ಕಷ್ಟತೊಂದರೆಗಳನ್ನು ಸಹಿಸಬೇಕಾಗಿ ಕೇಳಿಕೊಂಡು ಹೀಗೆ ಹೇಳಿದರು

ಪ್ರಕ್ಷುಬ್ಧ ಕಾರಕವಾದ ನಮ್ಮೆಲ್ಲರಿಗೂ ಬೇಕಾಗದ ಯುದ್ಧವು ಮುಗಿದರೂ ಅದರ ದುಷ್ಪರಿಣಾಮಗಳು ಕೊನೆಗಾಣಲಿಲ್ಲ. ಇಂತಹ ಕ್ಲಿಷ್ಟ ಪರಿಸ್ಥಿತಿಯಲ್ಲಿ ಸಹ ನಾವು ನಮ್ಮ ಅಳಿಲಸೇವೆ ಎನ್ನುವಂತೆ ಏರ್ಪಾಟುಗಳನ್ನು ತಕ್ಕಷ್ಟು ಮಾಡಿ ಸಮ್ಮೇಳನವನ್ನು ಇಲ್ಲಿಗೆ ಬರಮಾಡಿಕೊಂಡು ಕನ್ನಡದೇವಿಯ ಸೇವೆಯನ್ನು ಸಲ್ಲಿಸಿದ್ದೇವೆ. ರೇಲ್ವೆ ನಿಲ್ದಾಣಕ್ಕೆ ಅತಿದೂರವಾಗಿರುವದರಿಂದ ತಮ್ಮೆಲ್ಲರಿಗೂ ಮೋಟಾರಿನ ಪ್ರಯಾಣದಿಂದ ಪ್ರಯಾಸವಾಗಿರಬೇಕು. ಮತ್ತು ಕಾರ್ಯವು ದೊಡ್ಡದಿರುವದರಿಂದಲೂ ಜನಸಂದಣಿಯಿಂದಲೂ ಅನುಭವದ ಅಭಾವದಿಂದಲೂ ಕೆಲವು ತೊಂದರೆಗಳಾಗಲಬಹುದು. ತಮ್ಮೆಲ್ಲರಿಗೂ ಅದಷ್ಟು ಸೌಕರ್ಯಗಳನ್ನು ಒದಗಿಸಿಕೊಡಬೇಕೆನ್ನುವದೇ ನಮ್ಮ ಹಿರಿಯ ಆಸೆ. ಎಷ್ಟೇ ಕುಂದುಕೊರತೆಗಳೂ ಕಷ್ಟಗಳೂ ಇದ್ದರೂ ಸಹ ಕನ್ನಡದೇವಿಯ ಮೇಲಿನ ಭಕ್ತಿಯೂ ಕನ್ನಡ ನುಡಿಯ ಮೇಲಿನ ಅವ್ಯಾಜ ಪ್ರೇಮವೂ ಇವನ್ನೆಲ್ಲಾ ಮರೆಯಿಸುವವೆಂದೇ ನಮ್ಮ ಭಾವನೆ.

ಈಗ ಒಂದು ವಿಷಾದ ಸಮಾಚಾರವನ್ನು ತಮ್ಮ ಮುಂದೆ ಇಡದಿರಲಾರೆ. ವರ್ಷಂಪ್ರತಿ ಕನ್ನಡನಾಡಿಗೆ ಪೆಟ್ಟುಗಳು ಬೀಳುತ್ತಲೇ ಇವೆ. ಹಿಂದಿನ ವರ್ಷವೇ ನಮ್ಮ ಸಮ್ಮೇಳನದ ಅಧ್ಯಕ್ಷಸ್ಥಾನವನ್ನು ವಹಿಸಿದ "ಕನ್ನಡಕ್ಕೊಬ್ಬನೇ ಕೈಲಾಸಂ" ಎಂಬ ಕೀರ್ತಿಯ ಕನ್ನಡ ವೀರನು ಕಣ್ಮರೆಯಾದುದು ವಿಷಾದ ಸಂಗತಿಯು. ತಿರುಳುಗನ್ನಡನಾಡೆಂದು ಹೆಸರಾಂತ ಕನ್ನಡ ನಾಡಿನ ಕನ್ನಡಿಗರು ಆಂಗ್ಲ ಭಾಷೆಯ ಪ್ರಭಾವದಿಂದ ಕನ್ನಡ ಭಾಷೆಯ ಸೌಂದರ್ಯವನ್ನು ಹಾಳು ಮಾಡುವರೆಂಬ ತನ್ನ ಭೀತಿಯನ್ನು ತೋರಿಸುವಂತೆ ಧೈರ್ಯದಿಂದ ಕನ್ನಡ ಜನತೆಯ ಮುಂದಿಟ್ಟ ವೀರನು ಇಂದು ಪರಲೋಕದಲ್ಲಿರುವನು. ಅವರ ಆತ್ಮಕ್ಕೆ ಶಾಂತಿದೊರೆಲೆಂದು ಅವರ ಜ್ಞಾಪಕಾರ್ಥವಾಗಿ ಈ ನಮ್ಮ ಸಾಹಿತ್ಯದೇವಿಯ ಗುಡಿಗೆ "ಕೈಲಾಸಂ ನಗರ"ವೆಂದು ಹೆಮ್ಮೆಯಿಂದ ಕರೆದಿದ್ದೇವೆ.


ಗುರುತರ ಕಾರ್ಯಭಾರವೂ, ಪ್ರವಾಸದ ಪ್ರಯಾಸವೂ ಇದ್ದರೂ ಸಹ ನಮ್ಮ ಪ್ರೀತಿಯ ಜನತಾ ಸರಕಾರದ ಮಂತ್ರಿವರ್ಯರಾದ ಶ್ರೀ ಅತ್ತಾವರ ಬಾಲಕೃಷ್ಣ ಶೆಟ್ಟಿಯವರು ನಮ್ಮ ಸಮ್ಮೇಳನವನ್ನು ಉದ್ಘಾಟನ ಮಾಡಿರುವದು ಒಂದು ಹೆಚ್ಚಿನ ಶೋಭೆ. ರಾಜಕೀಯ ರಂಗದಲ್ಲಿ ಸ್ವಲ್ಪ ಮಟ್ಟಿಗೆ ಸೇವೆ ಸಲ್ಲಿಸಿದ ನನಗಂತೂ ಒಂದು ಹೆಮ್ಮೆ. ಶ್ರೀಯುತ ಶೆಟ್ಟಿಯವರು ಅಚ್ಚ ಕನ್ನಡಿಗರೂ, ಕನ್ನಡಾಭಿಮಾನಿಗಳೂ, ಸಹೃದಯರೂ ಎಂದು ಬೇರೆ ಹೇಳಬೇಕಾಗಿಲ್ಲ. ಇವರು ವೃತ್ತಪತ್ರಿಕೆಯ ಸಂಪಾದಕರಾಗಿದ್ದು ತನ್ಮೂಲಕ ಕನ್ನಡಭಾಷೆ ಮತ್ತು ಜನತೆಯ ಸೇವೆಯನ್ನು ಸಲ್ಲಿಸಿದ್ದಾರೆ. ಸರಕಾರದ ಕಾರ್ಯಬಾಹುಳ್ಯವನ್ನು ಬದಿಗೊತ್ತಿ ನಮ್ಮ ಮತ್ತು ಕನ್ನಡಿಗರ ಮೇಲಿನ ಪ್ರೇಮದಿಂದ ಇವರು ಉದ್ಘಾಟನ ಮಾಡಲು ಒಪ್ಪಿದುದು ಒಂದು ಸಂತೋಷದ ಸಂಗತಿಯು. ಇವರನ್ನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತೇವೆ.

ನಮ್ಮ ಅಧ್ಯಕ್ಷರಾದ ಶ್ರೀ. ಸಿ. ಕೆ. ವೆಂಕಟರಾಮಯ್ಯನವರು ತಮ್ಮ ವಿದ್ಯಾರ್ಥಿದೆಸೆಯಲ್ಲಿಯೇ ಲೇಖನಕಲೆಯಲ್ಲಿ ತೊಡಗಿ ಅನೇಕ ಮೆಚ್ಚುಗೆಯ ಸಾಹಿತ್ಯವನ್ನು ನಿರ್ಮಿಸಿದ್ದಾರೆ. ಇವರು ಸಂಸ್ಕೃತ, ಕನ್ನಡ ಉದ್ದಾಮ ಪಂಡಿತರು. ಇವರು ಹಳೆಯ ಸಾಹಿತಿಗಳೂ ಹಿರಿಯ ಸಾಹಿತಿಗಳೂ ಹೌದು. ಆದರೂ ಹೊಸ ಸಾಹಿತ್ಯದಲ್ಲಿ ಹಳೆಯದರ ಸೊಗಸು ಕೂಡಿಕೊಂಡಿರುವದು ಉತ್ತಮ ಎಂದು ಇವರ ಮತ. ಇವರ ಹೇಳಿಕೆಯಲ್ಲಿಯೇ ಹೇಳಬೇಕಾದರೆ ಶ್ರೇಷ್ಠ ಸಾಹಿತ್ಯವು ಯಾವಾಗಲೂ ಸೊಗಸು. ಇವರ ಹೆಸರನ್ನು ಕನ್ನಡನಾಡಿನಲ್ಲಿ ಕೇಳದವರೇ ಇಲ್ಲ. ಪರಭಾಷಾ ಸಾಹಿತಿಗಳಿಂದಲೂ ಹೆಚ್ಚಿ ಇಂತಹ ಪಳಗಿದ ಕನ್ನಡ ನಾಡನುಡಿಯ ಉಪಾಸಕರೂ ಹಿರಿಯ ಸಾಹಿತಿಗಳೂ ನಮ್ಮ ೩೦ ನೆಯ ಸಮ್ಮೇಳನಕ್ಕೆ ಅಧ್ಯಕ್ಷರಾಗಿ ದೊರೆತಿದು ನಮ್ಮ ಭಾಗ್ಯವೇ ಸರಿ. ಇಂತಹರನ್ನು ಸ್ವಾಗತಿಸಲು ನನಗೆ ಆನಂದವಾಗುತ್ತದೆ.

ನಮ್ಮ ಸಮ್ಮೇಳನದ ಅಂಗವಾಗಿ ನಡೆಯಲಿರುವ ಸಾಹಿತ್ಯಗೋಷ್ಠಿ, ಜನಪದ ಸಾಹಿತ್ಯಗೋಷ್ಠಿ, ಮಹಿಳಾಗೋಷ್ಠಿ, ವಿಜ್ಞಾನಗೋಷ್ಠಿ, ಇವುಗಳಿಗೆ ನುರಿತ ಸಾಹಿತಿಗಳೂ, ವಿಜ್ಞಾನಿಗಳೂ ಕನ್ನಡ ಮಾತೆಯ ಪ್ರೀತಿಯ ಪುತ್ರರೂ ಆದ ಶ್ರೀ ಸಿದ್ಧಯ್ಯನವರು ಪುರಾಣಿಕ, ಬೆಟಗೇರಿ ಕೃಷ್ಣಶರ್ಮರು, ಸಾ. ಪಾರ್ವತೀದೇವಿ ಕೇಸರಿಯವರು, ಡಾ. ತುಮ್ಮಿನಕಟ್ಟಿಯವರು, ಶ್ರೀ. ಜಿನರಾಜ ಹೆಗಡೆಯವರು, ಅಧ್ಯಕ್ಷರೂ ಉದ್ಘಾಟಕರೂ ಆಗಲು ಒಪ್ಪಿ ನಮಗೆ ಹೆಚ್ಚಿನ ಉಪಕಾರವನ್ನು ಮಾಡಿದ್ದಾರೆ. ಅವರೆಲ್ಲರಿಗೂ ನಾನು ಅತ್ಯಾನಂದದಿಂದ ಸ್ವಾಗತವನ್ನು ಬಯಸುತ್ತೇನೆ. ಪ್ರದರ್ಶನವನ್ನು ತೆರೆಯಲು ಒಪ್ಪಿಕೊಂಡು ಮತ್ತು ನಮ್ಮ ಸಮ್ಮೇಳನದ ಎಲ್ಲ ಕಾರ್ಯಗಳಲ್ಲೂ ಸಹಕಾರವನ್ನು ನೀಡಿದ ನಮ್ಮ ಜಿಲ್ಲೆಯ ಕಲೆಕ್ಟರ ಶ್ರೀ. ಅನಂತರಾಮನ್‌ರವರನ್ನು ಸಹ ನಾವು ಅತ್ಯಂತ ಆದರದಿಂದ ಬರಮಾಡಿಕೊಳ್ಳುತ್ತೇವೆ.

ನಮ್ಮ ಗ್ರಾಮವು ಚರಿತ್ರ ಪ್ರಸಿದ್ಧವಾಗಿದೆ. ವಿಜಯನಗರದ ಏಳಿಗೆಯ ಸಮಯದಲ್ಲಿ, ಆ ಸಾಮ್ರಾಜ್ಯದಲ್ಲಿ ಭಾಗವಾಗಿದ್ದ ಪ್ರದೇಶವಿದು. ೧೫೬೫ ರಲ್ಲಿ ವಿಜಯನಗರ ಸಾಮ್ರಾಜ್ಯದ ಪತನದ ನಂತರ ೧೯ ನೇ ಶತಮಾನದ ವರೆಗೆ ಪಾಳೇಗಾರರ ಆಳಿಕೆಯು ಪ್ರಬಲವಾಗಿತ್ತು. ೧೮ ನೇ ಮತ್ತು ೧೯ ನೇ ಶತಮಾನಗಳಲ್ಲಿ ಮಹಾರಾಷ್ಟ್ರರು, ನಿಜಾಮರು, ಮೈಸೂರಿನ ಹೈದರ್ ಆಲಿ, ಟೀಪುಸುಲ್ತಾನರು ಮತ್ತು ಪಿಂಡಾರಿಗಳ ಹಾವಳಿಯಿಂದ ಈ ಪ್ರದೇಶವು ಹಾಳಾಗಿ ಕೊನೆಗೆ ಬ್ರಿಟಿಶ್ ಹಿಂದುಸ್ಥಾನದಲ್ಲಿ ಸೇರ್ಪಡೆ ಹೊಂದಿತು. ಪಾಳೇಗಾರರಲ್ಲಿ ೧೫೬೫ ರಲ್ಲಿ ದಾದಯ್ಯನೆಂಬಾತನಿಂದ ಮೊದಲ್ಗೊಂಡು ೧೮೦೫ ರಲ್ಲಿ ಸೋಮಶೇಖರನಾಯಕನ ಆಳಿಕೆಯಿಂದ ಪಾಳೇಗಾರ ರಾಜ್ಯವು ಕೊನೆಗೊಂಡಿತು. ಇವರ ಕಾಲದಲ್ಲಿ ಅನೇಕ ರಾಜ್ಯವಿಸ್ತಾರಣ ಕಾರ್ಯಗಳು, ಸುತ್ತುಮುತ್ತಲಿನ ಚಿತ್ರದುರ್ಗದ ಮದಕರಿ ನಾಯಕ, ಉಚ್ಚಂಗಿ ದುರ್ಗದ ನಾಯಕರೊಡನೆ ಹೋರಾಟಗಳೂ ಆಗಿವೆ. ಪಾಳೇಗಾರರ ಆಳಿಕೆಯಲ್ಲಿ ಮುಖ್ಯಪಟ್ಟಣವಾದ ಹರಪನಹಳ್ಳಿಯಲ್ಲಿ ೧೨ ಉಕ್ಕಡಗಳೂ ೧೨ ಆಂಜನೇಯ ದೇವಸ್ಥಾನಗಳೂ ೧೨ ಗರಡೀ ಮನೆಗಳೂ ೧೨ ಮಸೀದೆಗಳೂ ಏರ್ಪಡಿಸಲ್ಪಟ್ಟವು. ಇದರಿಂದ ಇಲ್ಲಿ ಜಾತಿವೈಷಮ್ಯಕ್ಕೆ ಎಡೆ ಇರಲಿಲ್ಲವೆಂದು ಧಾರಳವಾಗಿ ಹೇಳಬಹುದು. ಬೇರೆ ಬೇರೆ ಕಾಯಕದವರಿಗೆ ಬೇರೆ ಬೇರೆ ಕೇರಿಗಳಿರುವದು ಈ ಊರಿನ ವೈಶಿಷ್ಟ್ಯ. ಇಲ್ಲಿ ಕಂದಕಗಳಿಂದ ಆವೃತವಾದ ನೆಲಕೋಟೆಯು ಕಟ್ಟಲ್ಪಟ್ಟಿತು. ತಿಮಲಾಪುರದ ದಾದಯ್ಯ, ಅರಸುಮನೆತನದ ಕುಲದೇವರಾದ ವೀರಭದ್ರಸ್ವಾಮಿ, ಉಚ್ಚಂಗಿ ದುರ್ಗದ ಉಚ್ಚಂಗೆಮ್ಮ ಮುಂತಾದ ದೇವಸ್ಥಾನಗಳು ಕಟ್ಟಲ್ಪಟ್ಟವು. ಅಂದಿನಿಂದ ಇಂದಿನ ವರೆಗೂ ಇಲ್ಲಿ

— ೬ ನೇ ಪುಟಕ್ಕೆ



ಇದು ಅವರ ಧಾರವಾಡದ ಮೊದಲ ಪ್ರವಾಸ. ಸಾಯಂಕಾಲದ ವೇಳೆ, ಕತ್ತಲೆಯು ಕವಿಯುತ್ತಿದೆ. ಇದಲ್ಲದೆ ಅಪರಿಚಿತ ಪ್ರದೇಶ. ಮೋಟಾರು ವೇಗದಿಂದ ಸಾಗಿದೆ. ಒಳಗೆ ಕುಳಿತ ದಂಪತಿಗಳು ಒಂದು ಸಂತೋಷ ಕೂಟಕ್ಕೆ ಹೋಗಬೇಕಾಗಿದೆ. ಅವರಿಗೆ ಎರಡು ಸಲ ದಾರಿತಪ್ಪಿದ್ದರಿಂದ ತಡವಾಗುವದೆಂದು ತಿಳಿದು ಪತಿಯು ಮೋಟಾರನ್ನು ವೇಗದಿಂದ ಹೊಡೆಯುತ್ತಿರುವನು. ವೇಗವು ಕ್ಷಣಕ್ಷಣಕ್ಕೆ ಹೆಚ್ಚುತ್ತಿರುವದು. ಒಂದು ಹೊರಳುವಿಕೆಯಲ್ಲಿ ದಾರಿಯ ಬದಿಗೆ "ಡಾಕ್ಟರ ನಿವಾಸ" ಎಂಬ ದಪ್ಪ ಅಕ್ಷರಗಳಿಂದ ಬರೆದ ಹಲಿಗೆಯು ಕಾಣಿಸಿತು. ಹಿಂದಿರುಗಿ ಬರುವಾಗ ದಾರಿಯು ತಪ್ಪಬಾರದೆಂದು ಅದನ್ನು ಪತಿಯು ಲಕ್ಷದಲ್ಲಿಟ್ಟುಕೊಂಡನು. ಮತ್ತು ಇಂಥ ನಿರ್ಜನ ಪ್ರದೇಶದಲ್ಲಿ "ಡಾಕ್ಟರ ನಿವಾಸ" ಇದು ಅವನಿಗೆ ಆಶ್ಚರ್ಯವನ್ನುಂಟು ಮಾಡಿತು. ಮೋಟಾರ ವೇಗವು ಹೆಚ್ಚುತ್ತಲೇ ಇತ್ತು.

ಮೋಟಾರು ಸುಮಾರು ಅರ್ಧ ಮೈಲು ಮುಂದೆ ಹೋಗಿರಲಿಕ್ಕಿಲ್ಲ. ಅಷ್ಟರಲ್ಲಿ ಸ್ಟೀರಿಂಗದಲ್ಲಿ ಯಾವದೊ ಹೆಚ್ಚು ಕಡಿಮೆಯಾಗಿ ಅದು ಒಮ್ಮೆಲೆ ಒಂದು ಗಿಡಕ್ಕೆ ಡಿಕ್ಕಿ ಹೊಡೆಯಿತು. ಗಂಡನಿಗೆ ವಿಶೇಷ ಗಾಯವಾಗಲಿಲ್ಲ. ನಾಲ್ಕಾರು ಫೂಟು ಅಂತರದಲ್ಲಿ ಬಿದ್ದ ಹೆಂಡತಿಯನ್ನು ಓಡುತ್ತ ಹೋಗಿ ನೋಡಿದ. ಅವಳಿಗೆ ಸ್ಮೃತಿ ಇರಲಿಲ್ಲ. ತಲೆಯಲ್ಲಿ ತೂತು ಬಿದ್ದು ರಕ್ತವು ಒಂದೇ ಸವನೆ ಹರಿಯುತ್ತಿತ್ತು. ಮೋಟಾರು ನಿರುಪಯೋಗಿಯಾಗಿ ಬಿದ್ದಿತ್ತು. ಸುತ್ತುಮುತ್ತು ಸಮೀಪದಲ್ಲಿ ಒಂದೂ ಮನೆಯಿಲ್ಲ ಆ ದಾರಿಯು. ಮೋಟಾರ ಓಡಾಟದ್ದೂ ಅಲ್ಲ. ಇದರಿಂದ ಅವನು ಎದೆಗುಂದಿದನು. ಒಂದು ನಿಮಿಷ ಅವನಿಗೆ ಏನೂ ತೋಚಲಿಲ್ಲ. ಕೂಡಲೇ "ಡಾಕ್ಟರ ನಿವಾಸ" ದ ನೆನಪಾಯಿತು. ಹೆಂಡತಿಯನ್ನು ಅದೇ ಅವಸ್ಥೆಯಲ್ಲಿ ಹೊತ್ತುಕೊಂಡು ಡಾಕ್ಟರನರನ್ನು ಹುಡುಕುತ್ತ ಓಡಹತ್ತಿದನು.

"ಡಾಕ್ಟರ ನಿವಾಸ" ಹಲಿಗೆಯ ಹತ್ತರ ಬಂದನು. ಸುತ್ತಲೆಲ್ಲ ಗಿಡಗಂಟಿಗಳಿಂದ ಮುಚ್ಚಿದ ಮನೆ, ಮಳೆಗಾಳಿಗಳ ಹೊಡತಕ್ಕೆ ಸಿಕ್ಕು ಮನೆಯ ಬಣ್ಣವೇ ಅಳಿದು ಹೋಗಿತ್ತು. ಸುತ್ತಲೆಲ್ಲ ಹುಲ್ಲು ಬೆಳೆದಿತ್ತು. ಬಾಗಿಲು ಮಾತ್ರ ತೆರೆದಿತ್ತು. ಮನೆಯ ಕಡೆಗೆ ನೋಡಿದರೆ ಇಲ್ಲಿ ಯಾರಾದರೂ ಇರಬಹುದೋ ಎಂಬ ಸಂದೇಹವು ಉಂಟಾಗುವಂತಿತ್ತು. ಅವನು ಅಂಜುತ್ತ ಅಂಜುತ್ತ ಬಾಗಿಲ ಬಳಿಯ ಬಿದ್ದ ಗಂಟೆಯನ್ನು ಬಾರಿಸಿದನು.

"ಓ ಬಂದೆ" ಎಂದು, ಉಗ್ರ ಮುಖಮುದ್ರೆಯ ಎತ್ತರವಾದ, ಗಟ್ಟಿಮುಟ್ಟಾದ ಒಂದು ವ್ಯಕ್ತಿಯು ಹೊರಗೆ ಬಂದಿತು.

"ಡಾಕ್ಟರರು ಇರುವರೇ?" ಎಂದು ಕೇಳಿದ.

"ಹಾ ನಾನೇ ಡಾಕ್ಟರ ಒಳಗೇ ಬರ್‍ರಿ" ಎಂದು ಡಾಕ್ಟರನು ನಗುತ್ತ ಹೇಳಿದ.

ಇಬ್ಬರೂ ಕೂಡಿ ಅವಳನ್ನು ಒಳಗೆ ಹೊತ್ತುಕೊಂಡು ಹೋದರು. ದೊಡ್ಡದಾದ ಕೋಣೆಯಲ್ಲಿ ಅಸ್ತವ್ಯಸ್ತವಾಗಿ ಬಿದ್ದ ಅನೇಕ ಮೇಜುಗಳಲ್ಲಿ ಒಂದನ್ನು ಎಳೆದು ಅದರ ಮೇಲೆ ಮಲಗಿಸಿದರು. ಅವಳಿಗೆ ಇನ್ನೂ ಸ್ಮೃತಿಯಿರಲಿಲ್ಲ. ಬಟ್ಟೆಗಳೆಲ್ಲ ರಕ್ತದಿಂದ ತೊಯ್ದು ಹೋಗಿದ್ದವು. ಡಾಕ್ಟರನು ಕೂಡಲೇ ತಪಾಸ ಮಾಡಲು ಸುರುವು ಮಾಡಿದ. ಗಂಡನ ಸುತ್ತು ಮುತ್ತು ನೋಡಿದರೆ ಹೆದರಿಯೇ ಬಿಟ್ಟ. ಕುರ್ಚಿ, ಮೇಜುಗಳಮೇಲೆಲ್ಲ ಧೂಳಿಯ ಥರ, ಅಲ್ಲಲ್ಲಿ ಪಕ್ಷಿಗಳ ಮಲಮೂತ್ರ ಮನೆಗೆ ಕಸಬರಿಗೆಯ ದರ್ಶನವಾಗದೆ ಎಷ್ಟೋ ವರ್ಷಗಳಾಗಿದ್ದವು ಅದಕ್ಕೆ ದವಾಖಾನೆಯನ್ನುವದಕ್ಕಿಂತ ಪುರಾತನ ಹಾಳು ದೇಗುಲ ಎಂದದ್ದರೆ ಹೆಚ್ಚು ಒಪ್ಪುತ್ತಿತ್ತು.

"ಇಲ್ಲಿ ನೋಡಿ ನಿಮ್ಮ ಹೆಂಡತಿಗೆ 'ಸ್ಕಲ್ ಫ್ರ್ಯಾಕ್ಚರ' ಆಗಿದೆ ಇದಕ್ಕೆ ಕೂಡಲೇ ಆಪರೇಶನ್ ಆಗಬೇಕು ಅಂದರೆ ಉಳಿಯುವ ಸಂಭವ" ಎಂದು ಡಾಕ್ಟರನು ಹೇಳಿಬಿಟ್ಟ.

"ಆಪರೇಶನ್" ಎಂಬ ಶಬ್ದ ಅವನ ಬಾಯಿಂದ ಹೆದರಿಕೆಯ ಧ್ವನಿಯಲ್ಲಿ ಹೊರಬಿತ್ತು.

"ಹೌದು ಅದು ಕೂಡ ಕೂಡಲೇ ಆಗಬೇಕು. ನೀವಂತೂ ಇದ್ದೇ ಇರುವಿರಿ. ಇಲ್ಲಿ ಮತ್ತೆ ಬೇರೆ ಯಾರೂ ಇಲ್ಲ" ಎಂದು ಹೇಳಿದ.

ಆಪರೇಶನ್ ಎಂದ ಕೂಡಲೇ ಅವನ ಎದೆಯು ಝುಲ್ ಎಂದಿತು. ಆ ದವಾಖಾನೆ, ಆ ಡಾಕ್ಟರನ ಅವತಾರ ನೋಡಿ "ಆಪರೇಶನ್ ಮಾಡಿರಿ" ಎಂದು ಹೇಳುವ ಧೈರ್ಯ ಅವನಿಗೆ ಆಗಲಿಲ್ಲ. ಆದರೆ ವಿಚಾರ ಮಾಡಲು ಸಹ ಸಮಯವಿಲ್ಲ. ಒಂದೊಂದು ನಿಮಿಷ ಕಳೆಯುವದೆಂದರೆ ಕಠಿಣ. "ಹೂ ತೆಗೆದುಕೊಳ್ಳಿರಿ. ಕ್ಲೋರೋಫಾರ್ಮ ಬಾಟ್ಲ" ಎಂದು ಡಾಕ್ಟರನು ಹೇಳಿಯೇ ಬಿಟ್ಟ.

ಆಳು ಮೋರೆಗೆ ಬಂದೆ ಪತಿಯು ಮರು ಮಾತಾಡದೆ ಯಂತ್ರದಂತೆ ಕ್ಲೋರೋಫಾರ್ಮ ಕೊಟ್ಟ. ಕೂಡಲೇ ಡಾಕ್ಟರನು ತೀಕ್ಷ್ಣವಾದ ಶಸ್ತ್ರವನ್ನು ಹೊರದೆಗೆದನು. ಈಗ ಮಾತ್ರ ಅವನಿಂದ ನೋಡುವದಾಗಲಿಲ್ಲ. ಕತ್ತರಿಸಿ ಬೀಳುವದರಲ್ಲಿದ್ದ. ಡಾಕ್ಟರನು ಅದನ್ನು ನೋಡಿ, -ನೀವು ಹೊರಗೆ ಹೋಗಿರಿ. ಇನ್ನು ಮೇಲೆ ನಿಮ್ಮ ಆವಶ್ಯಕತೆ ನನಗಿಲ್ಲ. ಶಸ್ತ್ರಕ್ರಿಯೆ ಮುಗಿದೊಡನೆ ಒದರುವೆ ಆ ಮೇಲೆ ಬರ್‍ರಿ ಎಂದ ಪತಿಯು ಹೊರಗೆ ಬಂದು ಆ ಭಯಾನಕ ಕೋಣೆಯಿಂದ ಹೊರಗೆ ಕಾಲಿಡುತ್ತಲೆ ಅವನಿಗೆ ಸ್ವಲ್ಪ ಆರಾಮವೆನಿಸಿತು.

ಮರುಕ್ಷಣದಲ್ಲಿಯೇ ಕೋಣೆಯ ಕಡೆಗೆ ಮನಸ್ಸೆಳೆಯಹತ್ತಿತು. ಯಾಕಂದರೆ ಒಳಗೆ ಶಸ್ತ್ರಕ್ರಿಯೆಯು ನಡೆದಿತ್ತು. ಆದರೆ ತಿರುಗಿ ಕೋಣೆಯ ಕಡೆಗೆ ಹೋಗುವ ಧೈರ್ಯವಾಗಲೊಲ್ಲದು. ಅವನ ಮೋರೆಯ ಮೇಲೆ ಹೆದರಿಕೆ ಹಾಗು ದುಃಖದ ಚಿನ್ಹಗಳು ಒಟ್ಟುಗೂಡಿ ಕಾಣುತ್ತಿದ್ದವು. ಹನಿದುಂಬಿದ ಕಣ್ಣುಗಳಿಂದ ಯಾವ ಕಡೆಗೊ ನೋಡುತ್ತ ಅವನು ಕಟಿಕಿಯ ಬಾಗಲ ಮುಂದೆ ಹೆಜ್ಜೆ ಹಾಕುತ್ತಿದ್ದನು.

ಇಷ್ಟರಲ್ಲಿ ದೂರಿಂದ ಯಾರೊ ಬರುತ್ತಿರುವಂತೆ ಭಾವಿಸಲಾಯಿತು. ಅವನು ಹಿಂದಿರುಗಿ ನೋಡಿದ. ನಿಜ! ಸುತ್ತಲಿನ ಗಿಡದ ಗುಂಪಿನೊಳಗಿಂದ ಅಡಗುತ್ತಾ ಅಡಗುತ್ತಾ ಇಬ್ಬರು ಮೂವರು ದವಾಖಾನೆಯ ಕಡೆಗೆ ಬರುತ್ತಿದ್ದರು. ಅವನು ಹೆದರಿದ. ಆ ಮೂವರಲ್ಲಿ ಇಬ್ಬರ ಕೈಯಲ್ಲಿ ಬಂದೂಕುಗಳಿದ್ದವು. ಮತ್ತೊಬ್ಬನ ಕೈಯಲ್ಲಿ ಹಗ್ಗವಿದ್ದಿತು. ಅವರು ಕೋಣೆಯಲ್ಲಿ ಹೊಗುವವರಿದ್ದರು. ಅಷ್ಟರಲ್ಲಿ ಒದರಿ— "ತಡೆಯಿರಿ ಸ್ವಲ್ಪ ತಡೆಯಿರಿ, ನನ್ನ ಹೆಂಡತಿಯ ಶಸ್ತ್ರಕ್ರಿಯೆ ನಡೆದದೆ. ನೀವು ಅದಕ್ಕೆ ಅಡ್ಡಿಯ

—೧೬ ನೇ ಪುಟಕ್ಕೆ

ಸಂಪಾದಕೀಯ ಟೀಕೆಟಿಪ್ಪಣಿಗಳು

ಅವಧಿಯಮೊದಲೆ ಅಧಿಕಾರ ತ್ಯಾಗ?

ಜೂನ ೧೯೪೮ ಕ್ಕೆ ಅಧಿಕಾರ ತ್ಯಾಗ ಮಾಡುವುದಾಗಿ ಬ್ರಿಟಿಶ್ ಸರಕಾರ ಘೋಷಿಸಿ ಅದರ ಸಿದ್ಧತೆ ನಡೆಸಿರುವದಷ್ಟೆ. ಆದರೆ ಅದರ ಪ್ರತ್ಯಕ್ಷ ಅಪ್ರತ್ಯಕ್ಷ ಪ್ರೋತ್ಸಾಹನೆಯಿಂದಲೆ ಜಟಿಲವಾಗುತ್ತ ನಡೆದ ಜಾತೀಯ ಸಮಸ್ಯೆ ಈಗಲೂ ಬಗೆಹರಿಯಲೊಲ್ಲದು. ಮುಸ್ಲಿಂ ಲೀಗಿನವರು ಬಲಾತ್ಕಾರದಿಂದ ಸ್ವಾರ್ಥವನ್ನು ಸಾಧಿಸಿಕೊಳ್ಳಬೇಕೆಂದು ಪ್ರಯತ್ನಿಸುತ್ತಿರುವರು. ಪಾಕಿಸ್ತಾನವನ್ನು ಪಡೆದೇ ತೀರಬೇಕೆಂದು ಕೊಲೆ ಸುಲಿಗೆ ಕೊಳ್ಳಿಗಳಂಥ ನಿಂದ್ಯ ಕೃತ್ಯಗಳನ್ನೂ ಒಂದೇ ಸವನೆ ನಡೆಸಿರುವರು. ಇದನ್ನೆಲ್ಲ ಹೋಗಲಾಡಿಸಿ ಜಾತೀಯ ಸಮಸ್ಯೆಯಲ್ಲಿ ಕಾಂಗ್ರೆಸ್ ಲೀಗಗಳಲ್ಲಿ ಒಡಂಬಡಿಕೆಯನ್ನುಂಟು ಮಾಡಬೇಕೆಂದು ವೈಸರಾಯ ಲಾರ್ಡ ಲುಯಿ ಮೌಂಟಬ್ಯಾಟನ್‌ರು ಯೋಜನೆಯೊಂದನ್ನು ಬ್ರಿಟಿಶ್ ಸರಕಾರಕ್ಕೆ ಕಳಿಸಿರುವರೆಂಬು ತಿಳಿಯುತ್ತದೆ. ಲಾರ್ಡ ಇಸ್ಮೆಯವರ ಸಂಗಡ ಕಳಿಸಿದ ಸಂದೇಶದಲ್ಲಿ ವೈಸರಾಯರು ಜೂನ ೧೯೪೮ ಕ್ಕಿಂತ ಮೊದಲೆ ಹಿಂದೀಯರಿಗೆ ಅಧಿಕಾರ ಒಪ್ಪಿಸಿಬಿಡಬೇಕೆಂಬ ಸೂಚನೆಯನ್ನು ಮಾಡಿರುವರೆಂದೂ ಸುದ್ದಿ. ವೈಸರಾಯರು ಅಖಂಡ ಹಿಂದುಸ್ತಾನದಲ್ಲಿಯೆ ವಿಶ್ವಾಸವುಳ್ಳವರಿದ್ದು ಪಾಕಿಸ್ತಾನದಲ್ಲಿ ಅವರ ನಂಬುಗೆಯಿಲ್ಲೆಂದೂ ಹೇಳಲಾಗುತ್ತದೆ. ಆದರೂ ಜಾತೀಯ ಸಮಸ್ಯೆಯನ್ನು ಬಿಡಿಸಲು ಅವರ ಹಂಬಲ. ತಾವು ಕಳಿಸಿದ ಸೂಚನೆಗಳಿಗೆ ಬ್ರಿಟಿಶ ಸರಕಾರದ ಒಪ್ಪಿಗೆ ದೊರೆತ ಕೂಡಲೆ ಆ ಸೂಚನೆಗಳನ್ನು ಚರ್ಚಿಸಲು ಅವರು ಮುಸ್ಲಿಂ ಲೀಗ ಮುಂದಾಳುಗಳ ದುಂಡುಮೇಜಿನ ಪರಿಷತ್ತನ್ನು ಕರೆಯುವರಂತೆ. ಸಂರಕ್ಷಣ ವಿಷಯದಲ್ಲಿ ಕಾಂಗ್ರೆಸಲೀಗುಗಳಲ್ಲಿ ಒಮ್ಮತವಾಗುವಂತೆಯೂ ಪ್ರಯತ್ನಿಸುತ್ತಿರುವರಂತೆ. ಈ ಸುದ್ದಿಯಲ್ಲಿ ತಥ್ಯಾಂಶವಿದ್ದರೆ ಸ್ವಾಗತಾರ್ಹವೇ ಆಗಿದೆಂದು ಹೇಳಬಹುದು. ಬ್ರಿಟಿಶ್ ಸರಕಾರದ ಈ ವರೆಗಿನ ಧೋರಣವನ್ನು ನೋಡಿದರೆ ಅವರಿಲ್ಲಿರುವವರೆಗೆ ಹಿಂದುಸ್ತಾನದ ಸಮಸ್ಯೆ ಬಗೆಹರಿಯಲಾರದೆಂಬದು ಸ್ಪಷ್ಟ. ಆ ದೃಷ್ಟಿಯಿಂದ ಬ್ರಿಟಿಶ್ ಸರಕಾರ ಅವಧಿಗಿಂತ ಮೊದಲೆ ಅಧಿಕಾರ ತ್ಯಾಗ ಮಾಡಿ ಹೊರಟರೂ ಇಷ್ಟವೆ. ಅನಂತರ ಹಿಂದೂ ಮುಸಲ್ಮಾನರು ತಮ್ಮ ಸಮಸ್ಯೆಯನ್ನು ಸೌಹಾರ್ದಭಾವದಿಂದ ಬಿಡಿಸಲು ಅವಕಾಶವುಂಟಾಗುತ್ತದೆ. ಬ್ರಿಟಿಶ ಸರಕಾರ ಅಧಿಕಾರ ತ್ಯಾಗದ ಸಿದ್ಧತೆ ನಡೆಸಿರುವಾಗಲೆ ಗಾಂಧಿ-ಜಿನ್ನಾರಲ್ಲಿ ಹಿಂದೀ ರಾಜಕಾರಣದಲ್ಲಿ ಒಡಂಬಡಿಕೆಯ ಪ್ರಯತ್ನಗಳೂ ನಡೆದಿವೆ. ಮಹಾತ್ಮಾ ಗಾಂಧಿಯವರು ಬ್ಯಾ. ಜಿನ್ನಾರವರೊಡನೆ ೬ ನೇ ತಾರೀಖು ವಿಚಾರವಿನಿಮಯ ಮಾಡಿದರು. ೨-೪೫ ಗಂಟೆಗಳ ವರೆಗೆ ನಡೆದ ಈ ಸಂಭಾಷಣೆಯಲ್ಲಿ ಹಿಂದುಸ್ತಾನದ ರಾಜಕೀಯ ಸಮಸ್ಯೆ ಚರ್ಚಿಸಲಾಯಿತಂತೆ. ಈ ಸಂದರ್ಶನದ ನಂತರ ಬ್ಯಾ. ಜಿನ್ನಾರು ಗಾಂಧೀಜಿಯ ಒಪ್ಪಿಗೆಯಿಂದ ಹೊರಡಿಸಿದ ಪ್ರಕಟನೆಯಿಂದ ಸಂಭಾಷಣೆ ಅಯಶಸ್ವಿಯಾಯಿತೆಂಬುದು ಸ್ಪಷ್ಟವಾಗುತ್ತದೆ. ಹಿಂದುಸ್ತಾನದ ಜಾತೀಯ ಮತ್ತು ರಾಜಕೀಯ ಸಮಸ್ಯೆಯಿಂತು ಆಸೆ—ನಿರಾಸೆಯ ತಕ್ಕಡಿಯಲ್ಲಿ ಹೊಯ್ದಾಡುತ್ತಿರುವದು.

ಪಂಜಾಬ—ಬಂಗಾಲ ವಿಭಜನೆ

ಮುಸ್ಲಿಂಲೀಗಿನ ಧುರೀಣರಾದ ಬ್ಯಾ. ಜಿನ್ನಾಸಾಹೇಬರು ಪಾಕಿಸ್ತಾನದ ಬಗ್ಗೆ ಇಷ್ಟೊಂದು ಆಸ್ಥೆ ತಾಳಿದ್ದರೂ ಯಾವ ತತ್ವದನ್ವಯ ಅದನ್ನು ಬೇಡುತ್ತಿರುವರೊ ಆ ತತ್ವವನ್ನು ಪ್ರಾಂತಗಳಿಗೂ ಅನ್ವಯಿಸಲು ಸಿದ್ಧರಿಲ್ಲ. ಮುಸಲ್ಮಾನ ಬಹುಮತವನ್ನು ಮುಂದೆ ಮಾಡಿ ಅವರು ಪಂಜಾಬ ಮತ್ತು ಬಂಗಾಲಗಳನ್ನು ಪಾಕಿಸ್ತಾನದಲ್ಲಿ ಬೇಡುತ್ತಿರುವರು. ಆದರೆ ಆ ಪಂಜಾಬ ಬಂಗಾಲಗಳಲ್ಲಿಯೆ ಬಹುಮತದಲ್ಲಿರುವ ಹಿಂದೂ ಮತ್ತು ಶೀಖರ ಭಾಗಗಳನ್ನು ಪ್ರತ್ಯೇಕಿಸಿ ಸ್ವತಂತ್ರ ಪ್ರಾಂತ ಕೊಡಲು ಲೀಗು ಸಿದ್ಧವಿಲ್ಲ. ಹೀಗೆ ಮಾಡಿದರೆ ಅಶಾಂತಿ, ಕೊಲೆ, ಸುಲಿಗೆಗಳು ನಡೆಯಬಲ್ಲವೆಂದೂ ಪರಿಸ್ಥಿತಿ ಅತ್ಯಂತ ಭೀಕರವಾಗುವದೆಂದೂ ಜಿನ್ನಾರವರು ಅಭಿಪ್ರಾಯಪಟ್ಟಿರುವರು. ಅವರ ಅನುಯಾಯಿಗಳಾದ ಆ ಎರಡೂ ಪ್ರಾಂತಗಳಲ್ಲಿನ ಲೀಗ ಧುರೀಣರೂ ಜಿನ್ನಾರವರ ಪಲ್ಲವಿಯನ್ನು ಹಾಡುತ್ತಿರುವರು. ಪಂಜಾಬ ಬಂಗಾಲಗಳ ಮುಸಲ್ಮಾನೇತರ ಭಾಗಗಳನ್ನು ಪ್ರತ್ಯೇಕಿಸುವದು ಅವಶ್ಯವೆಂದು ಬಂಗಾಲದ ವಿದ್ವಜ್ಜನರು ವೈಸರಾಯರಿಗೆ ಮನವಿಯೊಂದನ್ನು ಮಾಡಿಕೊಂಡಿರುವರು. ಈ ಎರಡೂ ಪ್ರಾಂತಗಳಲ್ಲಿಯೂ ಕಾಂಗ್ರೆಸ ಸಮಿತಿಗಳು ಈ ಬಗೆಯ ನಿರ್ಣಯವನ್ನು ಮಾಡಿರುವವು. ಎಲ್ಲ ಜಾತಿಯವರ ಸೌಹಾರ್ದ ಬಾಂಧವ್ಯದಿಂದ ಹಿಂದುಸ್ತಾನ ಅಖಂಡವಾಗಿಯಾದರೂ ಉಳಿಯಬೇಕು. ಇಲ್ಲವಾದರೆ ಬಹುಜನರ ಅಭಿಪ್ರಾಯದ ಮೇರೆಗೆ ಪ್ರಾಂತಗಳ ಪುನರ್ವಿಭಜನೆಯಾಗಿ ಪಾಕಿಸ್ತಾನವನ್ನು ಪ್ರಸ್ಥಾಪಿಸಬೇಕು. ಒಂದು ಬಾಯಿಗೆ ಬೆಣ್ಣೆ ಮತ್ತೊಂದು ಬಾಯಿಗೆ ಸುಣ್ಣವೆಂಬ ಧೋರಣೆಯಿಂದ ಉದಿಷ್ಟವೆಂದಿಗೂ ಸಾಧ್ಯವಾಗದು ಶಾಂತಿಯೂ ಪ್ರಸ್ಥಾಪಿತವಾಗದು.

ಗಡಿನಾಡಿನ ಸಮಸ್ಯೆ

ಗಡಿನಾಡಿನ ಸಮಸ್ಯೆ ಇದಕ್ಕೂ ಭೀಕರವಾಗಿದೆ. ಗಡಿನಾಡಿನಲ್ಲಿ ಕಾಂಗ್ರೆಸ್ಸಿನ ನಿಚ್ಚಳ ಬಹುಮತವಿದ್ದು ಕಾಂಗ್ರೆಸ ಮಂತ್ರಿಮಂಡಳವು ಆಡಳಿತವನ್ನು ಸಾಗಿಸುತ್ತ ಬಂದಿದೆ. ಈ ವರೆಗೆ ಅತ್ಯಂತ ಶಾಂತತೆಯಿಂದ ಇದ್ದ ಆ ಪ್ರಾಂತ ವಿಂದು ಅಶಾಂತಿಯ ಬೀಡಾಗಿದೆ. ಅಶಾಂತಿಯ ಬೆದರಿಕೆಯಿಂದ ಖಿಜರ ಹಯಾತಖಾನರನ್ನು ರಾಜೀನಾಮೆ ಕೊಡಹಚ್ಚುವಲ್ಲಿ ಯಶಸ್ವಿಗಳಾದ ಲೀಗ ಧುರೀಣರು ಗಡಿನಾಡಿನಲ್ಲಿಯೂ ಇದೇ ಧೋರಣದಿಂದ ಯಶಸ್ಸು ಪಡೆಯಬಯಸಿರುವರು. ಆದರೆ ಗಡಿನಾಡಿನಮಂತ್ರಿಮಂಡಳವು ಖಿಜರ ಮಂತ್ರಿಮಂಡಳದಷ್ಟು ಪೊಳ್ಳಿದಲ್ಲದ್ದರಿಂದ ಅದು ರಾಜೀನಾಮೆ ಕೊಡಲಿಲ್ಲ. ಪರಿಸ್ಥಿತಿಯನ್ನೆದುರಿಸುತ್ತಿರುವದು. ಸರಹದ್ದದಲ್ಲಿಯ ಲೀಗ ಪುಂಡಾಟಿಕೆಗೆ ಬ್ರಿಟಿಶ ಸರಕಾರದ ಅರ್ಥಾತ್ ಅಲ್ಲಿನ ಗವರ್ನರರಾದ ಸರ್ ಓಲ್ಯಾಫ ಕ್ಯಾರೋರವರ ಪ್ರೋತ್ಸಾಹನೆ ಬೆಂಬಲವಿದ್ದುದರಿಂದ ಅದು ಬೇಗ ಹತ್ತಿಕ್ಕಲ್ಪಡಲೊಲ್ಲದು. ಗವರ್ನರರ ಈ ಕುಚೋದ್ಯತನದಿಂದ ಅಧಿಕಾರಿಗಳು ಮಂತ್ರಿಮಂಡಳದ ಆಜ್ಞೆಯನ್ನು ಕೂಡ ಪಾಲಿಸದಷ್ಟು ಅವಿಧೇಯರಾಗಿರುವರು. ಅತ್ಯಂತ ಸಮತೂಕ ಬುದ್ಧಿಯ ಅಹಿಂಸಾಮೂರ್ತಿಗಳಾದ ಖಾನಅಬ್ದುಲ್ ಗಫರಖಾನರಂಥವರೂ ಈ ಬಗೆಯ ಪಕ್ಷಪಾತತನದ ಆರೋಪವನ್ನು ಕ್ಯಾರೋರವರ ಮೇಲೆ ಹೊರಿಸಿರುವರೆಂದ ಬಳಿಕ ಅದರಲ್ಲಿ ಬಹ್ವಂಶ ಸತ್ಯವಾಗಿರಲು ಸಾಕೆಂಬುದು ನಿರ್ವಿವಾದವಾಗಿದೆ. ಅದೇರೀತಿ ಜುಗಲ್‌ಕಿಶೋರ ಮತ್ತು ದಿವಾಣ ಚಮನಲಾಲರೂ ಪ್ರಾಂತದಲ್ಲೆಲ್ಲ ಸಂಚರಿಸಿ ಪರಿಸ್ಥಿತಿಯನ್ನೆಲ್ಲ ತಿಳಿದುಕೊಂಡು ಗವರ್ನರ ಮತ್ತು ಅಧಿಕಾರಿಗಳ ಮೇಲೆ ಆರೋಪಗಳ ಪಟ್ಟಿಯೊಂದನ್ನು ಸಿದ್ಧಪಡಿಸಿರುವರು. ಖಾನಸಾಹೇಬರ ಮಂತ್ರಿಮಂಡಳವನ್ನುರುಳಿಸಿ ತಮ್ಮ ಕೈಗೊಂಬೆ ಲೀಗ ಮಂತ್ರಿಮಂಡಳವನ್ನು ಸ್ಥಾಪಿಸಬೇಕೆಂದು ಅವರು ಯುಕ್ತಿಪ್ರಯುಕ್ತಿಗಳನ್ನು ನಡೆಸಿರುವರೆಂದು ಅವರ ಅಭಿಪ್ರಾಯ. ಈ ಪರಿಸ್ಥಿತಿಯಲ್ಲಿ ಗವರ್ನರ ಕ್ಯಾರೋರವರನ್ನು ಮನೆಗೆ ಕಳಿಸುವವರೆಗೆ ಗಡಿನಾಡಿನ ಸಮಸ್ಯೆ ಬಗೆಹರಿಯಲಾರದೆಂಬುದು ಸುಸ್ಪಷ್ಟವಿದೆ. ಲೀಗ ಪುಂಡಾಟಿಕೆಯನ್ನು ಹತ್ತಿಕ್ಕುವುದೇನು. ಗಡಿನಾಡ ಮಂತ್ರಿಮಂಡಳಕ್ಕೆ ಅಸಾಧ್ಯವಿರಲಿಲ್ಲ. ಆದರೆ ಮೇಲೆ ಹೇಳಿದಂತೆ ಗವರ್ನರರ ಮತ್ತು ಅಧಿಕಾರಿಗಳ ಸಹಾಯವಿಲ್ಲದ್ದರಿಂದ ಪರಿಸ್ಥಿತಿ ಹಿಡಿತದಲ್ಲಿ ಬರದಂತಾಗಿದೆ. ಗವರ್ನರರ ಬೆಂಬಲ ತಪ್ಪಿದ್ದಾದರೆ ಯಾವ ಅಧಿಕಾರಿಗಳೂ ಮಂತ್ರಿಮಂಡಳದ ಆಜ್ಞೆಯನ್ನು ಮೀರಲು ಧೈರ್ಯ ಮಾಡರು. ಅದುದರಿಂದ ಗವರ್ನರರನ್ನು ಮನೆಗೆ ಕಳಿಸಿಯೇ ಈ ಸಮಸ್ಯೆಯನ್ನು ಬಗೆಹರಿಸಬೇಕು.

ಜಿನ್ನಾರ ಪ್ರಕಟನೆ

ಮುಸ್ಲಿಂ ಲೀಗಿನ ಬ್ಯಾ. ಜಿನ್ನಾ ಸಾಹೇಬರು ಗಡಿನಾಡಿನ ಬಗ್ಗೆ ಸುದೀರ್ಘ ಪ್ರಕಟನೆ ಹೊರಡಿಸಿ ಬ್ರಿಟಿಶ್ ಸರಕಾರದವರು ಕೂಲಂಕಷವಾಗಿ ಗಡಿನಾಡಿನ ಸಮಸ್ಯೆಯ ವಿಚಾರ ನಡೆಸಿರುವದರಿಂದ ಎಲ್ಲರೂ ಶಾಂತರೀತಿಯಿಂದ ವರ್ತಿಸಬೇಕೆಂದು ಕೇಳಿಕೊಂಡಿರುವರು. ಸುಮಾರು ಎರಡು ತಿಂಗಳವರೆಗೆ ಗಡಿನಾಡಿನಲ್ಲಿ ಅನಿರ್ಬಂಧ ಅಶಾಂತಿಗೆ ಅವಕಾಶ ಕೊಟ್ಟು ಮಂತ್ರಿಮಂಡಳ ಉರುಳಿಸದೆ ಗತ್ಯಂತರವಿಲ್ಲೆಂದು ಬ್ರಿಟಿಶ ಸರಕಾರದ ಕಿವಿಯೂದಿ ಜಿನ್ನಾ ಸಾಹೇಬರು ಈಗ ಶಾಂತಿಯ ಪಾಠತನ್ನೆತ್ತಿರುವರು. ಅತ್ಯಂತ ಶಾಂತವಾಗಿದ್ದ ಸರಹದ್ದದಲ್ಲಿ ಲೀಗಿನವರು ಪುಂಡಾಟಿಕೆಯನ್ನು ಪ್ರಾರಂಭಿಸಿದ ಕೂಡಲೆ ಜಿನ್ನಾರವರು ಇಂಥ ಪ್ರಕಟನೆ ಹೊರಡಿಸಿದ್ದರೆ ಇಷ್ಟೆಲ್ಲ ಅನರ್ಥ ತಪ್ಪುತ್ತಿದ್ದಿತು. ಮೇಲೆ ಹೇಳಿದಂತೆ ಪಂಜಾಬಿನಲ್ಲಿಯ ಯಶಸ್ಸು ಪಡೆದ ಮಾರ್ಗದಿಂದಲೆ ಗಡಿನಾಡಿನಲ್ಲಿಯೂ ಯಶಸ್ಸು ಪಡೆಯಬೇಕೆಂದು ಲೀಗಿನವರು ಇಷ್ಟೆಲ್ಲ ಅನನ್ವಿತ ಕೃತ್ಯಗಳನ್ನು ನಡೆಸಿರುವರು. ಕಳೆದ ಚುನಾವಣೆಗಳಲ್ಲಿ ಮಣ್ಣು ಮುಕ್ಕಿದ ಲೀಗಿನವರು ಹೊಸ ಚುನಾವಣೆಯಲ್ಲಿ ಯಶಸ್ಸು ಪಡೆಯುವರಂತೆ! ಅದಕ್ಕಾಗಿ ಹೊಸ ಚುನಾವಣೆಗಳನ್ನು ಬೇಡುತ್ತಿರುವರು. ಅವಿಧೇಯ ಅಧಿಕಾರಿಗಳ ಬೆಂಬಲ ಪಡೆದ ಚುನಾವಣೆಗಳಲ್ಲಿ ಹಸ್ತಕ್ಷೇಪ ಮಾಡಿ ಯಶಸ್ಸು ಸಂಪಾದಿಸಬೇಕೆಂದು ಅವರ ಹಂಬಲ. ಕೊಲೆ,ಸುಲಿಗೆಗಳು ನಡೆದಿರುವ ಈಪರಿಸ್ಥಿತಿಯಲ್ಲಿ ಚುನಾವಣೆಗಳದೆಂತು ಸಾಗಬೇಕೊ ತಿಳಿಯದು. ಹೀಗೆ ಚುನಾವಣೆಯನ್ನು ಬೇಡುವಾಗ ಜಿನ್ನಾಸಾಹೇಬರು ಮಂತ್ರಿಮಂಡಳದ ಮೇಲೆ ಸಲ್ಲದಆರೋಪಗಳನ್ನು ಮಾಡ್ಡಿರುವರು. ಜಾತ್ಯತೀತ ಚಳವಳಿಯನ್ನು ನಡೆಸಲೂ ಅವರು ಕೇಳಿಕೊಂಡಿರುವರು. ದೇಶದಲ್ಲಿ ನಡೆದ ಈ ಜಾತ್ಯಂಧ ಚಳವಳಿಗೆ ಪ್ರತ್ಯಕ್ಷ ಅಪ್ರತ್ಯಕ್ಷ ರೀತಿಯಿಂದ ಪ್ರೋತ್ಸಾಹನೆ ಕೊಡುತ್ತಿರುವ ಲೀಗಧುರೀಣರು ಜಾತ್ಯತೀತ ಚಳವಳಿ ನಡೆಸಿರೆಂದು ಬೋಧಿಸುವದು ಆ ಸತ್ಯದ ಪರಿಹಾಸವೆ ಸೈ. ಬ್ರಿಟಿಶ ಸರಕಾರದವರು ಈ ಸಮಯದಲ್ಲಿ ಪರಿಸ್ಥಿತಿಯನ್ನು ಚೆನ್ನಾಗಿ ತಿಳಿದುಕೊಂಡು ಪ್ರಾಂತಕ್ಕೆ ಹಿತಕಾರಕವಾದ ನಿರ್ಣಯವನ್ನೆ ಕೈಕೊಳ್ಳಬೇಕಲ್ಲದೆ ಲೀಗನವರ ಪುಂಡಾಟಿಕೆಗೆ ಬೆದರಿ ಮಂತ್ರಿಮಂಡಳದ ರಾಜೀನಾಮೆ ಚುನಾವಣೆ ಮೊದಲಾದ ಅಕ್ರಮಗಳಿಗೆ ಕೈಯಿಕ್ಕಿದರೆ ಪರಿಸ್ಥಿತಿ ಮತ್ತಷ್ಟು ಗಂಡಾಂತರದ್ದಾಗುವದೆಂಬುದು ನಿಶ್ಚಿತ. ಖಾನಅಬ್ದುಲ್ ಗಫರಖಾನರೂ ಚುನಾವಣೆಯನ್ನು ಹೂಡಿ ರಕ್ತಪಾತಕ್ಕವಕಾಶಕೊಡಬೇಡಿರೆಂದು ಎಚ್ಚರಿಕೆ ಕೊಟ್ಟದ್ದು ಸಕಾಲಿಕವಾಗಿದೆ.

ಆಸಾಮದ ಮೇಲೆ ದಾಳಿ?

ಮುಸ್ಲಿಂ ಲೀಗಿನ ಈ ಚಳವಳಿ ಕೇವಲ ಕೊಲೆ ಸುಲಿಗೆ ಅತ್ಯಾಚಾರಗಳಿಗೆ ನಿಲ್ಲುವಂತೆ ತೋರುವುದಿಲ್ಲ. ಸಶಸ್ತ್ರ ದಾಳಿ ಮಾಡಿ ಪ್ರಾಂತಗಳನ್ನು ವಶಪಡಿಸಿಕೊಳ್ಳಬೇಕೆಂಬ ಹವಣಿಕೆಯೂ ಅದರಿದಿದೆಂಬುದು ಆಸಾಮದ ಮೇಲೆ ಅದು ಮಾಡಬೇಕೆಂಬ ದಾಳಿಯ ಯೋಜನೆಯಿಂದ ಗೊತ್ತಾಗುವದು. ಆಸಾಮದ ಮೇಲೆ ಬಂಗಾಲದಿಂದ ದಾಳಿಯನ್ನು ಹೂಡಿ ಅದನ್ನು ವಶಪಡಿಸಿಕೊಂಡು ಲೀಗ ರಾಜ್ಯವನ್ನುಪ್ರಸ್ಥಾಪಿಸಬೇಕೆಂದು ಯುಕ್ತಿ ಪ್ರಯುಕ್ತಿಗಳನ್ನು ಲೀಗಿನವರು ನಡೆಸಿರುವರು. ಆಸಾಮದಲ್ಲಿಯ ಮುಸ್ಲಿಂ ಬಹುಸಂಖ್ಯಾಕ ಭಾಗವನ್ನು ಲೀಗು ಬೇಡಬಹುದು ಆದರೆ ಇಡೀ ಆಸಾಮವನ್ನೆ ಗಿಳಂಕೃತ ಮಾಡಲು ಪ್ರಯತ್ನಿಸುವದು ಯಾವ ರೀತಿಯಿಂದಲೂ ನ್ಯಾಯ್ಯವಾಗದು. ಮುಸ್ಲಿಂ ಲೀಗಿನ ಈ ಯೋಜನೆಯನ್ನು ಎಲ್ಲ ರೀತಿಯಿಂದಲೂ ಎದುರಿಸುವುದಾಗಿ ಮುಖ್ಯ ಮಂತ್ರಿ ಬಾರ್ಡೋಲಾಯರವರು ಸಾರಿದ್ದಾರೆ. ಪ್ರಾಂತದ ಮುಸ್ಲಿಂ ಲೀಗೇತರ ಜನರದೆಲ್ಲ ಬೆಂಬಲ ಅವರಿಗೆ ಸಿಕ್ಕುವುದೆಂಬುದು ಖಂಡಿತ. ಹರಿಜನ ವರ್ಗದ ಸಭೆ ಮೊನ್ನೆ ಮೊನ್ನೆ ಜರಗಿದಾಗ ಬಾರ್ಡೋಲಾಯ ಮಂತ್ರಿಮಂಡಳಕ್ಕೆ ಸಂಪೂರ್ಣ ಸಹಕಾರವನ್ನು ನೀಡುವ ಮತ್ತು ಲೀಗಿನ ದಾಳಿಯನ್ನೆದುರಿಸುವ ಗೊತ್ತುವಳಿ ಸ್ವೀಕೃತವಾದವು. ಮುಖ್ಯ ಮಂತ್ರಿಗಳಾದ ಬಾರ್ಡೋಲಾಯರವರು ಲೀಗ ಧುರೀಣರಾದ ಸಾದುಲ್ಲಾರವರೊಡನೆ ಮಾಡಿಕೊಂಡ ಒಪ್ಪಂದವನ್ನು ಪ್ರಾಂತಿಕ ಲೀಗಿನವರು ಒಪ್ಪಲಿಲ್ಲ. ಇದರಿಂದ ಪರಿಸ್ಥಿತಿ ಮತ್ತಷ್ಟು ಕಠಿನವಾಗಿದೆ. ಇಲ್ಲಿಯೂ ತಮ್ಮ ಪಾಶವೀ ಅತ್ಯಾಚಾರದಿಂದ ಕಾಂಗ್ರೆಸನ್ನು ಮತ್ತು ಲೀಗೇತರರನ್ನೆಲ್ಲ ಹತ್ತಿಕ್ಕಬೇಕೆಂದು ಲೀಗಿನವರು ಬಗೆದಿರುವರು. ಈ ಬಗೆಯ ಧೋರಣೆಯಿಂದ ಉದ್ದಿಷ್ಟ ಸಾಧಿಸಲಾರದೆಂದು ಲೀಗಿನವರು ಬೇಗ ತಿಳಿದಷ್ಟು ಒಳಿತು.

ಸ್ವಾಗತಾರ್ಹ ಪ್ರಕಟನೆ

ಮೈಸೂರು ಸಂಸ್ಥಾನಪ್ರಗತಿಪರವೆಂದು ಹೇಳಿಕೊಳ್ಳುತ್ತಿದ್ದರೂ ರಾಜಕೀಯ ಹಕ್ಕು ಬಾಧ್ಯತೆಗಳನ್ನು ದಯಪಾಲಿಸುವಲ್ಲಿ ಬಹಳ ಸಂಕುಚಿತ ವೃತ್ತಿಯನ್ನು ತಳೆದಿದೆಯೆಂಬುದು ಈವರೆಗಿನ ಅನುಭವದಿಂದ ಹೇಳಬೇಕಾಗಿದೆ. ಅಂತೆಯೆ ಮೈಸೂರ ಕಾಂಗ್ರೆಸ್ಸಿನವರು ನಾಗರಿಕ ಸ್ವಾತಂತ್ರ್ಯಕ್ಕಾಗಿ ಎರಡು ಮೂರು ಸಲ ಸತ್ಯಾಗ್ರಹ ಹೂಡುವ ಪ್ರಸಂಗ ಬಂದಿತು. ಈ ಸಲವಾದರೂ ಮೇ ೧ ರಿಂದ ಮತ್ತೆ ಸಂಸ್ಥಾನದಲ್ಲೆಲ್ಲ ಸತ್ಯಾಗ್ರಹ ಪ್ರಾರಂಭವಾಗುವದಿದ್ದಿತು ಆದರೆ ಶ್ರೀ ಮಹಾರಾಜರ ಘೋಷಣೆಯಂತೆ ದಿವಾಣ ಸಾಹೇಬರು ಕಾಂಗ್ರೆಸ ಅಧ್ಯಕ್ಷರೊಡನೆ ವಿಚಾರವಿನಿಮಯ ನಡಿಸಿ ಹೊಸ ಸುಧಾರಣೆಗಳ ಬಗೆಗೆ ಪ್ರಕಟನೆಯೊಂದನ್ನು ಹೊರಡಿಸಿರುವರು. ಆ ಪ್ರಕಟನೆಯ ಸಾರವನ್ನು ಕಳೆದ ಸಂಚಿಕೆಯಲ್ಲಿಯೆ ಪ್ರಕಟಿಸಿದ್ದೇವೆ. ಮೈಸೂರು ಸರಕಾರದವರು ಸಂಸ್ಥಾನದ ರಾಜಕಾರಣವನ್ನು ಪರಿಹರಿಸಲು ಅಧಿಕೃತ ಪ್ರಕಟನೆಯೊಂದನ್ನು ಹೊರಡಿಸಿದ್ದು ಅಭಿನಂದನೀಯವಾಗಿದೆ. ಸಂಸ್ಥಾನ ಕಾಂಗ್ರೆಸ್ಸಿನವರಾದರೂ ದಿವಾಣ ಸಾಹೇಬರ ಪ್ರಕಟನೆಯನ್ನನುಲಕ್ಷಿಸಿ ಸತ್ಯಾಗ್ರಹಾಸ್ತ್ರವನ್ನು ಉಪಸಂಹರಿಸಿದ್ದೂ ಉಚಿತವೇ ಆಯಿತು. ಸಂಸ್ಥಾನದ ಸಾರ್ವಾಂಗೀಣ ಉನ್ನತಿಯಾಗಬೇಕಾಗರೆ ರಾಜಕೀಯ ಪರಿಸ್ಥಿತಿ ಶಾಂತವಿರಬೇಕಾದುದು ಅತ್ಯವಶ್ಯವೆಂದು ಬೇರೆ ಹೇಳಬೇಕಾಗಿಲ್ಲ. ಎಲ್ಲರಿಗೂ ಸಮಾನ ಸಂಧಿ ಸೌಕರ್ಯಗಳನ್ನೊದಗಿಸಿಕೊಡಲಾಗುವದೆಂದು ದಿವಾಣ ಸಾಹೇಬರು ಆಶ್ವಾಸನ ಕೊಟ್ಟದ್ದು ಸಂತೋಷಪ್ರದವಾಗಿದೆ. ಆದರೆ ದಿವಾಣರ ಪ್ರಕಟನೆಯಲ್ಲಿ ರೂಪಿಸಲ್ಪಟ್ಟ ಸುಧಾರಣೆಯ ಚಿತ್ರ ಅಷ್ಟೊಂದು ನಿಚ್ಚಳವಾಗಿಲ್ಲೆಂದು ಹೇಳಲು ವಿಷಾದಿಸುತ್ತೇವೆ. ಶಾಸನ ಸಭೆಗೆ ಒಳಪಟ್ಟ ಮಂತ್ರಿಮಂಡಳ ರಚಿತವಾಗುತಿದೆಂದು ಸಾರಿದ್ದಾರೆ. ಆ ಮಂತ್ರಿಗಳ ಹೊಣೆಗಾರಿಕೆ ಅಧಿಕಾರ ವ್ಯಾಪ್ತಿ ಮೊದಲಾದವುಗಳು ನಿಚ್ಚಳವಾಗಿ ಹೇಳಲ್ಪಟ್ಟಿಲ್ಲ. ಜಗತ್ತಿನಬೇರೆ ಬೇರೆ ಘಟನೆಗಳಲ್ಲಿ ಇವು ಬೇರೆ ಬೇರೆ ಸ್ವರೂಪವನ್ನು ತಾಳಿದುದರಿಂದ ಎಲ್ಲವನ್ನೂ ಸಾಧ್ಯವಿದ್ದಷ್ಟು ಸಮನ್ವಯಿಸಿಕೊಂಡು ಹೋಗವದಾಗಿ ದಿವಾಣ ರಾಮಸ್ವಾಮಿಯವರು ಆಶ್ವಾಸಿಸಿರುವರು. ಅದೇರೀತಿ ಮಂತ್ರಿಗಳನ್ನಾರಿಸಿಕೊಳ್ಳುವ ಹಕ್ಕನ್ನು ಶಾಸನಸಭೆಗೆ ಬಿಟ್ಟುಗೊಡದೆ ಮಹಾರಾಜರೆ ಅದನ್ನು ತಮ್ಮ ಕಡೆಗಿಟ್ಟುಕೊಂಡದ್ದು ಪ್ರಜಾಪ್ರಭುತ್ವ ತತ್ವಕ್ಕೆ ಸರಿಹೋಗದು. ಇದು ಅಲ್ಲದೆ ಇನ್ನು ಅನೇಕ ಸಂದರ್ಭಗಳಲ್ಲ ದಿವಾಣರ ಪ್ರಕಟನೆ ಅಸ್ಪಷ್ಟವಾಗಿದೆ. ಇವನ್ನೆಲ್ಲ ದಿವಾಣಸಾಹೇಬರು ಇನ್ನಷ್ಟು ಸ್ಪಷ್ಟಪಡಿಸಿ ಸಂಸ್ಥಾನದ ಪ್ರಜೆಗಳಿಗೆ ನಿಜವಾದ ಪ್ರಜಾಪ್ರಭುತ್ವವನ್ನು ದಯಪಾಲಿಸಿ ಪ್ರಗತಿಯನ್ನು ಸಾಧಿಸಲಿ. ಮತ್ತು ಮಾದರಿ ಸಂಸ್ಥಾನವೆಂಬ ಹೆಸರನ್ನು ಸಾರ್ಥಗೊಳಿಸಲೆಂದು ಕೇಳಿಕೊಳ್ಳುತ್ತೇವೆ.

ಕೂಲಿಕಾರ ಮಹಾಮಂಡಳ

ಹಿಂದುಸ್ತಾನ ಈ ವರೆಗೆ ಪರಕೀಯ ದಾಸ್ಯದಲ್ಲಿ ಕೊಳೆಯುತ್ತಿದ್ದುದರಿಂದ ಎಲ್ಲ ದೃಷ್ಟಿಯಿಂದಲೂ ಅದರ ಪ್ರಗತಿ ಕುಂಠಿತವಾಗಿದ್ದಿತು. ಆದರೆ ಪರದಾಸ್ಯ ಶೃಂಖಲೆಗಳನ್ನು ಹರಿಹೊಗೆವ ಕಾಲವೀಗ ಬಂದದ್ದರಿಂದ ದೇಶದಲ್ಲಿಯ ಬೇರೆ ಬೇರೆ ಅಂಗೋಪಾಂಗಗಳೂ ಸಂಘಟಿತವಾಗಹತ್ತಿವೆ. ರೈತರು ಕೂಲಿಕಾರರು ಮೊದಲಾದವರೆಲ್ಲ ರಾಷ್ಟ್ರೀಯ ರೀತಿಯಿಂದ ಸಂಘಟಿತರಾಗಬೇಕಾಗಿದೆ. ಸರದಾರ ವಲ್ಲಭಭಾಯರ ಅಧ್ಯಕ್ಷತೆಯಲ್ಲಿ ದಿಲ್ಲಿಯಲ್ಲಿ ಕೂಡಿದ್ದ ಕೂಲಿಕಾರರ ಸಭೆಯಲ್ಲಿ ಕೂಲಿಕಾರರ ಮಹಾ ಮಂಡಳವೆಂಬ ಹೊಸ ಸಂಸ್ಥೆ ಸ್ಥಾಪಿತವಾದುದು ಈ ದೃಷ್ಟಿಯಿಂದ ಅತ್ಯಂತ ಮಹತ್ವದ ಮಾತಾಗಿದೆ. ಕೂಲಿಕಾರರ ಸಾಮಾಜಿಕ, ರಾಜಕೀಯ ಮತ್ತು ಆರ್ಥಿಕ ಸುಲಿಗೆಯನ್ನು ತೊಡೆದು ಹಾಕಿ ಅಸಮತೆ, ಲಾಭಬಡಕತನ ಹಾಗು ಸಮಾಜ ವಿಘಾತಕ ಅಧಿಕಾರ ಸತ್ತೆಯನ್ನು ನಾಮಶೇಷ ಮಾಡುವದು, ಉದ್ಯೋಗಗಳನ್ನು ಸರಕಾರದ ಒಡೆತನ ಇಲ್ಲವೆ ನಿಯಂತ್ರಣದಲ್ಲಿರಿಸುವದು, ಕೆಲಸಗಾರರ ರಾಜಕೀಯ ಸಾಮಾಜಿಕ ಮಟ್ಟವನ್ನೇರಿಸುವದು ಈ ಮಹಾಮಂಡಳದ ಉದ್ದೇಶವೆಂದಿಟ್ಟುಕೊಳ್ಳಲಾಗಿದೆ. ದೇಶದಲ್ಲಿ ಸಮಸ್ತ ವರ್ಗದ ಕೂಲಿಕಾರರನ್ನು ಸಂಘಟಿಸಿ ನಾಡಿನಲ್ಲೆಲ್ಲ ಅಂಥ ಸಂಘಗಳನ್ನು ಸ್ಥಾಪಿಸುವವನ್ನು ಮಹಾ ಮಂಡಳ ಉದ್ದೇಶವನ್ನಾಗಿ ಇಟ್ಟುಕೊಂಡಿದೆ. ಪ್ರಾಂತಿಕ ಸಮಿತಿಗಳನ್ನು ಸ್ಥಾಪಿಸಲು ಮತ್ತು ಆಯಾ ಪ್ರಾಂತಗಳಲ್ಲಿಯ ಕೂಲಿಕಾರ ಸಂಘಗಳು ಈ ಮಹಾ ಮಂಡಲವನ್ನು ಸೇರುವಂತೆ ಪ್ರಯತ್ನಿಸಲು ಬೇರೆ ಬೇರೆ ಪ್ರಾಂತಗಳಿಗೆ ಆಮಂತ್ರಕರನ್ನೂ ಸಮಿತಿಯು ನೇಮಿಸಿದೆ. ನಮ್ಮ ಕರ್ನಾಟಕ ಭಾಗಕ್ಕೆ ಶ್ರೀ ದಿವಾಕರ ರಂಗರಾಯರು ಆಮಂತ್ರಕರಾಗಿರುವರು. ಕಾಂಗ್ರೆಸ್ಸು ಪ್ರಾರಂಭದಿಂದಲೂ ಕೂಲಿಕಾರರ ಸಂಘಟನೆಯನ್ನು ತನ್ನ ಕಾರ್ಯಕ್ರಮದಲ್ಲಿಟ್ಟುಕೊಂಡಿದ್ದರೂ ಈ ವರೆಗೆ ಅತ್ತ ವಿಶೇಷ ಗಮನ ಕೊಡದ್ದರಿಂದ ಕೂಲಿಕಾರ ಸಂಸ್ಥೆಗಳು ವಿಧ್ವಂಸಕ ವೃತ್ತಿಯ ಜನರ ಕೈಯಲ್ಲಿ ಸಿಕ್ಕು ಇಂದು ಒಂದು ಬಗೆಯಿಂದ ಕೂಲಿಕಾರ ಒಡೆಯರಲ್ಲಿಯ ತಿಕ್ಕಾಟಕ್ಕೆ ಅವಕಾಶವುಂಟಾಗಿದೆ ಕೇವಲ ತಮ್ಮ ರಾಜಕೀಯ ಧ್ಯೇಯ ಸಾಧನೆಗಾಗಿ ಆ ಪಕ್ಷ ಪ್ರಯತ್ನಿಸುತ್ತಿದೆಯಲ್ಲದೆ ಕೂಲಿಕಾರರ ಹಿತವನ್ನಲ್ಲೆಂದು ಈ ವರೆಗೆ ಅದು ಸಾಧಿಸಿದ ಪ್ರಗತಿಯಿಂದ ಗೊತ್ತಾಗುವದು ಎಲ್ಲೆಲ್ಲಿಯೂ ಗೊಂದಲದ ಪರಿಸ್ಥಿತಿಯನ್ನುಂಟು ಮಾಡುವದು ಅವರ ಧ್ಯೇಯವಿದ್ದಂತೆ ಕಾಣುವದು ಇದನ್ನೆಲ್ಲ ಹೋಗಲಾಡಿಸಿ ಸರಿಯಾದ ರೀತಿಯಲ್ಲಿ ಕೂಲಿಕಾರರ ಹಿತವನ್ನು ಸಂಘಟಿಸಲು ಮಹಾ ಮಂಡಲ ಸ್ಥಾಪಿತವಾದುದು ಆನಂದದ ಸಂಗತಿ. ಇದರ ಪರಿಣಾಮದಿಂದ ಕೂಲಿಕಾರ ವರ್ಗ ಸಂಘಟಿತವಾಗಿ ತನ್ನ ಹಿತವನ್ನು ಸಾಧಿಸುವದಲ್ಲದೆ ದೇಶ ಹಿತವನ್ನೂ ಸಾಧಿಸಲೆಂದು ಹಾರೈಸುತ್ತೇವೆ.

ಮತ್ತೊಮ್ಮೆ ವಿಫಲ ಗಾಂಧೀ—ಜಿನ್ನಾ ಭೆಟ್ಟಿ

ವಿಭಜನೆಗೆ ಮೌಂಟಬ್ಯಾಟನ್ನರೂ ವಿರೋಧಿಗಳು?

ಗಡಿನಾಡಿನ ಮಂತ್ರಿಮಂಡಲವನ್ನುರುಳಿಸುವ ಒಳಸಂಚು

ಬ್ರಿಟಿಶರು ಒಡನೆ ಅಧಿಕಾರ ತ್ಯಾಗ ಮಾಡಿ ಹೊರಡುವರು?

ಸತ್ಯ ಅಹಿಂಸೆಗಳ ಪ್ರತಿಪಾದಿಯಾದ ಗಾಂಧೀಜಿ ಕಳೆದವಾರ ಮುಸ್ಲಿಂಲೀಗಿನ ಛಲ ಹಟ ಅಧ್ಯಕ್ಷ ರಾದ ಜಿನ್ನಾರ ಜತೆ ಸಂಧಾನ ಮಾಡಲಾಗಿ, ಮತ್ತೊಮ್ಮೆ ಸೋತರು. ಬಿಹಾರ ದಿಂದ ಒಮ್ಮೆಂದೊಮ್ಮೆ ಕರೆಸಲ್ಪಟ್ಟಿದ್ದ ಅವರು ಅದೇ ಮುಂಜಿನ ದಿನದವರೆಗೆ ಗುಪ್ತವಾಗಿರಿಸಲ್ಪಟ್ಟಿದ್ದ ತಮ್ಮ ಭೌತ್ಯವನ್ನು ತಾ. ೬ ಸಂಜೆ ೫-೩೦ ಕ್ಕೆ ಪ್ರಾರಂಭಿಸಿದರು. ೫-೩೦ ರಿಂದ ೮-೧೫ ರ ವರೆಗೆ ಜೆಹ್ವಾ ಎರಡೂ ೩ ತಾಸುಗಳ ನಡೆಯಿತು. ಅಪರೆ ಎಂದಿನಂತೆ ಅದರ ಫಲಿತಾಂಶವಾಯಿ ತೆಂದು ಹೇಳಬೇಕಾಗಿಯೆ ಇಲ್ಲ. ಈ ಭೆಟ್ಟಿಯ "ನಾವು ಎರಡು ವಿಷಯಗಳನ್ನು ಚರ್ಚಿಸಿ ದೆವು. ಮೊದಲನೆಯದು, ಹಿಂದುಸ್ತಾನದಲ್ಲಿ ಹಿಂದುಸ್ತಾನ ಮತ್ತು ಪಾಕಿಸ್ತಾನವೆಂದೆರಡು ಭಾಗ ಮಾಡುವದು. ಗಾಂಧಿಯವರು ವಿಭ್ಯೇದ ತತ್ವಕ್ಕೆ ಒಪ್ಪುವದಿಲ್ಲ. ವಿಭ್ಯೇದ ಅನಿ ವಾರ್ಯವಲ್ಲೆಂದು ಅವರ ಮತ. ಪಾಕಿಸ್ತಾನ ಅನಿವಾರ್ಯವಷ್ಟೇ ಅಲ್ಲ, ಸದ್ಯದ ರಾಜಕೀಯ ಸಮಸ್ಯೆಯನ್ನು ಬಗೆಹರಿಸಲು ಅದೊಂದೇ ಉಪಾಯವೆಂದು ನನ್ನ ಅಭಿಪ್ರಾಯವಿದೆ.

"ನಾವು ಚರ್ಚಿಸಿದ ಎರಡನೇ ವಿಷಯವೆಂದರೆ ನಾವು ಹೊರಡಿಸಿದ ಸಂಯುಕ್ತ ಶಾಂತಿ ಪ್ರಕಟನೆ. ಈ ಪ್ರಕಟನೆ ಕಾರ್ಯ ರೂಪಕ್ಕೆ ಬರುವಂತೆ ನಾವು ಶಕ್ತ್ಯನುಸಾರ ಪ್ರಯತ್ನಿಸಬೇಕೆಂದು ನಮ್ಮ ಅಭಿಪ್ರಾಯ. ಇದರಂತೆ ಮಾಡಲು ನಾವು ಸಿದ್ಧರಾಗಿದ್ದೇವೆ." ಕಾತರಪಡಲಿಯಾದ ಸುದ್ದಿಗಾರನೊಬ್ಬ ಕೇಳಿದ! "ನೀವಿಬ್ಬರು ಇನ್ನೊಮ್ಮೆ ಭೆಟ್ಟಿಯಾಗಲಿರುವಿರಾ?" ಜಿನ್ನಾ ಉತ್ತರ ಕೊಟ್ಟರು. "ಪ್ರಕಟನೆಯಲ್ಲಿದ್ದುದಕ್ಕಿಂತ ಹೆಚ್ಚಿಗೆ ಹೇಳುವದೇನೂ ನನಗೆ ಮನಸ್ಸಿಲ್ಲ."

ಜಿನ್ನಾರ ಹೇಳಿಕೆ ರಾಜಕೀಯ ಪರಿಸ್ಥಿತಿಯನ್ನು ಸಂಕ್ಷೇಪದಲ್ಲಿ ಸ್ಪಷ್ಟವಾಗಿ ಹೇಳುತ್ತದೆ. ಈ ಭೆಟ್ಟಿಯ ಬಗ್ಗೆ ಯಾರೂ ಎಷ್ಟೂ ಆಶೆಯನ್ನಿಟ್ಟುಕೊಂಡಿದ್ದಿಲ್ಲ. ಆದುದರಿಂದ ಯಾರೂ ಅದು ವಿಫಲವಾದುದಕ್ಕೆ ನಿರಾಶೆ ಪಡಲಿಲ್ಲ. ಇಷ್ಟೆ.

ಇಸ್ಮೆಯವರ ದೌತ್ಯ

ನಿಜವಾಗಿ ಇಂದಿಗೂ ಪರಿಸ್ಥಿತಿಯ ಕೀಲಿಕೈ ಬ್ರಿಟಿಶ ಸರಕಾರದ ಕೈಯಲ್ಲಿಯೇ ಇದೆಯೆಂಬದು ನಿಸ್ಸಂಶಯ. ಕಾಂಗ್ರೆಸ್ಸಿನ ಮುಂದು ಮೇಜಿನ ಪರಿಷತ್ತಿನ ಆಮಂತ್ರಣವನ್ನು ಲೀಗಿನವರು ಎಂದು ಕಡೆಗಣಿಸಿದರೋ ಅಂದೇ ಅವರು ಆ ಕೀಲಿಕೈಯನ್ನು ತಿರುಗಿ ಬ್ರಿಟಿಶರ ಜೇಬಿನಲ್ಲಿ ಹಾಕಿದರು. ಅವರೇ ಬಾಗಿಲು ತೆರೆಯಬೇಕು, ತಾವು ಬೇಡಿದ್ದನ್ನು ತಮಗೆ ಕೊಡಬೇಕು, ಎಂದು ಅವರ ಹಟ. "ಹಿಂದೂ ಕಾಂಗ್ರೆಸ್ಸಿ"ನೊಡನೆ ಸಂಬಂಧ ಅವರಿಗೆ ಬೇಡವಾಗಿದೆ. ಅದು ಕಾರಣ, ರಾಜಕೀಯರಂಗದಲ್ಲಿ ಈಗೊಂದು ವಾರದಿಂದ ಎಂಥೆಂಥ ಯುಕ್ತಿ ಪ್ರಯುಕ್ತಿ ಮುಂದೆ ಬರುತಿದ್ದರೂ ಪ್ರತಿಯೊಂದು ಪಕ್ಷವೂ ಎದುರಾಳಿಯನ್ನು ಪೇಚಿಗೆ ಸಿಲುಕಿಸಲು ಹವಣಿಸುತ್ತಿದ್ದರೂ ನಿರ್ಣಯಾತ್ಮಕವಾದುದೇನಾದರೂ ನಡೆಯಬೇಕಾಗಿದ್ದರೆ ವೈಸರಾಯರ ದೂತರಾಗಿ ಬ್ರಿಟಿಶ ಮಂತ್ರಿಮಂಡಲದೊಡನೆ ಚರ್ಚಿಸಲು ಲಂಡನ್ನಿಗೆ ಹೋಗಿರುವ ಲಾರ್ಡ ಇಸ್ಮೆಯವರ ದೌತ್ಯದ ಫಲವಾಗಿ ಬ್ರಿಟಿಶ ಸರಕಾರದ ಆ ಅಸಂಖ್ಯ "ಹಿಂದುಸ್ತಾನ ಹೇಳಿಕೆ"ಗಳಲ್ಲಿ ಇನ್ನೊಂದು ಹೊರಡಬೇಕು. ಅಸ್ತುಬ್ಯಾದಾನ್ ಹೇಳಿಕೆ ಮೇ ೧೫ ರ ನಂತರ "ಕೆಲ ದಿನಗಳೊಳಗೆ" ಹೊರಬೀಳಬಹುದು. ಆ ಮೇಲೆ ಪ್ರತಿಯೊಂದು ಪಕ್ಷವೂ ತನ್ನ ಆಯುಕಟ್ಟಿನ ಆಳವನ್ನು ಕಂಡುಕೊಂಡು ಮುಂದಿನ ಸಂತ್ರಕ್ಕೆ ಅಣಿಯಾದೀತು. ಇಸ್ಮೆಯವರ ದೌತ್ಯದ ಒಳಗೇನಿದೆ, ಅದೇನನ್ನು ಪಡೆಯಬಹುದು? ಈ ಪ್ರಶ್ನೆಗಳ ಬಗ್ಗೆ ತರ್ಕವಿತರ್ಕಗಳು ಮಾತ್ರ ಧಾರಾಳವಾಗಿ ನಡೆಯುತ್ತಿವೆ.

ಲಾರ್ಡ ಇಸ್ಮೆಯವರು ವೈಸರಾಯರ "ಹಿಂದುಸ್ತಾನ ವರದಿ"ಯನ್ನು ಹೊತ್ತು ಇಂಗ್ಲಂಡಿಗೆ ಹೋಗಿದ್ದಾರೆ. ಅದರಲ್ಲಿ ಹಿಂದೀ ಪರಿಸ್ಥಿತಿಯ ಬಗ್ಗೆ ತಮಗೆ ಕಂಡುಬಂದ ಸಂಗತಿಗಳನ್ನು ಅವರು ವಿವರವಾಗಿ ಬರೆದಿರುವರಲ್ಲದೆ ವಿವಿಧ ಪಕ್ಷಗಳ ಬೇಡಿಕೆಗಳ ರೂಪರೇಷೆಯನ್ನು ಮತ್ತು ಅದಕ್ಕೆ ಸಂಬಂಧಿಸಿದ ಲಿಖಿತಗಳನ್ನು ಕಳಿಸಿದ್ದಾರಂತೆ. ಈಗ ಮಂತ್ರಿಮಂಡಲದಲ್ಲಿ ಉತ್ತ ಮಟ್ಟದಲ್ಲಿ ಅತ್ಯಂತ ಗೋಪ್ಯವಾಗಿ ಮಾತುಕತೆಗಳು ನಡೆದಿವೆ.

ವಿಭಜನೆಗೆ ಬೆಂಬಲವಿಲ್ಲ?

ಹಿಂದುಸ್ತಾನದ ವಿಭಜನೆ ಅಥವಾ ಪ್ರಾಂತಗಳ ವಿಭಜನೆಯ ಪ್ರಶ್ನೆ ಬ್ರಿಟಿಶ ಮಂತ್ರಿಮಂಡಲದ ತಲೆಯನ್ನು ಅಷ್ಟಾಗಿ ತಿನ್ನುತ್ತಿಲ್ಲವೆಂದು ತಿಳಿಯುತ್ತದೆ. ಒಂದಲ್ಲ ಒಂದುಬಗೆಯ ವಿಭಜನೆ ಅನಿವಾರ್ಯವೆಂದು ವೈಸರಾಯರು ಕೂಡ ಮನಗಂಡಿದ್ದಾರೆಂದು ಹೇಳಲಾಗಿತ್ತು. ಅದರೆ ಹಿಂದಿನ ವೈಸರಾಯರಂತೆ ಮೌಂಟಬ್ಯಾಟನ್‌ರೂ ಸಶಸ್ತ್ರ ಬಲಕ್ಕೆ ಸೇರಿ ದುಡಿದವರಾದುದರಿಂದ ಹಿಂದುಸ್ತಾನದ ಸಂರಕ್ಷಣೆಯ ಪ್ರಶ್ನೆ ಅವರಿಗೆ ಮಹತ್ವದ್ದಾಗಿ ಕಾಣುತ್ತದೆ. ಅದೇ ಕಾರಣದಿಂದ ಅವರು ವಿಭಜನೆಗೆ ಪ್ರತಿಕೂಲರಾಗಿರುವರಂತೆ. ಅವರ ವರದಿ ಇದೇ ಅಭಿಪ್ರಾಯವನ್ನು ಬ್ರಿಟಿಶ ಸರಕಾರದ ಮೇಲೆ ಬಿಂಬಿಸಲು ಪ್ರಯತ್ನಿಸಿವೆ. ಉತ್ತರದಲ್ಲಿ ಮುಸ್ಲಿಮರಿಗೆ ಸಿಡಿದು ಹೋಗುವ ಹಕ್ಕು ಕೊಟ್ಟರೆ ಮುಗಿಯಲಿಲ್ಲ. ಇದರ ಫಲವಾಗಿ ಸಂಸ್ಥಾನಗಳಲ್ಲಿ ಕೆಲವು ತಾವೂ "ಸಾರ್ವಭೌಮ"ವಾಗುವ ಕನಸು ಕಾಣತೊಡಗಿರುವದರಿಂದ ಈ ಅರ್ಧದ್ವೀಪದ ಸಂರಕ್ಷಣೆಯ ಸಮಸ್ಯೆ ಇನ್ನಷ್ಟು ಜಟಿಲವಾಗಿದೆ. "ಹಿಂದುಸ್ತಾನದ ರಾಜಕೀಯ ವಿಭಜನೆಯುಪ್ಪು ಹಿಂದೀ ಸಶಸ್ತ್ರ ಬಲಗಳದು—ಜಿನ್ನಾರ ಅಭಿಪ್ರಾಯವೇನೇ ಇರಲಿ—ಸರಳವಿಲ್ಲ. ಹಿಂದೀ ಸೈನ್ಯ, ನೌಕಾ, ವಿಮಾನ ಬಲಗಳಲ್ಲಿ ಹಿಂದುಗಳು,ಮುಸ್ಲಿಂರು ಮಾತ್ರನೇ ಇರುವದಿಲ್ಲ. ಸಂಸ್ಥಾನ ಪ್ರಜೆಗಳೂ ಇರುವರು. ಅವರ ವಿಭಜನೆಯಲ್ಲಿ ಹಿಂದುಸ್ತಾನದಲ್ಲಿ ವಾಸಿಸುವ ಮುಸ್ಲಿಮರು ಪಾಕಿಸ್ತಾನದಲ್ಲಿರುವ ಹಿಂದುಗಳು ಇವರ ಸ್ಥಿತಿಯೇನು? ಅಖಿಲ ಹಿಂದುಸ್ತಾನದಲ್ಲಿರುವ ಹಿಂದುಸ್ತಾನವನ್ನು ಒಂದೇ ಘಟಕವೆಂದು ಬಗೆದೇ ಎಲ್ಲ ಸಂರಕ್ಷಣ ವ್ಯವಸ್ಥೆಗಳೂ ಸಂಘಟಿಸಲ್ಪಟ್ಟಿವೆ. ಇದೆಲ್ಲವೂ ಬ್ರಿಟಿಶ ಸರಕಾರದ ಚಿಂತೆಗೆ ಕಾರಣವಾಗಿವೆ. ಯಾವುದೇ ಭಾವೀ ಯುದ್ಧದಲ್ಲಿ ಹಿಂದುಸ್ತಾನ ಸ್ವಸಂರಕ್ಷಣೆಗೆ ಅಶಕ್ತವಾದರೆ ಎಲ್ಲರಿಗಿಂತ ಅದರಿಂದ ಬ್ರಿಟಿಶರಿಗೇ ಹಾನಿಯಾಗುವದು. ಈ ಎಲ್ಲ ಕಾರಣಗಳಿಂದಿರಬೇಕು, ವಿದೇಶ ಮಂತ್ರಿ ಬೆವಿನ್ನರೇ ಹಿಂದುಸ್ತಾನದ ವಿಭಜನೆಯನ್ನು ಎಲ್ಲರಿಗಿಂತ ಉಗ್ರವಾಗಿ ವಿರೋಧಿಸಿದ್ದಾರೆಂದು ತಿಳಿಯುತ್ತದೆ.

ಅವಸರದಿಂದ ಅಧಿಕಾರ ತ್ಯಾಗ?

ಹಾಗಾದರೆ ಈಗ ಅಸಂಧೇಯವೆಂದು ಕಾಣುವ ಎರಡು ಬಣಗಳನ್ನು ಒಂದುಗೂಡಿಸುವ ಬಗೆ? ಉತ್ತರವಾಗಿ ಬ್ರಿಟಿಶ ಸರಕಾರ ಪುನಃ ಮೇ ೧೬ ರ ಘೋಷಣೆಗೆ ಬೊಟ್ಟು ಮಾಡುತ್ತದೆ. ಸದ್ಯ ಸ್ಥಿತಿಯಲ್ಲಿ ಅದು ಪರಸ್ಪರ ವಿರುದ್ಧ ಪಕ್ಷಗಳನ್ನು ಸಂತುಷ್ಟಗೊಳಿಸುವ ಒಂದೇ ಒಂದು ಹಾದಿಯೆಂದು ಅವರ ಹೇಳಿಕೆ. ಕಾಂಗ್ರೆಸ್ಸಾದರೂ ಮೇ ೧೬ರ ಘೋಷಣೆಯನ್ನು ಇದ್ದಕ್ಕಿದ್ದಂತೆ ಅಂಗೀಕರಿಸಲು ತನ್ನ ಸಿದ್ಧತೆಯನ್ನು ಮತ್ತೊಮ್ಮೆ ಬರೆದು ತಿಳಿಸಿದೆಯಂತೆ. ಲೀಗೊಂದೇ ಆ ಘೋಷಣೆಗೆ ಬದ್ಧ ವಿರುದ್ಧವಾದ ಪಕ್ಷ. ಆದ್ದರಿಂದ ಕಾಂಗ್ರೆಸ ಲೀಗುಗಳನ್ನು ಮೇ ೧೬ ರ ಘೋಷಣೆಯ ತಳಹದಿಯ ಮೇಲೆ ಒಂದುಗೂಡಿಸುವ ಇನ್ನೊಂದು ಚರಮ ಪ್ರಯತ್ನವನ್ನು ಬ್ರಿಟಿಶರು ಮಾಡುವರಿದ್ದಾರಂತೆ. ಆ ನಡುವೆ ಜಾತೀಯ ಸಮಸ್ಯೆಯನ್ನು ಪರಿಹರಿಸಲು ಲಾರ್ಡ ಲುಯಿ ಮೌಂಟಬ್ಯಾಟನ್ನರು ಹಲವು ಉಪಾಯಗಳನ್ನು ಸೂಚಿಸಿದ್ದಾರೆಂದು ಹೇಳಲಾಗಿದೆ. ೧೯೪೮ ಕ್ಕೆ ಮೊದಲೇ ಅಧಿಕಾರ ತ್ಯಾಗ ಮಾಡಬೇಕೆಂದು ಅವರ ಸೂಚನೆಯಿಂಟೆಂದೂ ನಂಬಲಾಗಿದೆ. ಗಾಂಧೀಜಿಯವರಾದರೂ ಮೊನ್ನೆ ಮೊನ್ನೆ ಪ್ರಾರ್ಥನಾ ಸಭೆಯಲ್ಲಿ ಇದೇ ಹಾದಿಯನ್ನು ಸೂಚಿಸಿದರು. ಮಾತು ಮಾತಿಗೆ ಬ್ರಿಟಿಶರ ಮುಖ ನೋಡುವ ಪ್ರವೃತ್ತಿಯನ್ನು ಹೋಗಲಾಡಿಸಲು ಬ್ರಿಟಿಶರು ಒಡನೆ ಹೊರಟು ಹೋಗುವದೊಂದೆ ಹಾದಿಯೆಂದವರು ಹೇಳಿದ್ದು ಗಮನಾರ್ಹವಾಗಿದೆ. ಜಾತೀಯ ಗಲಭೆಗಳು ಹಿಂದಿರುವ ಪೈಶಾಚಿಕ ಶಕ್ತಿಗಳು ದ್ವೇಷಕ್ಕಿಂತಲೂ ಬ್ರಿಟಿಶರ ಮೇಲೆ ಒತ್ತಾಯ ಹೇರಲು ಆ ಪ್ರಾಗೆರವನ್ನು ಪ್ರಬಂಧಿಸಿ ವೆಯೆಂಬುದು ನಿಚ್ಚಳವಾಗಿದೆ. ಬ್ರಿಟಿಶರು ಇಲ್ಲಿ ಉಪಾಗಲೆ ಅವಸ್ಸು ಗಡಿಬಿಡಿ ಸಾಧ್ಯವಿದ್ದುದನ್ನು ಸೆಳೆದು ಕೊಳ್ಳುವ ಅವರ ಹೂಟದಿ

ಗಡಿನಾಡಿನ ಹೊಸ ಚುನಾವಣೆಯ ಕೂಗು ಮತ್ತು ಅದರ ಹೆಸರಲ್ಲಿ ನಡೆದ ಹಿಂದೂ ಸೀಖರ ಕೊಲೆ ಇದನ್ನೆ ತೋರಿಸುತ್ತದೆ. ಬ್ರಿಟಿಶರು ಇದ್ದಕ್ಕಿದ್ದಂತೆ ಹೊರಟು ಹೋದರೆ ಈ ಒಳಕಿನ ಸತ್ವಗಳಿಗೆ ತಮ್ಮ ಮನೋರಥವನ್ನು ದೊರಕಿಸಲು ಹಾದಿಯೆ ಇಲ್ಲ. ಬಹಳಾದರೆ ಒಂದು ಹತ್ತುವರ್ಷ ಹೋರಾಟ ನಡೆದೀತು. ಅದು ಅನಿವಾರ್ಯ. ಆ ಮೇಲೆ ಶಾಂತತೆ ನೆಲಸಲೇಬೇಕು. ಈ ವಿಷಯದಲ್ಲಿ ಇನ್ನೊಂದು ಅವಾಂತರವಿದೆ. ಹಿಂದುಸ್ತಾನದಲ್ಲಿ ಬ್ರಿಟಿಶ ಅಧಿಕಾರಿಗಳು ನಡೆವಳಿಯು ಅದು ಪಂಜಾಬ ಗಡಿನಾಡುಗಳಲ್ಲಿರಲಿ ಶಾಂತಿ ಸ್ಥಾಪನೆಯ ಕೆಲಸದಲ್ಲಿ ಅಡ್ಡಗಾಲು ಹಾಕುತ್ತಿರುವ ಈ ಅಧಿಕಾರಿ ವರ್ಗ ತಮ್ಮ ಹಿಂದಿನ ಗೆಳೆಯರ ಕೈಬಿಡಲೊಲ್ಲದೆ ಪಲಾಯನಕ್ಕೆ ಮುಂಚೆ ಹಿಂದೀಯರ ಭವಿತವ್ಯಕ್ಕೆ ಕೊನೆಯ ಒದೆತವೊಂದನ್ನು ಬಿಗಿಯಬೇಕೆನ್ನುತ್ತದೆ. ಗಡಿನಾಡ ಮುಖ್ಯಮಂತ್ರಿ ಡಾ. ಖಾನಸಾಹೇಬರ ಮನೆಯಲ್ಲಿ ನುಗ್ಗಿ ಗೊಂದಲ ಹಾಕಿದ ಬಗ್ಗೆ "ಬೇಕಾಗಿದ್ದ" ಫರಾರಿ ಮನುಷ್ಯನೊಬ್ಬನನ್ನು ಗಡಿನಾಡ "ಸತ್ಯಾಗ್ರಹಿ"ಗಳ ಪ್ರತಿನಿಧಿಗಳಲ್ಲೊಬ್ಬನಾಗಿ ಜಿನ್ನಾರಲ್ಲಿಗೆ ಶಿಷ್ಟಮಂಡಲ ಹೋಗಲು ಕಳಿಸಲಾಗಿದೆ! ಈ ಫರಾರಿ ಮನುಷ್ಯನನ್ನು ಅರಿಸಿ ಅಧಿಕಾರಿಗಳು ಹೇಗೆ ಕಳಿಸಿದರು ಮತ್ತು ಅವನ ಬಂಧನವೇಕಾಗಲಿಲ್ಲ ಎಂಬುದು ಡಾ. ಖಾನಸಾಹೇಬರಿಗೇ ಆಶ್ಚರ್ಯವುಂಟುಮಾಡಿದೆ. ಅಧಿಕಾರಿಗಳಿಗೂ ಲೀಗಿನ "ಚಳವಳಿ"ಗೂ ಒಳಗೊಳಗೆ ಸಂಬಂಧವುಂಟೆಂದು ಬೇರೆ ಹೇಳಲೇಬೇಕಿಲ್ಲ. ಈ ಅಧಿಕಾರಿಗಳ ದ್ರೋಹವನ್ನು ಹೋಗಲಾಡಿಸಬೇಕಾದರೆ ಅವರನ್ನು ಬ್ರಿಟಿಶ ಸರಕಾರದ ಅಂಕಿತದಿಂದ ಮುಕ್ತಗೊಳಿಸಿ ಹಿಂದೀ ಸರಕಾರಗಳ ಅಂಕಿತಕ್ಕೆ ಒಳಪಡಿಸುವದೊಂದೇ ಹಾದಿ.

ಗಡಿನಾಡಿನ ಪ್ರಕರಣ

ಈ ನಡುವೆ ಹಿಂದುಸ್ತಾನದಲ್ಲಿ ಬ್ರಿಟಿಶರ ಕಡೆಗಿದ್ದ ಬಿದ್ದ ಸ್ನೇಹ ಝುರಿ ಭರದಿಂದ ಬತ್ತುತ್ತಿದೆ. ಈ ಮೀನ ಮೇಷ ಜನರಿಗೆ ಸಾಕಾಗಿಹೋಗಿದೆ. ಹೊಸ ವೈಸರಾಯರ ಬಗ್ಗೆಯೂ ಮೊದಲು ತಂಬಿ ತುಳುಕುತಿದ್ದ ಆದರ ಈಗ ಕೆಳಗಿಳಿಯುತ್ತಿರುವದು ಸರಿಯಾಗಿ ಗೋಚರವಾಗುತಿದೆ. ಅವರ ಉದ್ದೇಶವನ್ನೇ ಶಂಕಿಸಿ ಅನೇಕ ಪತ್ರಿಕೆಗಳು,ಬರೆದುದರಿಂದ ಅವರ ಮನನೊಂದಿತಂತೆ. ಹಿಡಿತಗೆಟ್ಟು ಬರೆಯುವ ಪತ್ರಿಕೆಗಳನ್ನು ಈ ಬಗ್ಗೆ ಗಾಂಧೀಜಿ ತೆಗಳಬೇಕಾಯಿತು. ಕೂಡ ಅದರೆ ಪತ್ರಿಕೆಗಳು ಜನರ ಶಂಕೆಗಳನ್ನು ಸರಿಯಾಗಿಯೆ ಪ್ರತಿಬಿಂಬಿಸಿವೆ. ಗಾಂಧಿಜಿಯ ಭೀಮಾರಿಯನ್ನೂ ಅಕಾಶದಲ್ಲಿ ಲೀನವಾಗಿರಲಿಲ್ಲ, ಗಡಿನಾಡಿನ ಗಾಂಧಿಯಂಥವರೇ ಅದೇ ಶಂಕೆಯನ್ನು ಸ್ಪಷ್ಟವಾಗಿ ಒದನುಡಿದರು. ಒಂದೇ ವರ್ಷದ ಹಿಂದೆ ಯಾವ ಪಾಕಿಸ್ತಾನದ ಹೆಸರಿನಲ್ಲಿ ಚುನಾವಣೆಗಳನ್ನು ಸ್ಪರ್ಧಿಸಿ ಲೀಗು ಸೋಲುತಿಂದಿತ್ತೊ ಅದೇ ಪಾಕಿಸ್ತಾನದ ಹೆಸರಲ್ಲಿ ತಿರುಗಿ ಅಲ್ಲಿ ಚುನಾವಣೆಯಾಗಬೇಕೆಂದು ಅದು "ಸತ್ಯಾಗ್ರಹ" ಹೂಡಿದೆ. ಆ "ಸತ್ಯಾಗ್ರಹ"ಕ್ಕೆ ನೂರಾರು ಹಿಂದುಗಳೂ ಸೀಖರೂ ಬಲಿಯಾದರು! ಕೋಟ್ಯಂತರ ರೂಪಾಯಿ ಬೆಲೆ ಬಾಳುವ ಅವರ ಸೊತ್ತು ಹೋದಂತಾಯಿತು. ಇಂಥ ಶುದ್ಧ ಕ್ರೂರ "ಚಳವಳಿ"ಗಾರರನ್ನು ಹತ್ತಿಕ್ಕುವ ಬದಲು ಗಡಿನಾಡಿನ ಬಿಳಿ ಅಧಿಕಾರಿ ವರ್ಗ—ಗವರ್ನರ ಕ್ಯಾರೋ ಕೂಡ—ಲೀಗ್ ಬೇಡಿಕೆಯನ್ನು ಸಮರ್ಥಿಸಿ ವಾಯಿಸರಾಯರಿಗೆ ಕಿವಿಯೂದಿದೆಯೆಂದೂ ವಾಯಿಸರಾಯರಾದರೂ ಪುನಃ ಚುನಾವಣೆ ಹೂಡುವದಕ್ಕೆ ಅನುಕೂಲಾಭಿಪ್ರಾಯವುಳ್ಳವರಾಗಿದ್ದಾರೆಂದೂ ಗುಜು ಗುಜು ಎದ್ದಿದೆ. ಬಿಸಿ ಉಕ್ಕಿಗೆ ಇನ್ನೊಂದೇಟು ಬಿಗಿಯುವವರಂತೆ ಮೊನ್ನೆ ಮೊನ್ನೆಯವರೆಗೆ ಬ್ರಿಟಿಶರ ಬಗಲಾಗೂಸಾಗಿದ್ದು ಈಗ ಗಡಿನಾಡ ಖಾನ ಬಂಧುಗಳನ್ನು ಬ್ರಿಟಿಶ ಕೋವಿ— ಹಿಂದೂ ಹಣದ ದಾಸರೆಂದು ಕರೆಯುವಷ್ಟು ಧೃಷ್ಟ ದೇಶಭಕ್ತರಾಗಿರುವ ಫಿರೋಜಖಾನ ನೂನರು ಗಡಿನಾಡನ್ನು ಸಂಚರಿಸಿ ಬಂದವರು ಗಡಿನಾಡಿನಲ್ಲಿ ಶಾಂತತೆ ನೆಲೆಸಲು ಹೊಸ ಚುನಾವಣೆಗಳೊಂದೇ ಉಪಾಯ— ಅರ್ಥಾತ್ ಹೊಸ ಚುನಾವಣೆಯಾಗುವ ವರೆಗೆ ಹಿಂದುಗಳ ಹತ್ಯೆ ನಡೆಯುವದು— ಎಂದರು.

"ಶಾಂತಿ ಸ್ಥಾಪನೆಗಾಗಿ ಕೈಲಾದುದನ್ನು ಮಾಡು"ವ ಜಿನ್ನಾ ಸಾಹೇಬರು ಗಡಿನಾಡಿನಲ್ಲಿ ಖಾನ ಸಾಹೇಬರು ರಾಜೀನಾಮೆ ಕೊಡದಿದ್ದರೆ ಲೀಗು ಚಳವಳಿ ನಿಲ್ಲಿಸುವಂತಿಲ್ಲವೆಂದು ಸಾರಿಬಿಟ್ಟಿದ್ದಾರೆ. ಅವರ ಹೇಳಿಕೆ ನೋಡಿದರೆ ಅಲ್ಪಸಂಖ್ಯಾತರಿಗೆ ಅಲ್ಲಿ ಹಿಂಸೆಯೆ ಆಗಿಲ್ಲವೆಂಬಂತೆ ಕಾಣುತ್ತದೆ. ಇದು ಗಡಿನಾಡ ಗಾಂಧಿ ಗಫಾರ ಖಾನರ ಶಾಂತಚಿತ್ತದ ಸಹನೆಯ ವಿಕ್ಷಿಪ್ತ ನಿರೀಕ್ಷೆ. ಅವರು ಅದೇ ಹಿಂಸೆಯ ಬೆದರಿಕೆಯನ್ನು ಹಿಂತಿರುಗಿಸಿ ರಕ್ತಪಾತ ಬೇಕಾದರೆ ಚುನಾವಣೆ ನಡೆಸಿರಿ. ಇನ್ನು ಖುದಾಯಿ ಖಿದ್ಮತಗಾರರನ್ನು ತಡೆದು ನಿಲ್ಲಿಸುವದು ಅಸಾಧ್ಯ, ಎಂದಿದ್ದಾರೆ. ಮುಖ್ಯವಾಗಿ ಮ. ಯ್ಯ ತೀರಿಸುವೆನೆಂಬ ಹೊಸ ಸಶಸ್ತ್ರ ರಾಜಕೀಯ ಪಕ್ಷವನ್ನು ಅವರ ವ. ಗಣಿಖಾನರ ನೇತೃತ್ವದಲ್ಲಿ ಸ್ಥಾಪಿಸಲಾಗಿದೆ,ನಗರಗಳಲ್ಲಿ ಲೀಗಿಗೆ ಬೆಂಬಲವಿದ್ದರೂ ಹಳ್ಳಿಗಳನ್ನು ಗಫಾರಖಾನರಿಗೇ ವಿಧೇಯವಾಗಿವೆ. ಜಾತೀಯ ದ್ವೇಷದ ಲಾಭ ಪಡೆದು ಚುನಾವಣೆ ಗೆಲ್ಲುವ ಲೀಗಿನ ಆಟವನ್ನು ತಡೆಯಲು ಅವರು ನಿರ್ಧರಿಸಿದ್ದಾರೆ. ಕಾಂ. ಕಾರ್ಯ ಸಮಿತಿಯ ಬೆಂಬಲ ಅವರಿಗೆ ಪೂರ್ಣವಾಗಿದೆ.

ಇತ್ತ ಪಂಜಾಬ ಬಂಗಾಲ ವಿಭಜನೆಯ ಚಳವಳಿಗೆ ಬೇರು ಬೆಳೆಯುತ್ತಿದೆ ಸೀಖರಿಗೆ ನಾನಾ ಆಮಿಷ, ಬೆದರಿಕೆ ತೋರಿಸಿ ಅವರನ್ನು ಒಡೆದು ಕೊಳ್ಳುವ ಪ್ರಯತ್ನವನ್ನು ಲೀಗ್ ಮುಂದಾಳುಗಳೆಷ್ಟೇ ಮಾಡಿದರೂ ಅದು ವಿಫಲವಾಗಿದೆ. ಗುರುದಾಸಪುರ, ರಾವಳಪಿಂಡಿಗಳ ಸೀಖರ ಅತ್ಯಾಚಾರ ಅವರನ್ನು ಇನ್ನಷ್ಟು ರೊಚ್ಚಿಗೆಬ್ಬಿಸಿದೆ. ವಿಭಜನೆಗೆ ಮುಸ್ಲಿಮರ ವಿರೋಧ ಬೆಳೆಯ ತೊಡಗಿದ್ದರಿಂದ ಮೊದಲು ಅದಕ್ಕೆ ಎದುರಾಡದಿದ್ದ ಜಿನ್ನಾ ಸಾಹೇಬರು ಕೂಡ ಈಗ ಹಿಂತೆಗೆಯಬೇಕಾಗಿದೆ. ನಿಜವಾಗಿ ಜಿನ್ನಾ ಸಾಹೇಬರು ಎಚ್ಚರಿಸಿದ ಪಿಶಾಚಿ ಅವರ ಕೈಮೀರಿ ಹೋಗಿದೆ. ಈ ಲೀಗಿನ ಹೆಸರಲ್ಲಿ ನಡೆದಿರುವ ಅನೇಕ ಕ್ರಿಯೆಗಳು ಅವರಿಗೆ ನಿಜವಾಗಿ ಮೆಚ್ಚುಗೆಯಿರಲಿಕ್ಕಿಲ್ಲ. ಅದರೆ ಅವರು ಅದಕ್ಕೆ ಸೈಗಟ್ಟಬೇಕು. ಇಲ್ಲವೆ ಪದಚ್ಯುತರಾಗಬೇಕು. ಅತ್ತ ಬಂಗಾಲದ ಮುಸಲ್ಮಾನರೆಲ್ಲನೇಕರು ಬಂಗಾಲ ಪಾಕಿಸ್ತಾನದಲ್ಲಿ ಸೇರಬಾರದೆಂದು ಸಾಧಿಸತೊಡಗಿದ್ದಾರೆ ಮುಖ್ಯಮಂತ್ರಿ ಸುಹ್ರವರ್ದಿಯವರು ಅಂಥವರಲ್ಲೊಬ್ಬರೆಂದು ನಂಬಲಾಗಿದೆ. ಬಂಗಾಲಿ ಮುಸ್ಲಿಂ ಲೀಗು ಘಟನಾಸಮಿತಿಯಲ್ಲಿ ಸೇರಲು ಕೂಡ ಒಯಸುತ್ತದೆಯೆಂದು ಗುಸು ಗುಸು ಇದೆ

ಸರ್ಪಖಾನದಲ್ಲಿ ೪೩ ಶಾಲೆಗಳ ಪುನರ್ರಚನೆಗೆಂದೂ ೧೧೬ ಹುಡುಗರ ಹಾಗು ೪೩ ಹುಡುಗಿಯರ ಶಾಲೆಗಳನ್ನು ಪ್ರಾರಂಭಿಸಲು ನಿಜಾಮ ಸರಕಾರದವರು ೩೦೧೩೦೫ ರೂಪಾಯಿಗಳನ್ನು ಮಂಜೂರ ಮಾಡಿರುವರು

ಕೆಂಪು ಜೋಳ ಉಣ್ಣಲು ಅಯೋಗ್ಯ

ಧುಲಸಾರದ ಸೀದಾ ಅಂಗಡಿಗಳಲ್ಲಿ ಕೊಡಲಾಗುತಿರುವ ಕೆಂಪು ಜೋಳ ಉಣ್ಣಲು ಅಯೋಗ್ಯವಿರುವದೆಂದು ಧುಲಸಾರದ ಮೊದಲನೆ ವರ್ಗದ ಮ್ಯಾಜಿಸ್ಟ್ರೇಟರಾದ ಡಾ ಪರ್ಡಿವಾಲಾರವರು ೭ ನೇ ತಾರೀಕು ತೀರ್ಪು ಕೊಟ್ಟರು. ಧುಲಸಾರ ನಗರ ಸಭೆಯ ಉಪಾಧ್ಯಕ್ಷರಾದ ಶ್ರೀ ಠಾಕೂರಭಾಯಿ ದೇಸಾಯರು ಸೀದಾಧಿಕಾರಿಗಳ ವಿರುದ್ಧ ಈ ಖಟ್ಲೆ ಹೂಡಿದ್ದರು. ಕೆಂಪು ಜೋಳ ಕೋರ್ಟಿನಲ್ಲಿ ಹಾಜರ ಮಾಡಲಾಗಿತ್ತು.

ಚಂದಾದಾರರಿಗೆ ಸೂಚನೆ

ಮೂರು ತಿಂಗಳಿಗೆ ಅಥವಾ ಕಡಿಮೆ ಮುದ್ದತಿಗೆ ವ್ಹಿ. ಪಿ. ಕಳಿಸುವದಿಲ್ಲ. ಮುಂಗಡ ಹಣ ಕಳಿಸಬೇಕು. ಅಂಚೆಯ ಅವ್ಯವಸ್ಥೆಯಿಂದ ಪತ್ರಿಕೆ ತಲ್ಪದಿದ್ದರೆ ನಾವು ಹೊಣೆಯಲ್ಲ. ಅವಧಿ ಮುಗಿಯುವದೆಂಬದನ್ನು ನೀವೇ ನೆನಪಿಟ್ಟು ಹಣ ಕಳಿಸಬೇಕು. ಯೋಗ್ಯ ವೇಳೆಗೆ ಹಣ ಬರದಿದ್ದರೆ ಏನನ್ನು ತಿಳಿಸದೆ ಪತ್ರಿಕೆ ನಿಲ್ಲಿಸಲಾಗುವದು.

ಕರ್ಮವೀರ ಚಂದಾಪಿವರ

ಅಂಚೆ ವೆಚ್ಚ ಸಹಿತ ಚಂದಾ ಹಣ ಮುಂಗಡ

೧ ವರ್ಷಕ್ಕೆ	೬—೪—೦
೬ ತಿಂಗಳಿಗೆ	೩—೪—೦
೩ ,,	೧-೧೨—೦

ವ್ಹಿ. ಪಿ. ಯಿಂದ ತರಿಸಿಕೊಂಡಲ್ಲಿ ಪ್ರತಿಗೆ ೬ ಆ ಹೆಚ್ಚಿಗೆ ಬೀಳುವದು

ಜನಪದ ಸಾಹಿತ್ಯ ಕನಸಿನ ಲೋಕದ್ದಲ್ಲ

ವಾಸ್ತವಜೀವನವೇ ಸಾಹಿತ್ಯದ ಸವಿಹೊನಲು

ಜನಸಾಮಾನ್ಯರ ಸಾಹಿತ್ಯದ ಸ್ವರೂಪದರ್ಶನ

ಜನಪದ ಗೋಷ್ಠಿಯ ಅಧ್ಯಕ್ಷರಾದ ಶ್ರೀ ಬೆಟಗೇರಿ ಕೃಷ್ಣಶರ್ಮರು ಈ ಸ್ಥಳಕ್ಕೆ ತಮ್ಮನ್ನಾರಿಸಿದ್ದಕ್ಕಾಗಿ ಕೃತಜ್ಞತೆಯ ಕಾಣಿಕೆಯನ್ನು ಸಲ್ಲಿಸಿ ಈ ಆಶಯದ ಭಾಷಣ ಮಾಡಿದರು.

ಮೊದಲು ನಾನು ಕೇಳಿದ ಮಾತುಗಳು ಹಳ್ಳಿಗರ ಬದುಕಿನ ಸುಖ-ದುಃಖಗಳಿಂದ ಬೆರಿತುವುಗಳು. ಮೊದಲು ಆಲಿಸಿದ ಕತೆ-ಕವನ ಗೀತಗಳು ಹಳ್ಳಿಯ ಸಾಮಾನ್ಯರ ಮನದಲ್ಲಿ ಮೂಡಿ ಬಂದುವುಗಳು. ಮೊದಲು ನೋಡಿದ ದೃಶ್ಯಕಾವ್ಯಗಳೆಂದರೆ ಕನ್ನಡ ಹಳ್ಳಿಗರಾಡುವ ಅಟ್ಟದಾಟಗಳು. ಎಳೆಯತನದಲ್ಲಿ ನನಗೆ ಲೋಕದ ಪರಿಚಯವನ್ನು ಮಾಡಿಕೊಟ್ಟುದೇ ಜನಸಾಮಾನ್ಯರಲ್ಲಿ ಅವತರಿಸಿ ಬಂದ ಸಾಹಿತ್ಯದೇವತೆಯ ಸಹಸ್ರಮುಖ ವಾಣಿ.

"ಹೋಳದಾ ಬೋನಕ್ಕೆ ಬೇಳಿಯಾ ತೊಗೆಯಾಗಿ
ಕಾಳಮ್ಮ ಕರೆದ ಹಯನಾಗಿ ಬೆಳುವಲದ
ಮೇಳ ನೋಡು......"

ಎಂದು ಬೆಳುವಲ ನಾಡಿಗರ-ಬದುಕಿನ ಸಾಮರಸ್ಯವನ್ನು ಮೆಚ್ಚಿ, ತಲೆದೂಗಿ ಸರ್ವಜ್ಞ ತೋರಿಸಿದ್ದಾನೆ. 'ಮೇಳ' 'ಹವಣ' ಎಂದರೆ ಸಾಮರಸ್ಯ. 'ಸಮರಸವೇ ಜೀವನ' ಎಂದು ಹೇಳಿದ ಇಂದಿನ ಹಿರಿಯ ಕವಿಗನೊಬ್ಬನ ಸೂತ್ರವಚನವು, ಅಂದಿನ ಆ ಸರ್ವಜ್ಞಮೂರ್ತಿಯ ವಿವರಣಾತ್ಮಕ ಪದ್ಯಗಳ ಅನುಸ್ಯಾನದಿಂದಲೆ ಹೊರಟಿದೆಯೋನೊ-ಎಂದು ಭಾವಿಸುವಂತಿದೆ. ಮೇಳದ ಬಾಳಿನ—ಹವಣದ ಬದುಕಿನ ಬೆಳುವಲ ನಾಡಿಗರು—ಅತ್ಮಪ್ರಜ್ಞೆಯನ್ನು ಮರೆಯದಿರುವದಕ—'ನಡೆದುದೆ ನೀತಿ, ನುಡಿದುದೆ ಸಾಹಿತ್ಯ' ಎನ್ನುವಂತೆ ಇದ್ದರು. ಕಿವಿಯಿಂದ ಕಿವಿಗೆ ಬಾಯಿಂದ ಬಾಯಿಗೆ—ಪರಂಪರೆಯಾಗಿ—ನಡೆದುಕೊಂಡ ಬಂದ ಜನಸಾಮಾನ್ಯರ ಸಾಹಿತ್ಯ—'ಶ್ರಾವಣ' ಸಾಹಿತ್ಯ ಮಾತ್ರ, ಸ್ಪಷ್ಟವಾಗಿ ಬೇರೆ ಬೇರೆ ಕಾಲದ—ಪ್ರದೇಶದ—ಹಳ್ಳಿಗರ ಜೀವನವನ್ನು ಸರಿಯಾಗಿ ಮೂಡಿಸಿಕೊಂಡು ನಿಂತಿದೆ. ಈ ಸಾಮಾನ್ಯರ ಸಾಹಿತ್ಯದ ಸ್ವರೂಪ ದರ್ಶನ ಮಾಡಿಸುವುದೆ ಇಂದಿನ ನನ್ನ ಭಾಷಣದ ಮುಖ್ಯ ಉದ್ದೇಶವಾಗಿದೆ.

ಜೀವನದಲ್ಲಿ ಸಾಹಿತ್ಯ

ಈಗಿನ ನಮ್ಮ ಹಳ್ಳಿಗರ ಹೀನ ದೀನ ಬದುಕು, ಅವರ ಮನುಷ್ಯತ್ವವನ್ನೆ ಮರೆಮಾಡಿಬಿಟ್ಟಿದೆ. ಹಸಿವು-ಬಡತನಗಳು ಅವರ ಸಂಸ್ಕೃತಿಯ ಹಿರಿಮೆಯನ್ನೆ ಹಿಂಜರಿಸಿ ಬಿಟ್ಟಿವೆ. 'ಪದನರಿದು ನುಡಿಯಲುಂ ನುಡಿದುದನ್ ಅರಿದು ಆರಯಲುಂ ಅರ್ಪರ್ ಆ ನಾಡವರ್ಗಳ್; ಚದುರರ್, ನಿಜದಿಂ ಕುರಿತೋದದೆಯುಂ ಕಾವ್ಯಪ್ರಯೋಗ ಪರಿಣತಮತಿಗಳ್' ಎಂದು ಹೇಳುವ ಜನ ಇಂದು ಉಪಹಾಸ್ಯ (ವಿಷಯರಾಗಿದ್ದಾರೆ. ತಮ್ಮದನ್ನೆಲ್ಲ ಮರೆತ-ಇನ್ನೊಬ್ಬರದನ್ನು ಅರಿಯದ, ಇಂದಿನ ನಮ್ಮ ಹಳ್ಳಿಗರ ಪರಿಸ್ಥಿತಿಗೆ ನಾಗರಿಕರೆನಿಸಿಕೊಳ್ಳುವ ನಮ್ಮ ಜನವೇ ಕಾರಣವಾಗಿದೆಯೆಂದು ನಮ್ಮ ನಾಗರಿಕರು ಅರಿತುಕೊಳ್ಳಬೇಕಾಗಿದೆ. ಈ ಅರಿವಿನಿಂದ ಹಳ್ಳಿಗರ ಜೀವನದಲ್ಲಿ –ಅಳಿದುಳಿದಿರುವ–ಅವರ ಸಂಸ್ಕೃತಿಯಲ್ಲಿ ಹೊಕ್ಕು ನೋಡಿದರೆ, ನಿಜವಾದ ಮಾನವತೆ ಎಲ್ಲಿ ಬೇಗನೆ ಅರಳಲು ಅವಕಾಶವಿದೆಯೆಂಬ ಸಂಗತಿ ಗೊತ್ತಾಗುವುದು.

ನಮ್ಮ ಹಳ್ಳಿಗಳಲ್ಲಿ ಅಂದು—ಹೆಂಗುಸರೆ ಆಗಲಿ ಗಂಡುಸರೆ ಆಗಲಿ, ಬಾಯಿ ತೆರೆದರೆ ಅವರ ನುಡಿಗೊಂದು ಹದವಾದ ಕಟ್ಟು, ನುಣ್ಪು ಇದ್ದುದು ಕಾಣುತ್ತಿತ್ತು. ಮಾತಿಗೆ ತೊಡಗಿದರೆ ಅರ್ಥವು ಸುಲಭವಾಗುವಂತೆ ಪಡೆನುಡಿ, ಗಾದೆಯ ಮಾತುಗಳ ಸೂರೆ. ಅವರ ನಿತ್ಯದ ವ್ಯಾವಹಾರಿಕ ಮಾತುಗಳನ್ನು ಕೇಳಿದರೆಯೆ ಅದೊಂದು ಸಾಹಿತ್ಯದ ಮಾತುಗಳನ್ನೆಷ್ಟು ಬಿಟ್ಟರೆ, ಹಳ್ಳಿಗರಲ್ಲಿಯ ಮಿಕ್ಕಮಾತುಗಳ ಗುಂಪೆಲ್ಲ ಒಂದೊಂದು ಬಗೆಯ ಸಾಹಿತ್ಯ. ಇದು ಗದ್ಯವಾಗಿ ಇದೆ; ಪದ್ಯವಾಗಿ ಇದೆ; ದೃಶ್ಯಕಾವ್ಯವಾಗಿ ಇದೆ.

ಹಳ್ಳಿಗರ ಸಾಹಿತ್ಯ ಕನಸಿನ ಲೋಕದ್ದಲ್ಲ; ಆಭಾಸದ ಬೆನ್ನನ್ನು ಹತ್ತಿ ಹೊರಟುದಲ್ಲ. ಅವರ ವಾಸ್ತವಜೀವನವೇ ಸಾಹಿತ್ಯದ ಸವಿಹೊನಲಾಗಿ ಹರಿಯುತ್ತಿರುವುದು; ಹಳ್ಳಿಗರೆಲ್ಲ ಅದರಲ್ಲಿ ಈಜುತ್ತಿರುವರು.

ಸಾಹಿತ್ಯದ ಸಮಯಗಳು

ಉದ್ಯಮದ ಸಮಯದಂತೆಯೆ ಉತ್ಸವ ಸಮಯಗಳಲ್ಲಿ ಬಳಸುವ ಸಾಮಾನ್ಯರ ಸಾಹಿತ್ಯವೂ ವಿವಿಧ ಮಾದರಿಯದಾಗಿರುವುದು. ಹಬ್ಬ, ಹುಣ್ಣಿವೆ, ಜಾತ್ರೆಗಳಲ್ಲಿ ಕೇಳಬರುವ ಸಾಹಿತ್ಯ ಒಂದು ಬಗೆಯದಾದರೆ, ಹುಟ್ಟುಹಬ್ಬ, ಮದುವೆ, ಮೈನೆರೆವುದು, ಮನೆ ತುಂಬಿಸುವುದು, ಉಡಿತುಂಬುವುದು ಮೊದಲಾದ ಶುಭ-ಶೋಭನ ಸಂದರ್ಭಗಳಲ್ಲಿ ಕೇಳಬರುವುದು ಇನ್ನೊಂದು ಬಗೆಯದು. ದೇವಭಕ್ತಿ, ದೇವ-ದೇವಿಯರ ಮಹಾತ್ಮ್ಯ, ಅವರ ಮಾನವಸದೃಶ ಲೀಲೆಗಳು, ತಮ್ಮ ಹಳ್ಳಿಯ ದೇವ-ದೇವಿಯರ ಪವಾಡ ವಿಶೇಷ ಅವರ ಸೌಂದರ್ಯ-ಶೌರ್ಯಗಳ ವರ್ಣನೆ—ಇವೆಲ್ಲ ಹಬ್ಬ, ಹುಣ್ಣಿವೆ, ಜಾತ್ರೆಗಳ ಕಾಲದ ಸಾಹಿತ್ಯದಲ್ಲಿ ಕಾಣುವುವು; ಗಂಡು—ಹೆಣ್ಣುಗಳ ಸೌಂದರ್ಯ-ಐಶ್ವರ್ಯಗಳು, ದಾಂಪತ್ಯ ಜೀವನದ ಶುಭಾಕಾಂಕ್ಷೆ ಸಂತಾನದ ಬಯಕೆ, ಅನುಕೂಲದಾಂಪತ್ಯದ ಸಮರಸ



ಶ್ರೀಯುತ ಬೆಟಗೇರಿ ಕೃಷ್ಣಶರ್ಮರು

ಸೌಂದರ್ಯ, ಪ್ರತಿಕೂಲ ದಾಂಪತ್ಯದ ವಿಷಮತೆಯ ವಿರಸಚಿತ್ರ, ಸಂಯೋಗಶೃಂಗಾರದ ಸಂಭ್ರಮ, ವಿರಹಜೀವನದ ವಿಭ್ರಮ ಇವೆಲ್ಲ ಶುಭಕಾರ್ಯದ ಸಾಹಿತ್ಯದಲ್ಲಿ ತುಂಬಿರುವುವು.

ಸಾಹಿತ್ಯ ಪ್ರಚಾರ

ವರ್ತಮಾನಕಾಲದಲ್ಲಿ ಶಿಕ್ಷಣದ ಮುಖ್ಯ ಲಕ್ಷಣವೆಂದರೆ ಸಾಕ್ಷರತೆ. ಈ ಸಾಕ್ಷರತೆಯ ಮುಖ್ಯ ಉದ್ದೇಶವೆಂದರೆ ಜೀವನ ಕಲಹ ನಿರ್ವಹಣ; ಎಂದರೆ ಧನ ಸಂಪಾದನ. ಆದರೆ ನಮ್ಮ ಜನಸಾಮಾನ್ಯರ ಕಲ್ಪನೆಯಂತೆ ಸಾಕ್ಷರತೆ ಶಿಕ್ಷಣದ ಮುಖ್ಯ ಲಕ್ಷಣವಲ್ಲ. ಅವರು ಅನ್ನ-ಧನಗಳ ಸಂಪಾದನೆಗಾಗಿ ಅಕ್ಷರಗಳನ್ನು ಕಲಿಯುವ ಕಾರಣವೇನೂ ಇರಲಿಲ್ಲ. 'ಸುಜಲಾ, ಸುಫಲಾ' ಆದ ಕನ್ನಡ ತಾಯಿ ಅವರ ದುಡಿತಕ್ಕೆ ತಕ್ಕ ಹಾಗೆ ಪಡೆತವನ್ನು ಒದಗಿಸುತ್ತಿದ್ದಳು. ಸುಖಜೀವನವನ್ನೆ ಅಪೇಕ್ಷಿಸುತ್ತಿರುವ ಆ ಜನರಿಗೆ, ಸಮಾಜದಲ್ಲೆಲ್ಲ ಶಾಂತಿ ಸಮತೆಗಳು ನೆಲೆಗೊಳ್ಳಬೇಕೆಂದು ಎನಿಸುತ್ತಿದ್ದಿತು. ಅದಕ್ಕೆ ತಕ್ಕುದಾಗಿ ಪ್ರತಿವ್ಯಕ್ತಿಯ ಮನಸ್ಸು, ಬುದ್ಧಿ, ಹೃದಯಗಳು ಒಳ್ಳೆಯ ಸಂಸ್ಕಾರ ಪಡೆದರೆ ಸಾಕೆಂಬ ಭಾವನೆ ಅವರಲ್ಲಿ ನೆಲಸಿತ್ತು. ಇಂತಹ ಸಂಸ್ಕಾರದ ಪ್ರಚಾರಕ್ಕಾಗಿ ಸಮಾಜದ ರಚನೆಯಲ್ಲಿಯೆ ಕೆಲವೊಂದು ವಿಶಿಷ್ಟ ಪಂಗಡಗಳನ್ನು ನಿರ್ಮಿಸಿ, ಆ ಪಂಗಡದ ಜನರ ಕಡೆಗೆ ಅದರ ಹೊಣೆಯನ್ನು ಒಪ್ಪಿಸಲಾಗಿತ್ತು. ಜಂಗಮರು, ಹರಿದಾಸರು, ಒಡೆಯರು, ಪುರಾಣಿಕರು, ಗೊಂದಲಿಗರು, ಕಿಂದರಿ ಜೋಗಿಗಳು, ಭಾಗವತರು, ಕತೆಗಾರರು, ಹಾಸ್ಯಗಾರರು ಇವರೆಲ್ಲ ಈ ಪಂಗಡಕ್ಕೆ ಸೇರಿದವರು. ಇವರು ತಮ್ಮ ಕಾರ್ಯಗಳಿಂದ ಚರವಿದ್ಯಾಲಯಗಳೆನಿಸಿಕೊಂಡು, ವ್ಯಕ್ತಿಗಳನ್ನು ಮಾನವತೆಯ ಮಟ್ಟಕ್ಕೆ (ಏರಿಸಿದರು; ಸಮಾಜವನ್ನು ತಿದ್ದಿ ಸಮತೆ-ಶಾಂತಿಗಳ ಆಗರವನ್ನಾಗಿಸಿದರು. ಮಾನವತೆಯ ವಿಕಾಸವನ್ನೇ ಇವರು ಗುರಿಯುರಿಸಿಕೊಂಡುದರಿಂದ, ಮತ-ಮತಗಳ ಕಿಡಿಗಳನ್ನು ಎಬ್ಬಿಸುವ ಕೆಲಸಕ್ಕೆ ಇವರು ಎಂದೂ ಪ್ರವೃತ್ತರಾಗಲಿಲ್ಲ.

ಜಾನಪದರ ಮನೋರಂಗ

ಇಂದು ಹಳ್ಳಿಗರು ತಮ್ಮನ್ನು ತಾವೇ ಕೆಲಸಕ್ಕೆ ಬಾರದವರೆಂದು ಭಾವಿಸಿಕೊಂಡಿದ್ದಾರೆ. ನಾಗರಿಕರೆಬ್ಬುವರು ಅವರ ಈ ಭಾವನೆಯ ಬೆಳವಣಿಗೆಗೆ ನೀರೆಯುತ್ತಿದ್ದಾರೆ. ವ್ಯಕ್ತಿಗೆ ಬೆಲೆಯಿಲ್ಲದಲ್ಲಿ ವ್ಯಕ್ತಿಯ ಕೃತಿ ಬೆಲೆ ಬಾಳುವುದು ಸಾಧ್ಯವಿದೆಯೆ? ಆದುದರಿಂದಲೆ ನಮ್ಮ ಹಳೆಯ ಸಂಸ್ಕೃತಿ ಪ್ರಚಾರಕ ವರ್ಗವೂ ಮನೋರಂಜಕರಾದರ ಮಂಡಲಿಯೂ ತಂತಮ್ಮ ಉದ್ಯಮಗಳಿಂದ ದೂರವಾಗಬೇಕಾಗಿ ಬಂದಿದೆ ಅದುದರಿಂದ ಅವರ ವಶದಲ್ಲಿದ್ದ ಸಾಹಿತ್ಯವಿಂದು ಚೆದರಿ ಹೋಗಿರುತ್ತದೆ; ತರುಣ ಸಂಶೋಧಕರ ದಾರಿಯನ್ನು ಕಾಯುತ್ತ ಎಲ್ಲೆಲ್ಲಿಯೋ ಅದು ಅಡಗಿಕೊಂಡು ಕುಳಿತಿದೆ.

ಹಳ್ಳಿಯ ಸಾಹಿತ್ಯಿಕರಲ್ಲಿ ಹೆಸರಿಗೆ ಹಂಬಲಿಸುವವರು ತೀರ ಕಡಿಮೆ ಜನರು. ಹದಗಾಲದಲ್ಲಿ ಹೂಗಳು ಅರಳುತಿರುವಂತೆ ಅಲ್ಲಿ ರಸಹೃದಯಗಳು ಅರಳಿ ಸಾಹಿತ್ಯದ ಸುಗಂಧ ಹೊರಕ್ಕೆ ಬಂದಿರುವುದು. ಕೀರ್ತಿಯನ್ನು ಕಾಮಿಸುವ ಬುದ್ಧಿಗೆ ಹೆಸರು—ದೆಸೆ ಬೇಕು. ವ್ಯಕ್ತಿಪೂಜೆಯ ಆಕಾಂಕ್ಷೆಗೆ ಕೀರ್ತಿಬೇಕು. ಆದರೆ ಸಮಷ್ಟಿ ದೃಷ್ಟಿಯಿದ್ದ ಹಳ್ಳಿಗರಿಗೆ ವೈಯಕ್ತಿಕ ಘನತೆ—ಅಹಂಕಾರಗಳ ಆಶೆಯೆ ಇರುವುದಿಲ್ಲವೇನೊ!

ದೇಸಿಯ ಸೊಗಸು

'ಜನಪದ ಸಾಹಿತ್ಯ'ದ ರೀತಿಯನ್ನು ನಮ್ಮ ಪೂರ್ವದ ಲಾಕ್ಷಣಿಕರು 'ದೇಸಿ' ಎಂದು ಕರೆದಿದ್ದಾರೆ. ದೇಶಿಯಲ್ಲಿ ವಿಶಿಷ್ಟವಾದ ಸೊಬಗು ಇದೆಯೆಂಬುದನ್ನು ನಮ್ಮ ಹಿರಿಯ ಕವಿಗಳಲ್ಲಿ ಕೆಲವರು ಎಂದೋ ಒಪ್ಪಿಕೊಂಡಿರುತ್ತಾರೆ. ಅನೇಕ ಮಹಾಕವಿಗಳೂ ದೇಶಿಯಲ್ಲಿ ದಾರಿ ನಡೆದಿದ್ದಾರೆ.

ಕವಿ ಕನಕದಾಸರು ತಮ್ಮ 'ಮೋಹನ ತರಂಗಿಣಿ' ಕಾವ್ಯದ ಪ್ರಾರಂಭದಲ್ಲಿ:

'ನಾಡೊಳಗುಳ್ಳ ಜಾಣರು ಜಾಣೆಯರೊಡ-
ನಾಡುವ ಸವಿಮಾತುಗಳ
ಪಾಡುಗಬ್ಬವ ಪರುಠವಿಸಿದ ಬಗೆಯ ನೀ
ನೋಡು ಮಾನಿನಿ ಮುಂದೆ ಮುಂದೆ!'

ಎಂದು ಹೇಳಿದುದನ್ನು ನೋಡಿದರೆ, ತನ್ನ ಕಾವ್ಯರೀತಿ ಸಂಪೂರ್ಣವಾಗಿ ದೇಸಿಯೆಂಬುದನ್ನು ಸಾರಿ ಹೇಳಿದಂತಿದೆ. ಆ ಕವಿಯ ಹೆಂಡತಿಯ:

'ವಾಣಿಯು ಧವನೆಂಬ ವ್ಯವಹಾರಿ ಪಟ್ಟಿಯ
ಗೋಣಿಯೊಳ್ ತುಂಬಿದ ರತ್ನ
ಓಣಿಯೊಳ್ ಚೆಲ್ಲಿದಂತಿದೆ ನಿನ್ನ ಕೃತಿಯೆಂಬ
ಮಾಣಿಕ ಮನ್ಮನೋನಾಥ!'

ಎಂಬ ವಿಮರ್ಶೆಯ ಮಾತು, ದೇಸಿಯ ಸ್ವೀಕರಣದ ಸಾರ್ಥಕತೆಯ ಪರಿಣಾಮವನ್ನು ಪ್ರಕಟಿಸುವಂತಹದಾಗಿದೆ.

ರತ್ನಾಕರ ವರ್ಣಿಯಂತೂ 'ಮಾರ್ಗ'ದ ಕಾವ್ಯಗಳನ್ನು ಬದಿಗೆ ಹೋಲಿಸಿ, ದೇಸಿಯ ಹಾಡುಗಬ್ಬಗಳನ್ನು ಕಬ್ಬಿಗೆ ಹೋಲಿಸಿದ್ದಾನೆ. ನಮ್ಮ ಸಾಹಿತ್ಯದಲ್ಲಿಯ ಈ ಕ್ರಾಂತಿಯ ಚರಿತ್ರೆಯನ್ನು ನೋಡಿದರೆ ನಿಜವಾದ ಜೀವಂತ ಸಾಹಿತ್ಯವು ಈ ಜನ ಸಾಮಾನ್ಯರಲ್ಲಿ ರೂಢವಾಗಿದ್ದುದೆ ಎಂಬುದು ಅಂಗೈನೆಲ್ಲಿಯಂತೆ ಸ್ಪಷ್ಟವಾಗಿ ಕಾಣುತ್ತದೆ. ಎಂತಲೇ ಲೋಹಚುಂಬಕದಂತೆ ಅದು ಕನ್ನಡ ರಸಜ್ಞರನ್ನು ತನ್ನ ಕಡೆಗೆ ಸೆಳೆದುಕೊಂಡಿತು; ಮುಂದಾಳಿನಂತೆ ತನ್ನ ದಾರಿಯಲ್ಲಿ ನಡೆಯಿಸತೊಡಗಿತು. ಬೆರಳೆಣಿಕೆಯ ಸಂಪ್ರದಾಯವಾದಿ ಪಂಡಿತರು 'ಇದು ಸಾಹಿತ್ಯವಲ್ಲ' ಎಂದು ಕೂಗು ಹಾಕುತ್ತಲಿದ್ದರೂ, ಯಾರೂ ಅವರ ಮಾತನ್ನು ಲೆಕ್ಕಿಸಲಿಲ್ಲ. ಸೌಲಭ್ಯ, ಆನಂದ, ತತ್ತ್ವಬೋಧೆ ಎಲ್ಲವೂ ಸಹಜವಾಗಿ ಸಿಕ್ಕುತ್ತಿರುವ ಈ ಸಾಮಾನ್ಯರ ಸಾಹಿತ್ಯ ರೀತಿಯನ್ನೇ ಬಹುಜನರು ಅನುಸರಿಸಿದರು.

ವಿವಿಧ ಮುಖಗಳು

ಗದ್ಯಸಾಹಿತ್ಯದಲ್ಲಿಯ ತೀರ ಸಣ್ಣ ರೂಪುಗಳೆಂದರೆ ಗಾದೆಯ ಮಾತುಗಳು ಕನ್ನಡಿಗರಲ್ಲಿ 'ಮಾತಿಗೆ ಮೊದಲು ಗಾದೆ, ಊಟಕ್ಕೆ ಮೊದಲು ಉಪ್ಪಿನಕಾಯಿ!' ಎಂತೆಂತಹ ಪರಂಪರಾಪ್ರಿಯ ವೈದಿಕರೂ ಗಾದೆಗಳಿಗೆ ಮನಸೋತು—ಮೈಮರೆತು—ಹೇಳುತ್ತಾರೆ.

ಗಾದೆಯ ಮಾತುಗಳು ಲೋಕವ್ಯವಹಾರವನ್ನು ಚೆನ್ನಾಗಿ ತಿಳುಹಬಲ್ಲವು. ನಮ್ಮಲ್ಲಿಯ ಒಂದೊಂದು ಪಂಗಡದವರ ವೈಶಿಷ್ಟ್ಯವನ್ನೂ ಪ್ರದೇಶಗಳ ವೈಶಿಷ್ಟ್ಯವನ್ನೂ ಈ ಗಾದೆಗಳು ಯಥಾವತ್ತಾಗಿ ಚಿತ್ರಿಸುವುವು.

ಗಾದೆಗಳ ಬಳಿಕ ಒಂದು ವ್ಯಕ್ತಲಕ್ಷಣದಿಂದ ಕೂಡಿ ತ್ರಿಪದಿಗಳಾಗಿರುವುವು. ಹಳ್ಳಿಗರಲ್ಲಿ ರೂಢವಾಗಿರುವ ತುಂಡುಕವನಗಳೆಲ್ಲ ಎಂದರೆ ಜೋಗುಳ, ಬೀಸುವಕಲ್ಲಿನ ಹಾಡು, ಬೇಸಾಯದ ಹಾಡುಗಳು, ಹೋಳಿಯ ಹಬ್ಬದ 'ಬಿಡಿಪದ' ಇವೆಲ್ಲ ತ್ರಿಪದಿಗಳೇ ಆಗಿವೆ.

ತ್ರಿಪದಿ ಹಿಗ್ಗಿ ಕಾಲಬದ್ಧವಾಗಿ ನಡೆದು ಚೌಪದಿಯಾಗಿ 'ಸಾಂಗತ್ಯ' ಎಂಬ ಹೆಸರನ್ನು ಪಡೆದಿದೆ. ಸಾಮಾನ್ಯವಾಗಿ ಉತ್ಸವ ಸಮಯದ ಹಾಡುಗಳು, ಮಂಗಲಕಾರ್ಯದ ಸೋಬಾನೆಗಳು, ಸುಗ್ಗಿ ಪದಗಳು, ಬೆಳುದಿಂಗಳಲ್ಲಿ ಹಾಡುವ ಕೋಲು ಹಾಡುಗಳು, ಜಾನಪದ ಕಥನ—ಕವನಗಳು ಈ ಸಾಂಗತ್ಯದ ಪರಿಗೆಯಲ್ಲಿಯೆ ಇರುವುವು.

ಗದ್ಯ ಸಾಹಿತ್ಯದ ಹಿರಿದಾದ ಕೃತಿಗಳೆಂದರೆ ಕತೆಗಳು. ಕನ್ನಡದಲ್ಲಿ ಕತೆಗಳ ಬಾಹುಳ್ಯವಿರುವಷ್ಟು ಇನ್ನೊಂದು ಭಾಷೆಯಲ್ಲಿ ಇದೆಯೊ ಇಲ್ಲವೊ? ದೀರ್ಘಕಾಲವಾಗಿ ನಡೆಯುವ ರಾಜ, ರಾಣಿ-ರಾಕ್ಷಸರ ರೋಮಾಂಚಕ ಕತೆಗಳು ಇದ್ದಂತೆ ಐತಿಹಾಸಿಕ ವ್ಯಕ್ತಿಯ ಪವಾಡಗಳನ್ನು ಬಣ್ಣಿಸುವ ತುಂಡುಗತೆಗಳೂ ಇರುವುವು.

ಪದ್ಯ ಸಾಹಿತ್ಯದ ಹಿರಿದಾದ ರೂಪು ಎಂದರೆ ಲಾವಣಿಗಳು. ಇದರಲ್ಲಿ ಪುರಾಣದ ಕತೆಗಳನ್ನು ಹಿಡಿದುಕೊಂಡುವು ಹೆಚ್ಚಾಗಿ ಇರುವುವು. ಬಾಗೇವಾಡಿಯ ಗೋಪಾಳ, ಪುರದುಂಡಿ, ಮುರಗೋಡದ ಕುಬಣ್ಣ, ತೇರದಾಳದ ಪ್ರಭುದೇವ ಮೊದಲಾದ ಕವಿಗಳ ಅಂಕಿತಗಳಿಂದ ಕೂಡಿದ ಪೌರಾಣಿಕ ಲಾವಣಿಗಳು ತುಂಬ ಇವೆ. ಶೈಲಿ, ಪ್ರಾಸ, ನರ್ತನ, ಕಥೆ, ಅರ್ಥಸೌಲಭ್ಯ ಇವುಗಳ ಮೂಲಕ ಈ ಲಾವಣಿಗಳು ಸಮೂಹಕ್ಕೆ ತುಂಬ ರುಚಿಸುವುವು. ವೀರ-ಕರುಣ-ಶೃಂಗಾರಗಳು ಈ ಲಾವಣಿಗಳಲ್ಲಿ ಸ್ಥಾಯೀಭಾವಗಳಾಗಿರುವುವು. ಇವಲ್ಲದೆ ಇನ್ನೂ ಅನೇಕ ತರ ಲಾವಣಿಗಳುಂಟು.

ಅಟ್ಟದ ಆಟ, ಬಯಲಾಟ, ತಾಳಮದ್ದಳೆ, ಯಕ್ಷಗಾನ, ಮೂಡಲಪಾಯ, ಶ್ರೀಕೃಷ್ಣಪಾರಿಜಾತ-ಇವೆಲ್ಲ ಅವರ ದೃಶ್ಯಸಾಹಿತ್ಯಗಳು. ಇದೇ ದಾರಿಯಲ್ಲಿ ಇತ್ತೀಚೆಗೆ 'ತಿರುನೀಲಕಂಠ' 'ಉಡುತಡಿಯ ಮಹಾದೇವಿ' 'ಹೇಮರಡ್ಡಿ ಮಲ್ಲಮ್ಮ' ಮೊದಲಾದ ಜಾನಪದ ಆಟಗಳು ಮುಂದೆ ಬಂದಿವೆ.

ಮುನ್ನೋಟ

ಕನ್ನಡ ಭಾಷೆಯನ್ನು ಒಂದು ಕಾಲದಲ್ಲಿ ಸಂಸ್ಕೃತ ಭಾಷೆಯು ಆಳಿ, ಅದರ ರೂಪವನ್ನು ಕೆಡಿಸಿತು: ಇಂದು ಅಂಗ್ಲಭಾಷೆ ಆಳಿ ಕನ್ನಡದನುಡಿಯನ್ನು ಕುಲಗೆಡಿಸಿಬಿಟ್ಟಿದೆ. ಕನ್ನಡವನ್ನು ಕನ್ನಡವನ್ನಾಗಿಯೆ ಮಾತನಾಡಬೇಕೆಂಬ-ಬರೆಯಬೇಕೆಂಬ-ಅಪೇಕ್ಷೆಯುಳ್ಳವರು, ಜಾನಪದ ಸಾಹಿತ್ಯದ ಅಭ್ಯಾಸವನ್ನು ಮಾಡಿಯೇ ಅದನ್ನು ಸಾಧಿಸಬಹುದಾಗಿದೆ. ಅಚ್ಚಗನ್ನಡದ ಚೆಲ್ವಿನ ನಾಮಪದಗಳೂ ಕ್ರಿಯಾಪದ ಪ್ರಯೋಗಗಳೂ ವಾಕ್ಯರಚನೆಗಳೂ ನಮಗೆ ಈ ಹಳ್ಳಿಯ ಸಾಹಿತ್ಯದಲ್ಲಿಯೆ ಹೆಚ್ಚಾಗಿ ಸಿಕ್ಕಬೇಕಾಗಿದೆ. ಕನ್ನಡದಲ್ಲಿ ಸಂಪೂರ್ಣವಾದ ಶಬ್ದಕೋಶವೊಂದನ್ನು ಅಣಿಗೊಳಿಸಬೇಕೆನ್ನುವವರು, ಕೇವಲ ಬರೆಹದಲ್ಲಿರುವ ಕನ್ನಡ ಸಾಹಿತ್ಯದಿಂದ ಅದನ್ನು ನೆರವೇರಿಸಲಾರರು. ಜನಪದ ಸಾಹಿತ್ಯದ ಪರಿಚಯ—ಅಭ್ಯಾಸಗಳಿಂದ ಅವರು ಖಂಡಿತ ತಮ್ಮ ಕೊರತೆಯನ್ನು ಕಡಿಮೆ ಮಾಡಿಕೊಳ್ಳಬಲ್ಲರು. ಹಳ್ಳಿಗರ ವ್ಯವಸಾಯದ ಎಲ್ಲ ಪರಿಭಾಷೆಗಳು ಹೆಚ್ಚಾಗಿ ಅಚ್ಚಗನ್ನಡದಲ್ಲಿ ಇರುವವು. ಹಳ್ಳಿಗರನ್ನು ಎಂದೂ ಕಾಣದ ಪಂಡಿತರು, ಪ್ರೊಫೆಸರರು, ಪಟ್ಟಣದ ಕಾರ್ಯಾಲಯದ ಕುರ್ಚಿಯ ಮೇಲೆ ಕುಳಿತುಕೊಂಡು ಕನ್ನಡ ಶಬ್ದ ಸಂಗ್ರಹದ ವ್ಯಾಪ್ತಿಯನ್ನು ತಿಳಿವ ಬಗೆ ಹೇಗೆ, ಅಳೆವ ಬಾರಿ ಹೇಗೆ?

ಜನಪದ ಸಾಹಿತ್ಯವನ್ನು ಸಂಗ್ರಹಿಸಿ ಪ್ರಕಟಿಸುವ ಪ್ರಯತ್ನಗಳು ನಮ್ಮಲ್ಲಿ ಇತ್ತೀಚೆಗೆ ಕೆಲವು ನಡೆದಿವೆ. ಆದರೆ ಒಬ್ಬಿಬ್ಬರ ಪ್ರಯತ್ನಗಳಿಂದ ಏನಾದೀತು? 'ಕೊಡದೊಳಗೆಷ್ಟು ಹಿಡಿಯುಗು ಸಮುದ್ರ ಜಲಂ? ವರಕಾಂಚನಾದ್ರಿ ಕನ್ನಡಿಯೊಳಗೆಷ್ಟು ತೋರ್ಪುದು?' ಎಂಬ ರತ್ನಾಕರಸಿದ್ಧನ ಉಪಮೆ ನೆನಪಿಗೆ ಬರುತ್ತದೆ. ನಮ್ಮ ನಾಡೇ ಒಂದು ಮುಖವಾಗಿ ಇದನ್ನು ಸಂಗ್ರಹಿಸಬೇಕು.

ಕನ್ನಡ ಸಂಸ್ಥಾನಗಳು

ಶಿರಪಟ್ಟಿಯಲ್ಲಿ ಗೆಳೆಯರ ಗುಂಪಿನ ಕಟ್ಟಡದಲ್ಲಿ ಸಂಸ್ಥಾಪಕರಾದ ದಿವಂಗತ ಮುಷಿ ಅಶ್ವತ್ಥರಾಯರ ಭಾವಚಿತ್ರದ ಅನಾವರಣ ಸಮಾರಂಭ ಶಾ॥ ॥ ಶ್ರೀ ಕೋರಿಯವರಿಂದ ನಡೆಯಿತು.

ಶಿವಮೊಗ್ಗಾ ಜಿಲ್ಲೆಯ ಆಹಾರ ಪರಿಸ್ಥಿತಿ ಚರ್ಚಿಸಲಾಯಿತು. ತೊಗರಿ ಬೇಳೆಯ ಅಭಾವವಿದ್ದುದರಿಂದ ಕಡ್ಲೆ ಮತ್ತು ಇತರ ಬೇಳೆಗಳನ್ನು ಉಪಯೋಗಿಸಬೇಕೆಂದು ತೀರ್ಮಾನವಾಯಿತು. ಜಿಲ್ಲೆಯಲ್ಲಿ ಸಾಕಷ್ಟು ಬೇಳೆ ಬಂದುದರಿಂದ ಅವನ್ನು ಹಂಚಲಾಗುವುದು.

ಔಂಧ ಸಂಸ್ಥಾನ ಚಿಕ್ಕಗಲಗಲಿ ಪತ್ರದಲ್ಲಿ ಹಳ್ಳೇರಂಗ ದೇವಸ್ಥಾನದ ಬಯಲಿನಲ್ಲಿ ಮುಂಬಯಿ ಪ್ರಾಂತಿಕ ರಡ್ಡಿ ಸಮಾಜದ ೪ ನೇ ಮಹಾಧಿವೇಶನ ೨೫ ಕ್ಕೆ ಜರಗುವದು. ಮೈಸೂರ ನ್ಯಾಯ ವಿಧಾಯಕ ಸಭೆಯ ಸದಸ್ಯರಾದ ಎಚ್. ಆರ್. ಗುರುವಾ ರೆಡ್ಡಿಯವರು ಅಧ್ಯಕ್ಷತೆ ವಹಿಸುವರು ಶ್ರೀಮಂತ ಅಪ್ಪಾಸಾಹೇಬಪಂತ ಔಂಧ ಇವರು ಅಧಿವೇಶನದ ಉದ್ಘಾಟನೆ ಮಾಡುವರು.

ನಾಲ್ಕು ಮಾತುಗಳು

ರಂಗನಾಥ ದಿವಾಕರರಿಂದ

ಘಟನಾ ಸಮಿತಿ

ಹೋದ ಮೇ ೩ಕ್ಕೆ ಘಟನಾ ಸಮಿತಿಯು ಪ್ರಾರಂಭಿಕ ಅಧಿವೇಶನದ (ಪ್ರಿಲಿಮಿನರಿ ಸೆಶನ್ನ) ಮೂರನೆ ಘಟ್ಟವು ಮುಗಿಯಿತು. ಪ್ರಾರಂಭಿಕ ಅಧಿವೇಶನದ ಯಥಾರ್ಥ ಕೆಲಸವೊ ಬಹುದು ಮುಗಿದು ಹೋಗಿದ್ದರೂ ಪ್ರತಿನಿತ್ಯವೂ ಬದಲಾಯಿಸುತಿರುವ ರಾಜಕೀಯ ಪರಿಸ್ಥಿತಿಯ ಮೂಲಕ ಆ ಅಧಿವೇಶನವನ್ನೆ ಮುಂದರಿಸಬೇಕಾಗಿ ಬಂದಿದೆ. ಅದನ್ನು ಮುಗಿಸಿದೊಡನೆ ಸಮಿತಿಯನ್ನು ಅ, ಬ, ಕ ಎಂದು ವಿಭಾಗಿಸಿ ಅಧಿವೇಶನವನ್ನು ಕೂಡಿಸಬೇಕಾಗುತ್ತದೆ. ಹಾಗೆ ವಿಭಾಗಿಸಬೇಕೊ ಬಾರದೊ ಇದು ಪಾಕಿಸ್ತಾನದ ಪ್ರಶ್ನೆಯ ನಿರ್ಣಯವನ್ನವಲಂಬಿಸಿದೆ. ಆ ನಿರ್ಣಯವು ಇನ್ನೂ ನೆನೆಗುದಿಗೆ ಬಿದ್ದಿದೆ! ಈ ಪರಿಸ್ಥಿತಿಯಲ್ಲಿ ಮುಂದಿನ ತಾರೀಖನ್ನು ನೇಮಿಸುವ ಅಧಿಕಾರವನ್ನು ಕೂಡ ಅಧ್ಯಕ್ಷರಿಗೆಯೆ ಒಪ್ಪಿಸಲಾಗಿದೆ.

ಪಾಕಿಸ್ತಾನದ ನಿರ್ಣಯ

ಲಾರ್ಡ ವೇವೆಲ್ಲರ ಯುಗವು ಮುಗಿದು ಲಾರ್ಡ ಮೌಂಟಬೇಟನ್ನರದು ಪ್ರಾರಂಭವಾಗಿ ಸುಮಾರು ಒಂದೂವರೆ ತಿಂಗಳಾಯಿತು. ಆದರೆ ಇನ್ನೂ ಯಾವ ನಿರ್ಣಯವೂ ಆಗಿಲ್ಲ. ಕೊನೆಯ ನಿರ್ಣಯವು ಇಂಗ್ಲಂಡದಲ್ಲಿಯೆ ಆಗತಕ್ಕದ್ದಿದೆ. ಪಾಕಿಸ್ತಾನ ಹಾಗೂ ಅದೇ ಕಾಲಕ್ಕೆ ಪಂಜಾಬ ಬಂಗಾಲಗಳ ವಿಭಜನೆ ಆಗತಕ್ಕದ್ದಿದೆ ಎಂದು ಪಟ್ಟಿವಾರ್ತೆ. ಆದರೆ ವಾತಾವರಣವು ಅತ್ಯಂತ ಅನಿಶ್ಚಿತವಿರುವದರಿಂದ ಭವಿಷ್ಯ ಹೇಳುವದು ಬಹಳ ಕಠಿಣ. ಹಿಂದು ಮತ್ತು ಮುಸಲ್ಮಾನರು ಪ್ರತ್ಯೇಕ ರಾಷ್ಟ್ರದವರು ಎಂಬುದು ಲೀಗಿನವರ ಹಟ. ಯಾವದೊಂದು ಗುಂಪಿನವರ ಅಭಿಪ್ರಾಯದ ವಿರುದ್ಧ ಅವರನ್ನು ಯಾವದೊಂದು ಘಟನೆಯಲ್ಲಿ ಸೇರಲೆಬೇಕು ಎಂದು ಒತ್ತಾಯ ಪಡಿಸಲು ಕಾಂಗ್ರೆಸ್ಸಿನವರು ಸಿದ್ಧರಿಲ್ಲ. ಅದೇ ಮಾತನ್ನೆತ್ತಿ ತಾವೂ ಯಾರನ್ನೂ ಒತ್ತಾಯಪಡಿಸಲಾರರು ಎಂದು ಬ್ರಿಟಿಶರು ಹೇಳುತಿರುವರು. ಆದರೆ ಒಂದಿಲ್ಲೊಂದು ರೀತಿ ಒತ್ತಾಯ ಪಡಿಸದೆ ಹೆಜ್ಜೆಯ ಮುಂದೆ ಬೀಳಲಾರದೆಂಬುದನ್ನು ಎಲ್ಲರೂ ತಿಳಿದಿರಬೇಕು. ಲೀಗಿನವರಿಗೆ ಪಾಕಿಸ್ತಾನ ಬೇಕು, ಪ್ರಾಂತ ವಿಭಜನೆ ಬೇಡ, ಕಾಂಗ್ರೆಸ್ಸಿನವರಿಗೆ ಅಖಂಡ ಹಿಂದುಸ್ತಾನವು ಬೇಕು. ಬ್ರಿಟಿಶರಿಗೆ ಹಿಂದು-ಮುಸಲ್ಮಾನ ಇವರಿಬ್ಬರೊಡನೆಯೂ ಸ್ನೇಹ ಹಾಗೂ ವ್ಯಾಪಾರ ಬೇಕಾಗಿವೆ. ಆದರೆ ಇವೆಲ್ಲವೂ ಒಂದೇ ಪೆಟ್ಟಿಗೆ ಸಾಧಿಸುವ ಯಾವ ಯುಕ್ತಿಯೂ ಇನ್ನೂ ಹೊರಟಿಲ್ಲ! ಅದರಿಂದ ಈಗ ಯಾವ ನಿರ್ಣಯವೂ ಕೊನೆಯ ನಿರ್ಣಯವಾಗಲರಿಯದು. ಆಯಾ ನಿರ್ಣಯದಿಂದ ಮತ್ತೆ ಹೊಸ ಪ್ರಶ್ನೆಗಳ ನಿರ್ಮಾಣವು ಆಗುತ್ತಿಟ್ಟಂತೆ.

ಪಾಕಿಸ್ತಾನ—ಮುಂದೆ?

ಈ ಮಾತನ್ನು ಒಮ್ಮೆ ಮುಗಿಸಿಕೊಂಡು ಸುಸೂತ್ರ ಸ್ನೇಹ ಭಾವದಿಂದ ಸಂಸಾರ ಮಾಡುವ ಎಂಬ ಭಾವನೆ ಲೀಗಿನವರಲ್ಲಿ ಸದ್ಯಕ್ಕಂತೂ ಇಲ್ಲ. ಆದುದರಿಂದಲೇ ಅವರು ವಿಭಜನೆಯನ್ನು ವಿರೋಧಿಸುವರು. ಯಾವ ತತ್ವಾಭಾಸವನ್ನು ಮುಂದೆ ಮಾಡಿ ಅವರು ಪಾಕಿಸ್ತಾನವನ್ನು ಬೇಡುವರೊ ಅದನ್ನೆ ಅವಲಂಬಿಸಿ ಅವರು ವಿಭಜನೆಗೆ ಒಪ್ಪಬೇಕಿತ್ತು. ಆದರೆ ಹಾಗೆ ಮಾಡದೆ ಅವರು ಬೇರೆ ದಾರಿಯನ್ನೆ ಹಿಡಿದಿರುವರು. ಆದುದರಿಂದ ಈ ಪಾಕಿಸ್ತಾನವನ್ನು ಕಟ್ಟಿಕೊಂಡು ಅವರು ಮುಂದೆ ಗಡಿನಾಡು, ಪಂಜಾಬ, ಸಿಂಧ, ಇವುಗಳನ್ನೂ ಬಂಗಾಲ ಆಸಾಮುಗಳೊಡನೆ ಕೂಡಿಸಲು ಒಂದು ಸಂಧಿಮಾರ್ಗದ (ಕಾರಿಡಾರ) ಹಟವನ್ನು ಹಿಡಿದರೆ ನಾವು ಆಶ್ಚರ್ಯಪಡಬೇಕಾಗಿಲ್ಲ. ಅದೇ ರೀತಿ ಪಾಕಿಸ್ತಾನದಲ್ಲಿ ಎಲ್ಲರೂ ಮುಸಲ್ಮಾನರೆ ಆಗುವಂತೆ ಪ್ರತ್ಯಕ್ಷ ಅಪ್ರತ್ಯಕ್ಷ ಒತ್ತಾಯದ ಮಾರ್ಗಗಳನ್ನು ಅವರು ಸ್ವೀಕರಿಸಿದರೆ ಅದೂ ಆಶ್ಚರ್ಯದ ಸಂಗತಿಯಲ್ಲ. ಆದುದರಿಂದಲೆ ಈಗ ಅವರು ಲೋಕವಿನಿಮಯವನ್ನು (ಎಕ್ಸ್‌ಚೇಂಜ ಆಫ್ ಪಾಪ್ಯುಲೇಶನ್) ಪ್ರತಿಪಾದಿಸುತಿರುವರು. ಅದೇ ರೀತಿ ಹಿಂದೂ ವಿಭಾಗದಲ್ಲಿಯು ಮುಸಲ್ಮಾನರ ಮೇಲೆ ಅತ್ಯಾಚಾರವಾಗುತಿದೆ ಎಂದು ಬೊಬ್ಬಾಟ ಎಬ್ಬಿಸಿ ಮುಂದೆ ದಾಳಿಯ ದಲ್ಲಿ ಸಹ ಅವರು ಕಡಿಮೆ ಮಾಡಲಿಕ್ಕಿಲ್ಲ ಎಂಬುದು ಸಿದ್ಧಾಂತದ ಮಾತು. ಯಾಕೆಂದರೆ ಪಾಕಿಸ್ತಾನದ ಉಗಮವೆ ಅವ್ಯಕ್ತಿಯಲ್ಲಿದೆ. ಆ ವ್ಯಕ್ತಿಯಿಂದ ಆಯಾ ಪರಿಣಾಮವು ನಡೆಯುತಿರುವವರೆಗೆ ಆಯಾ ಪರಿಣಾಮಗಳು ಆಗದೆ ಬಿಡವು. ಆದುದರಿಂದ ಈ ಪ್ರಶ್ನೆಗಳು ಕೇವಲ ಸಮಾಧಾನದ ಒಡಂಬಡಿಕೆಯಿಂದ ಬಿಡಿಸಲಾಗುವವೆಂಬ ಭರವಸೆಯನ್ನು ಯಾರೂ ಕೊಡಲಾರರು. ಬಲಾಬಲದ ಮೇಲೆಯೆ—ಆ ಬಲವು ಹಿಂಸಕವೆ ಇರಲಿ, ಅಹಿಂಸಕವೆ ಇರಲಿ—ಈ ಮಾತುಗಳೆಲ್ಲ ಅವಲಂಬಿಸಿವೆ ಎಂಬುದು ದಿನೇ ದಿನೇ ಸ್ಪಷ್ಟವಾಗುತ್ತ ನಡೆದಿದೆ.

ಮೂಲ ಭೂತ ಹಕ್ಕು

ಈ ಸಾರೆಯ ಘಟನಾ ಸಮಿತಿಯಲ್ಲಿ ನಡೆದ ಎಲ್ಲಕ್ಕೂ ಮಹತ್ವದ ಕೆಲಸವೆಂದರೆ ಮೂಲ ಭೂತ ಹಕ್ಕುಗಳ ಸ್ವೀಕಾರ. ಈ ಕೆಲಸವು ಇನ್ನೂ ಪೂರ್ಣವಾಗಿಲ್ಲ. ಹಲವು ಮಹತ್ವದ ಮಾತುಗಳ (ಉದಾ: ನಾಗರಿಕನ ವ್ಯಾಖ್ಯೆ) ಚರ್ಚೆ ಪೂರ್ಣವಾಗಲೆ ಇಲ್ಲ. ಆದರೂ ಎಷ್ಟೋ ಮಾತುಗಳು ಸ್ಪಷ್ಟವಾದವೆನ್ನಲು ಅಡ್ಡಿ ಇಲ್ಲ. ಆದರೆ ಹಲವು ಕಾರಣಗಳ ಮೂಲಕ ಈ ಮೂಲ ಭೂತ ಹಕ್ಕುಗಳ ಕರಡು ಅದೇಕೋ ಅಷ್ಟೊಂದು ಸ್ಫೂರ್ತಿದಾಯಕವೆನಿಸುವದಿಲ್ಲ. ಅದರಲ್ಲಿ ಕ್ರಾಂತಿಕಾರಕವಾದುದೇನೂ ಕಾಣುವದಿಲ್ಲ. ಹೊಸ ಸಮಾಜ ರಚನೆಯ ಹುರುಪು ಅದರಲ್ಲಿ ಹೊರಹೊಮ್ಮುವದಿಲ್ಲ. ಇದರ ಮುಖ್ಯ ಕಾರಣವೇನಂದರೆ, ಒಂದೇ ಒಂದು ಸ್ಫೂರ್ತಿಯ ಓಘದಲ್ಲಿ ಒಂದೇ ಉಸುರಿನಲ್ಲಿ ಅದು ಬರೆಯಲಾಗಿಲ್ಲ. ವಕೀಲರ ಕೈಯಲ್ಲಿ ಸಿಕ್ಕು ಒದ್ದಾಡಿ ಅದು ಹೊರಗೆ ಬಿದ್ದಂತೆ ಆಗಿದೆ! ಅನೇಕ ದೇಶಗಳ ಮೂಲಭೂತ ಹಕ್ಕುಗಳ ಪಟ್ಟಿಗಳನ್ನು ಎದುರು ಇಟ್ಟುಕೊಂಡು ಕಲಸುಮೇಲೋಗರಮಾಡಿ ನಮ್ಮ ಮುಂದೆ ಇಟ್ಟಂತೆ ಆಗಿದೆ. ಇರಲಿ. ಕ್ರಾಂತಿಯ ನಂತರ ಕೂಡುವ ಘಟನಾ ಸಮಿತಿ, ಕ್ರಾಂತಿಯಿಲ್ಲದೆ ಆಗುವ ಘಟನಾ ಸಮಿತಿ ಇವುಗಳಲ್ಲಿಯ ಅಂತರವನ್ನು ನೋಡಬೇಕಾದರೆ ಅದು ಇಲ್ಲಿ ಒಡೆದು ಕಾಣುವದು.

ಭಾಷಾನುಗುಣಪ್ರಾಂತ

ಕಾಣಲು ಬಹಳ ಸುಲಭ, ಸಮಂಜಸ. ಕಾಂಗ್ರೆಸ್ಸಿನವರು ಮೊದಲು ಒಪ್ಪಿದ ಸಂಗತಿ. ಹೀಗಿದ್ದರೂ ಘಟನಾಸಮಿತಿಯಲ್ಲಿ ಆ ಮಾತು ಆಗಲು ಎಷ್ಟು ತೊಂದರೆ, ಎಷ್ಟು ಅಡಚಣಿಗಳು? ಭಾಷಾನುಗುಣ ಪ್ರಾಂತರಚನೆಯ ಪ್ರಶ್ನೆಯನ್ನು ಈಗಲೆ ಎತ್ತಿದರೆ ಸತ್ತಾಂತರಕ್ಕೆ ತೊಂದರೆಯಾಗಬಹುದು. ಅದು ಮುಂದೆ ಬೀಳಬಹುದು ಎಂದು ಹೇಳಲಾಯಿತು. ಬಳಿಕ ಲೀಗಿನವರು ಘಟನಾಸಮಿತಿಯಲ್ಲಿ ಬರುವರೊ ಇಲ್ಲವೊ ಇದು ನಿಶ್ಚಿತವಾಗಿ ತಿಳಿದ ಬಳಿಕ ಈ ಪ್ರಶ್ನೆಯ ವಿಚಾರವನ್ನು ಕೈಕೊಳ್ಳುವದು ಯೋಗ್ಯವೆಂದು ಪ್ರತಿಪಾದಿಸಲ್ಪಟ್ಟಿತು. ಈ ಸಾರೆ ಆ ಎರಡೂ ಕಾರಣಗಳು ಇಲ್ಲದಾಗಿದ್ದವು. ಬ್ರಿಟಿಶರು ಸತ್ತಾಂತರ ಮಾಡಿ ಜೂನ ೧೯೪೮ರಲ್ಲಿ ಹೊರಟು ಹೋಗುವದು ನಿಶ್ಚಯ. ಅದೇ ರೀತಿ ಲೀಗಿನವರು ಸಮಿತಿಯಲ್ಲಿ ಬರುವದಿಲ್ಲ ಎಂಬದೂ ನಿಶ್ಚಿತ. ಅಂದಬಳಿಕ ಈ ಸಾರೆ ಆ ಪ್ರಶ್ನೆಯನ್ನು ಸರಲವಾಗಿ ಘ. ಸಮಿತಿಯಲ್ಲಿ ತರಬಹುದಾಗಿತ್ತು. ಆದರೆ ಅದೇಕೋ ಆ ಪ್ರಶ್ನೆಯತ್ತ ಬಹಳ ದುರ್ಲಕ್ಷ ಮಾಡುತ್ತಿದ್ದಾರೆ ಎಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ. ಬಹಳ ಒತ್ತಾಯ ಪಡಿಸಿದ ಬಳಿಕ ಈಗ ಆ ಎಲ್ಲ ಪ್ರಶ್ನೆಗಳನ್ನು ಕೇಂದ್ರ ಘಟನೆ ಹಾಗೂ ಪ್ರಾಂತಿಕ ಘಟನೆಗಳನ್ನು ಮಾಡಲು ನೇಮಿಸಲಾದ ಮಂಡಲದವರು ವಿಚಾರಿಸತಕ್ಕದ್ದೆಂದು ಅಧ್ಯಕ್ಷರು ಜಾಹೀರ ಪಡಿಸಿದರು. ಇದಾದರೂ ಒಂದು ದೊಡ್ಡ ಕೆಲಸವಾಯಿತೆಂದೇ ಹೇಳಬೇಕಾಗಿದೆ. ಇನ್ನು ಆ ಮಂಡಲಗಳು ಪ್ರತ್ಯಕ್ಷ ಕೆಲಸ ಮಾಡಲಾರಂಭಿಸಿದವೆಂದರೆ ಆಗ ಪುನಃ ಕಣ್ಣಲ್ಲಿ ಎಣ್ಣೆ ಹಾಕಿಕೊಂಡು ಕಾಯುತ್ತ ಕುಳಿತು ಆ ಪ್ರಶ್ನೆಗಳ ಚರ್ಚೆ ಅಲ್ಲಿ ನಡೆಯುವಂತೆ ಮಾಡಬೇಕಾಗುವದು. ಭಾಷಾನುಗುಣ ಪ್ರಾಂತರಚನೆ ಬೇಕಾದವರೆಲ್ಲ ಈ ಮಾತನ್ನು ಲಕ್ಷದಲ್ಲಿಟ್ಟು ನಡೆದುಕೊಳ್ಳಬೇಕಾದೀತು.

ವಿಧಾಯಕ ಕಾರ್ಯ

ಕಾಂಗ್ರೆಸ್ ಕಾರ್ಯಕಾರಿ ಸಮಿತಿಯವರು ವಿಧಾಯಕ ಕಾರ್ಯಕ್ಕಾಗಿ ಒಂದು ಪ್ರತ್ಯೇಕ ಸಮಿತಿಯನ್ನು ನೇಮಿಸಿದುದು ಬಹಳ ಮಹತ್ವದ ಸಂಗತಿಯು. ಸಮಿತಿಯ ಸಭಾಸದರು ಒಂದೊಂದು ವಿಷಯವನ್ನು ಕೈಕೊಂಡು ಕೆಲಸಮಾಡಲಸಾಧ್ಯವದು ಅಷ್ಟಕ್ಕೂ ಮಹತ್ವದ್ದು. ಆ ವಿಷಯಗಳಲ್ಲಿ ಪ್ರೌಢಶಿಕ್ಷಣ ಎಂಬುದು ಎಲ್ಲಕ್ಕೂ ಮಹತ್ವದ್ದು. ಇದೇ ಬರುವ ೧೨-೧೯೪೮ ರ ಗಳ ಸತ್ತಾಂತರವು ಒಂದೇ ಸವನೆ ನಡೆಯು ೨. ಹಿಂದುಸ್ತಾನದ ರಾಜ್ಯಭಾರವು ಹಿಂದೀಯರ ಮೇಲೆ ಬೀಳುವದು. ಪ್ರೌಢ ಮತದಾನ ಪದ್ಧತಿ ಅಮಲಿನಲ್ಲಿ ಬರುವದು. ಹಿಂದುಸ್ತಾನದ ಪ್ರೌಢರಿಗೆಲ್ಲ ಈ ಮಾತಿನ ಮಹತ್ವ, ಅವರ ಮೇಲೆ ಇದ್ದ ಹೊಣೆ, ನಾಗರಿಕತ್ವದ ಭಾರ, ಅವರವರ ಕರ್ತವ್ಯ, ಅವರಿಗೆ ಅವಶ್ಯವಿದ್ದ ಸಾಮಾನ್ಯ ಜ್ಞಾನ, ರಾಷ್ಟ್ರ, ರಾಷ್ಟ್ರದ ಕಾರಭಾರ, ಮತಾಧಿಕಾರದ ಮಹತ್ವ ಇತ್ಯಾದಿ ವಿಷಯಗಳನ್ನು ಈ ಮುಂದಿನ ಅಲ್ಪಾವಧಿಯಲ್ಲಿ ತಿಳಿಸಿಕೊಡುವ ಹೊಣೆ ಕಾಂಗ್ರೆಸ್ಸಿಗರ ಮೇಲೆಯೆ ಹೆಚ್ಚಾಗಿದೆ. ಅದೇ ಮೇರೆಗೆ ಪ್ರತಿಯೊಬ್ಬ ಸುಶಿಕ್ಷಿತನೆನಿಸಿಕೊಳ್ಳುವವನು ಕೂಡ ಈ ಹೊಣೆಯನ್ನು ತನ್ನ ಕ್ಷೇತ್ರದಲ್ಲಿ ಹೊರುವದು ಅವಶ್ಯವಿರುವದು. ಪತ್ರ, ಲೇಖ, ಛಾಯಿಮಾತು, ಚಿತ್ರಪಟ, ನಕ್ಷೆ, ವ್ಯಾಖ್ಯಾನ, ಕೀರ್ತನ, ಮುಂತಾದ ಅನೇಕಾನೇಕ ಸಾಧನಗಳ ಮೂಲಕ ಈ ಅವಾಢವ್ಯ ರಾಷ್ಟ್ರದ ಸ್ತ್ರೀಪುರುಷರಿಗೆ ಶಿಕ್ಷಣ ಕೊಡುವ ಮಹಾ ಕಾರ್ಯವನ್ನು ಮಾಡುವದು ಎಲ್ಲರ ಪವಿತ್ರವಾದ ಕರ್ತವ್ಯವಿರುವದು.

ಸ್ವಾಗತಾಧ್ಯಕ್ಷ ಶ್ರೀ ವಸುಪಾಲಪ್ಪನವರ ಭಾಷಣ

(೨ ನೇ ಪುಟದಿಂದ ಮುಂದರಿದುದು)

ದಂಡಿನವರು, ಪಂತರು, ಬಿಸ್ತಿ, ಹವಾಲದಾರ್, ಬೊಕ್ಕಸ, ರಾಯಸಂ, ಗೋಸಾವಿ, ಟಂಕಸಾಲಿ ವಂಶಜರು ಇರುವರು. ಮಂತ್ರಿಮನೆತನದ ಹಂಪರಸಪ್ಪನ ಮನೆತನದವರು ಸಹ ಇರುವರು. ಮೈಲಾರ, ಕುರ್ವತ್ತಿ ಮೊದಲಾದ ಪುರಾಣ ಪ್ರಸಿದ್ಧ ಸ್ಥಳಗಳಿವೆ. ಹರಪನಹಳ್ಳಿ ಕೆಂಪಯ್ಯ, ಅರಸೀಕೆರೆ ಕೋಲಶಾಂತಯ್ಯ, ಕೊಟ್ಟೂರು ಕೊಟ್ಟೂರೇಶ, ನಾಯಕನಟ್ಟಿ ತಿಪ್ಪೇರುದ್ರ, ಕೂಲಹಳ್ಳಿ ಗೋಣಿಬಸಪ್ಪ ಮೊದಲಾದ ಪ್ರಸಿದ್ಧ ತಪಸ್ವಿಗಳು ಆಗಿ ಹೋಗಿರುವರು. ನಮ್ಮ ಗ್ರಾಮದಲ್ಲಿ ವೈದ್ಯಮನೆತನದವರೂ, ಜ್ಯೋತಿಷ್ಯಶಾಸ್ತ್ರದಲ್ಲಿ ಮುಸಲ್ಮಾನ ಬಂಧುಗಳು ಪ್ರಾಶಸ್ತ್ಯವನ್ನು ಪಡೆದಿರುವದು ಒಂದು ವಿಶೇಷ ಸಂಗತಿ. ನಮ್ಮ ಭಾಗದ ಗೊಂಬೆಯಾಟವು ಬಹು ಕಲಾಪೂರ್ಣವಾದುದು. ಚಿಗಟೇರಿಯ ಬಂಗಾರವೂ, ಕಲ್ಲಹಳ್ಳಿಯ ಕಬ್ಬಿಣವೂ, ದೇವಗುಂಡನಹಳ್ಳಿಯ ವಜ್ರವೂ ಅಲ್ಲದೆ ಬಂಗಾರದಲ್ಲಿ ಹರಪನಹಳ್ಳಿಯ ಒರೆ ಎಂದು ನಮ್ಮ ನಾಡಿನಲ್ಲಿ ಪ್ರಸಿದ್ಧವಾಗಿದೆ. ಬಾಗಳೀ ಕಲ್ಲೇಶ್ವರ ದೇವಸ್ಥಾನ, ನೀಲಗುಂದದ ಭೀಮೇಶ ದೇವಸ್ಥಾನ ಮೊದಲಾದ ಶಿಲ್ಪಕಲೆಯ ಹೆಗ್ಗುರುತುಗಳು ಕಂಡುಬರುತ್ತವೆ. ಈ ಭಾಗದಲ್ಲಿ ಚಾಲುಕ್ಯರೂ ಕದಂಬರೂ ಪಲ್ಲವರೂ ರಾಷ್ಟ್ರಕೂಟರೂ ಗಂಗರಾಜರೂ ಮೊದಲಾದ ಕನ್ನಡ ಸಾಮ್ರಾಟರ ಪ್ರಭಾವವಿದ್ದು ಅವರ ಕಾಲದ ಸಂಸ್ಕೃತಿಗಳು ಈಗಲೂ ಕಂಡು ಬರುತ್ತವೆ.

ನಮ್ಮ ಜಿಲ್ಲೆಯಲ್ಲಿ ಇಲ್ಲಿಯ ಹೈಸ್ಕೂಲು ಮೊದಲನೆಯದಾಗಿದೆ. ಕನ್ನಡ ಚಳವಳಿಯು ೧೯೧೯ ರಿಂದ ಇಲ್ಲಿ ಜೋರಾಗಿ ನಡೆಸಲ್ಪಟ್ಟು ಆಂಧ್ರರ ಪ್ರಭಾವಕ್ಕೊಳಗಾಗಿದ್ದ ಈ ಜಿಲ್ಲೆಯಲ್ಲಿ ಕನ್ನಡ ಭಾಷೆಗೆ ಮೊದಲು ಸ್ಥಾನದೊರೆತುದು ಈ ಶಾಲೆಯಲ್ಲಿಯೇ! ರಾಷ್ಟ್ರದ ಸ್ವಾತಂತ್ರ್ಯಕ್ಕಾಗಿ ನಡೆದ ಸಂಗ್ರಾಮಗಳಲ್ಲಿ ಇಲ್ಲಿಯ ಜನರು ತಮ್ಮ ಶಕ್ತಿಮೀರಿ ಭಾಗ ತೆಗೆದುಕೊಂಡಿದ್ದಾರೆಂದು ಹೇಳಲು ಸಂತೋಷವಾಗುತ್ತದೆ.

ನಾಡಬಂಧುಗಳೇ, ಇದು ಕ್ರಾಂತಿಯ ಸಮಯವೆಂದು ತಮಗೆಲ್ಲರಿಗೂ ಗೊತ್ತುಂಟು. ದೇಶದಲ್ಲಿ ಸ್ವಾತಂತ್ರ್ಯರವಿಯು ಮೂಡುತ್ತಲಿದ್ದಾನೆ. ಕ್ಷಿಪ್ರದಲ್ಲಿಯೇ ಪರರ ಆಳಿಕೆಯು ಕೊನೆಗೊಂಡು ದೇಶವು ಸ್ವತಂತ್ರ ರಾಷ್ಟ್ರವಾಗಿ ಜಗತ್ತಿನಲ್ಲಿ ಗಣ್ಯಸ್ಥಾನವನ್ನು ಪಡೆದು ಮೆರೆಯುವ ಸುಚಿಹ್ನಗಳು ಎಲ್ಲೆಡೆಯಲ್ಲಿಯೂ ಕಂಡುಬರುತ್ತವೆ. ಸ್ವತಂತ್ರ ಹಿಂದುಸ್ತಾನದಲ್ಲಿ ಆಡಳಿತೆಯು ಸುಗಮವಾಗಿಯೂ ಸುಖದಾಯಕವಾಗಿಯೂ ನಡೆಯಬೇಕಾದರೆ ಭಾಷಾವಾರ ಪ್ರಾಂತರಚನೆಯು ಅತ್ಯವಶ್ಯಕವೆಂದು ಎಲ್ಲರಿಗೂ ಮನದಟ್ಟಾಗಿದೆ. ಹಿಂದುಸ್ತಾನದ ಭಾವೀ ಘಟನೆಯನ್ನು ತಯಾರಿಸಲೋಸುಗ ಕೂಡಿರುವ ಘಟನಾಸಮಿತಿಯಲ್ಲಿ ಈ ವಿಷಯವು ಪ್ರಮುಖವಾದದಾಗಿದೆ. ಇಂತಹ ಪರಿಸ್ಥಿತಿಯಲ್ಲಿ ನಮ್ಮ ನಾಡು ಬೇರೆಯವರ ಅಧಿಕಾರ ದಬ್ಬಾಳಿಕೆಗಾಗಲಿ, ಬೇರೆ ಯಾವದೇ ತರಹದ ವರ್ಚಸ್ಸಿಗಾಗಲಿ ಒಳಪಡದೆ ಆರ್ಥಿಕ ದೃಷ್ಟಿಯಿಂದಲೂ, ಸಾಂಸ್ಕೃತಿಕ ದೃಷ್ಟಿಯಿಂದಲೂ ಬಲವಾದ ಪ್ರಾಂತವಾಗಬೇಕು. ಆದಕ್ಕಾಗಿ ಹರಿದು ಹಂಚಿಹೋಗಿರುವ ಕನ್ನಡನಾಡು, ಭಾಷೆ ಒಂದಾಗಬೇಕು. ಉದಾಹರಣೆಗಾಗಿ ಮದ್ರಾಸ ಸರಕಾರದವರು ಕೈಕೊಂಡಿರುವ ತುಂಗಭದ್ರಾ ನೀರಾವರಿ ಯೋಜನೆಯಿಂದ ನಮ್ಮ ಜಿಲ್ಲೆಗೆ ಸಾಕಷ್ಟು ಫಲವಿಲ್ಲದೆ ಹಾನಿಯೆ ಹೆಚ್ಚಾಗಿರುವದು ಒಂದು ವಿಷಾದದ ಸಂಗತಿ. ಪ್ರೌಢ ವಿದ್ಯಾಭ್ಯಾಸಕ್ಕಾಗಿ ನಾವು ಪರಪ್ರಾಂತದ ವಿಶ್ವವಿದ್ಯಾನಿಲಯದ ಮೊರೆ ಹೋಗಬೇಕಾಗಿದೆ. ವಿಶಾಲವಾದ ಕನ್ನಡ ನಾಡಿನಲ್ಲಿ ಪರದೇಶದೊಡನೆ ಜರುಗಬಹುದಾದ ವ್ಯಾಪಾರದ ಅಭಿವೃದ್ಧಿಗಾಗಿ ಒಂದಾದರೂ ರೇವು ಪಟ್ಟಣವಿಲ್ಲ. ಇನ್ನೂ ಅನೇಕ ವಿಷಯಗಳಲ್ಲಿ ಹಿಂದುಳಿದಿರುವ ಕನ್ನಡ ನಾಡಿನ ಏಳ್ಗೆಗೆ ಅವಕಾಶವೇ ಇಲ್ಲದಂತಾಗಿದೆ. ಇವೆಲ್ಲಾ ಕುಂದು ಕೊರತೆಗಳನ್ನು ಹೋಗಲಾಡಿಸಿ ಕನ್ನಡ ನಾಡನ್ನು ಒಂದು ಸ್ವತಂತ್ರ ಪ್ರಾಂತವನ್ನಾಗಿ ಮಾಡಿ ಅದರ ಸರ್ವಾಂಗೀಣ ಉನ್ನತಿಗೆ ಹೆಣಗುವದು ಪ್ರತಿಯೊಬ್ಬ ಕನ್ನಡಿಗನ ಕರ್ತವ್ಯವಾಗಿದೆ.

ಕನ್ನಡ ಬಂಧುಗಳೇ, ನಮ್ಮಿಂದ ಒದಗಬಹುದಾದ ಅನಾನುಕೂಲತೆಗಳಿಗಾಗಿ ನಮ್ಮನ್ನು ಕ್ಷಮಿಸಬೇಕೆಂದು ತಮ್ಮನ್ನು ಮತ್ತೊಮ್ಮೆ ಬೇಡಿಕೊಳ್ಳುತ್ತೇನೆ.

ಸ್ವತಂತ್ರ ಹಿಂದುಸ್ತಾನದಲ್ಲಿ ಕರ್ನಾಟಕ ಪ್ರಾಂತವು ಶೀಘ್ರದಲ್ಲೇ ತಲೆದೋರಿ, ಕನ್ನಡ ನಾಡಿನ, ಜನತೆಯ ಮತ್ತು ಸಂಸ್ಕೃತಿಯ ಬೆಳಕು ಎಲ್ಲೆಡೆಯಲ್ಲಿಯೂ ಬೆಳಗಿ, ಕನ್ನಡ ಮಾತೆಯ ಧ್ವಜವು ಉಚ್ಚಸ್ಥಾನದಲ್ಲಿ ಹಾರಾಡುವಂತೆ ಅನುಗ್ರಹಿಸಲೆಂದು ಸರ್ವಶಕ್ತನಲ್ಲಿ ಪ್ರಾರ್ಥಿಸಿಕೊಳ್ಳುತ್ತೇನೆ.

'ಕರ್ನಾಟಕ ಮಾತೆಗೆ ಜಯವಾಗಲಿ'
'ಭಾರತಾಂಬೆಗೆ ಗೆಲುವಾಗಲಿ'
'ಜಯ ಹಿಂದ'



ಶೇಲಧಾ

ಪ್ರತಿಯೊಬ್ಬರಿಗೆ ಬೇಕಾಗುವ ಅಂಗಡಿಕಾರರು ಇಡುವ ಸಿದ್ಧೌಷಧಿಗಳು

ಜಂತು ಜುಲಾಬಿಗೆ
ಸೆಂಟೊನೈನ ಕಂಪೌಂಡ ಗುಳಿಗೆಗಳು
ವಾತ, ನೋವು, ಚರ್ಮರೋಗಗಳಿಗೆ
ನವನಾರಾಯಣ ತೈಲ
ಸುಟ್ಟ, ಜಜ್ಜಿದ, ಎಲ್ಲ ಘಾಯಗಳಿಗೆ
ನಿಯೋ ಸೆಪ್ಟಿಸ್ಪ್ರಾಡ ಮಲಮ
ಖಜ್ಜಿ, ಎಲ್ಲ ತರದ ಚರ್ಮ ರೋಗಗಳಿಗೆ
ಹುರುಕಿನ ಪುಡಿ
ಹಲ್ಲು ರೋಗ, ಘಟ್ಟ ಆಗಲಿಕ್ಕೆ
ಡೆಂಟೊ-ಕ್ಲೀನ ಪುಡಿ
ಎಲ್ಲ ತರದ ಜ್ವರ, ಜ್ವರಗಡ್ಡೆ ಅಶಕ್ತತೆಗೆ
ಎಂಟಿ ಮಲೇರಿಯಾ ಗುಳಿಗೆ
೧೨೦ ಕ್ಕೆ ೨-೦-೦

ಅಖಿಲ ಭಾರತ ಆಯುರ್ವೇದ ಕಾಂಗ್ರೆಸ ವ ಪ್ರದರ್ಶನದಲ್ಲಿ ಬಂಗಾರದ ಮೆಡಲ ವ ೧ ನೇ ತರಗತಿಯ ಪ್ರಶಸ್ತಿಪತ್ರ ಸಿಕ್ಕಿರುತ್ತದೆ. ವ್ಯಾಪಾರಿಗಳು ದರಗಳನ್ನು ತರಿಸಿಕೊಳ್ಳಬಹುದು.

ಶೇಲಧಾ ಕೆಮಿಕಲ್ ಕಂಪನಿ
ಬಡವರ ಬಂಧು ಕಾರ್ಯಾಲಯ ಸಿರಸಿ-ಕ್ಯಾನರಾ

ಹೊಸ ಪುಸ್ತಕ

ಭಾರತದಿಂದ ತೊಲಗಿರಿ

(ಕ್ವಿಟ್ ಇಂಡಿಯಾ)

ಬರೆದವರು—ಗಾಂಧಿಜಿ

ಬ್ರಿಟಿಷ ಸಾಮ್ರಾಜ್ಯದ ಏಕನಿಷ್ಠ ನಾಗರಿಕರಾದ ಗಾಂಧೀಜಿಯವರು ವೀರ ಬಂಡುಗಾರರಾಗಿ ಮಾರ್ಪಟ್ಟ ಕಥೆ.
ಕಾಂಗ್ರೆಸ್ಸಿನ 'ಕ್ವಿಟ್ ಇಂಡಿಯಾ' ಗೊತ್ತುವಳಿಯೂ ಇದರಲ್ಲಿದೆ.
ಪ್ರತಿಯೊಬ್ಬರೂ ಓದಲೇಬೇಕಾದ ಪುಸ್ತಕ ಬೆಲೆ ೧-೪-೦.
ಅಂಚೆವೆಚ್ಚ ಬೇರೆ. ಕೂಡಲೇ ಬರೆಯಿರಿ.

ಸಾಹಿತ್ಯ ಭಾಂಡಾರ ಕೊಪ್ಪೀಕರ ಬೀದಿ ಹುಬ್ಬಳ್ಳಿ.

ಕರ್ಮವೀರ
ಹರಿಜನ ಪುರವಣಿ

ನಿಯಂತ್ರಣಗಳು

ಟಾಟಾ ಸೋಶಲ್ ಸಾಯಿನ್ಸ ಇನ್ಸ್ಟಿಟ್ಯೂಟಿನ ಘಟಿಕೋತ್ಸವದ ಕಾಲಕ್ಕೆ ಮಾನ್ಯ ಸಿ. ರಾಜಗೋಪಾಲಾಚಾರ್ಯರವರು ಭಾಷಣಮಾಡುತ್ತ 'ಜೀವನವಿಂದು ಬಹಳ ವ್ಯಾಪಕ ಮತ್ತು ತೊಡಕಿನದಾಗಿದೆ. ಅದುದರಿಂದ ಈ ಜಗತ್ತಿನಲ್ಲಿ ಎಲ್ಲ ಬಗೆಯ ನಿಯಂತ್ರಣಗಳೆಲ್ಲ ಬಹುಶಃ ನಡೆಯತಕ್ಕದ್ದೆ' ಎಂಬುದಾಗಿ ಹೇಳಿದರು. 'ನಿಯಂತ್ರಣಗಳೇನು ತಾತ್ಪೂರ್ತಿಕವಲ್ಲ. ಆದರೆ ಶಾಶ್ವತವಾದ ಸಂಗತಿಗಳು' ಎಂದೂ ಅವರು ಹೇಳಿದರು. ಸಾಮಾನ್ಯ ಮನುಷ್ಯನಿಗೆ ಇದು ಪರಸ್ಪರ ವಿರುದ್ಧವಾಗಿ ತೋರುವವು. ಯುದ್ಧ ನಿಂತು ಸುಮಾರು ಎರಡು ವರ್ಷಗಳಾಗಿ ಹೋದರೂ ಜೀವನಾವಶ್ಯಕ ಮುಖ್ಯವಸ್ತುಗಳಿಗಾಗಿ ಯುದ್ಧಜನ್ಯ ಪರಿಸ್ಥಿತಿಯೀಗಲೂ ಹಾಗೆಯೆ ಇದೆ. ಆಹಾರ ಪದಾರ್ಥಗಳ ಕೊರತೆಯನ್ನು ಹೋಗಲಾಡಿಸಲು ಸಾಮಾಜಿಕ ನ್ಯಾಯದ ಕೆಲವೊಂದು ಉಪಾಯವೆಂದು ನಿಯಮ ನಿಬಂಧನೆಗಳು ಅವಶ್ಯವೆಂಬಲ್ಲಿ ಸಂದೇಹವಿಲ್ಲ. ಸೀದಾ ಕಾಯಿದೆ ಇನ್ನೂ ನಮ್ಮ ಬೆನ್ನು ಹಿಂದಿದೆ. ಕಳ್ಳಪೇಟೆಯು ಜೋರಿನಿಂದ ಸಾಗಿದೆ. ಲಾಭಬಡಕತನವು ಒಳ್ಳೆ ಊರ್ಜಿತ ಸ್ಥಿತಿಯಲ್ಲಿ ಸಾಗಿದೆ. ಮತ್ತು ಸರಕಾರ ನಿಯಂತ್ರಣಗಳಲ್ಲಿಯೆ ತೊಡಗಿದೆ. ಆಡಳಿತ ಸೂತ್ರದಲ್ಲಿ ಎಲ್ಲಿಯೊ ತಪ್ಪಿತೆಂದು ನೋಟಕರಿಗೆ ಎನಿಸುತಿದೆ. ಅದೇನೆಂಬುದನ್ನು ಮಾತ್ರ ಹೇಳಲು ಅನೇಕ ಜನರು ಅಸಮರ್ಥರಾಗಿರುವರು.

ಪೂರೈಕೆ ಮತ್ತು ಬೇಡಿಕೆಯ ತತ್ವವನ್ನೆ ಧಾರಣೆಯು ಮುಖ್ಯತಃ ಅವಲಂಬಿಸುತಿದೆ. ಅದುದರಿಂದ ಪದಾರ್ಥಗಳ ಮತ್ತು ಅವುಗಳ ಧಾರಣೆ ನಿಯಂತ್ರಣವು ಪೂರೈಕೆ ಮತ್ತು ಬೇಡಿಕೆಯನ್ನು ನಿಯಮಿತಗೊಳಿಸುವ ಮೂಲಕವೆ ಆಗಬೇಕು. ಸೀದಾದ ಮೂಲಕ ಬೇಡಿಕೆ ನಿಯಂತ್ರಣದ ಪ್ರಯತ್ನವಾಗಿದ್ದರೂ ಪೂರೈಕೆ ನಿಯಂತ್ರಣದ ಪ್ರಯತ್ನ ಸ್ವಲ್ಪವು ಇರುವದಿಲ್ಲ. ಧಾರಣೆಗಳನ್ನು ನಿಯಂತ್ರಿಸುತಿರುವ ಸರಕಾರದ ಸದ್ಯದ ಧೋರಣವು ಯಾವಾಗಲೂ ಮಿನಿಟಿನ ಮುಳ್ಳನ್ನೆ ತಿರುವುತ್ತ ನಡೆಯುವ ಘಡಿಯಾಳವನ್ನು ಹಾಕಿದಂತಾಗಿದೆ. ಯಂತ್ರವನ್ನು ಸರಿಪಡಿಸಿ ಘಡಿಯಾರವು ಸರಿಯಾಗಿ ನಡೆಯುವಂತೆ ನೋಡಿಕೊಳ್ಳಬೇಕೆಂದೇ ನಮ್ಮ ಬಯಕೆ. ಕೃತ್ರಿಮ ರೀತಿಯಿಂದ ಧಾರಣೆಗಳನ್ನು ನಿಯಂತ್ರಿಸಿದ್ದೇ ಬಹುಪಟ್ಟಿಗೆ ಕಳ್ಳಪೇಟೆಗೆ ಕಾರಣವಾಗಿದೆ. ಸ್ವಯಂಪ್ರವರ್ತಕ ರೀತಿಯಲ್ಲಿಯೆ ಈ ಧಾರಣೆಗಳನ್ನು ನಿಯಂತ್ರಿಸಬೇಕಲ್ಲದೆ ಸರಕಾರದ ಆಜ್ಞೆಯಿಂದಲ್ಲ. ಕಳ್ಳಪೇಟೆಯ ಮತ್ತು ಲಾಭಬಡಕತನದ ಪ್ರಚಂಡ ಪ್ರವಾಹವನ್ನು ತಡೆಯಲು ಕಿಂಗಕ್ಯಾನ್ಯೂಟನಂತೆ ಸರಕಾರ ಆಟಮಾಡುತಿದೆ. ಆದರೆ ಇದಕ್ಕಾಗಿ ಯೋಜಿಸಿದ ಕ್ರಮ ಅತ್ಯಂತ ಅಯಶಸ್ವಿಯಾಗಿದೆ. ಕಳ್ಳಪೇಟೆಗೆ ತಮಗೆ ಅವಕಾಶ ಸಿಕ್ಕುತಿದೆಯೆಂದು ಅನೇಕ ವ್ಯಾಪಾರಸ್ಥರು ಶಾಶ್ವತವಾಗಿ ನಿಯಂತ್ರಣಗಳು ಉಳಿಯಲೆಂದು ನಿಜವಾಗಿ ಅಭಿಪ್ರಾಯಪಡುತಿರುವರು. ಉಚ್ಚ ಸ್ಥಾನಗಳಲ್ಲಿಯ ಲಂಚಗುಳಿತನವೂ ನಿಯಂತ್ರಣಗಳೂ ಶಾಶ್ವತವಾಗಿ ಬಾಳಲೆಂಬ ವಿಷಯದಲ್ಲಿ ಆಸ್ಥೆವಹಿಸಿದೆ. ಆದರೆ ಇದೀಗ ಆಡಳಿತವನ್ನು ಸಾಗಿಸುತಿರುವ ಪ್ರಜಾಪ್ರತಿನಿಧಿಕ ಸರಕಾರಗಳು ಇವೆಲ್ಲ ವಿಷಯಗಳನ್ನು ಸರಿಪಡಿಸಿಕೊಳ್ಳುವದು ಅತ್ಯಂತ ಕಾಲೋಚಿತವಾಗಿದೆ.

ಕಳ್ಳಪೇಟೆಯನ್ನು ಹೋಗಲಾಡಿಸಿ ಪೂರೈಕೆ ಮತ್ತು ಬೇಡಿಕೆಯನ್ನು ಅಕೃತ್ರಿಮ ರೀತಿಯಿಂದ ನಿಯಂತ್ರಿಸಬೇಕೆಂದು ನಮ್ಮ ಮನೀಷೆಯಾಗಿದ್ದರೆ ಅದು ಸೀದಾ ಪದ್ಧತಿಯಿಂದ ಬೇಡಿಕೆಯನ್ನು ಕ್ರಮಗೊಳಿಸಬೇಕು. ಆದರೆ ಪೂರೈಕೆಯನ್ನು ಮಾತ್ರ— ಕೃತ್ರಿಮ ರೀತಿಯಿಂದ ಧಾರಣೆಗಳನ್ನು ಗೊತ್ತುಪಡಿಸುವ ಮಾರ್ಗದಿಂದಲ್ಲ ಆದರೆ ಪೂರೈಕೆಯನ್ನು ನಿಯಂತ್ರಿಸುವ ಸರಳ ಮಾರ್ಗದಿಂದಲೆ— ವ್ಯವಸ್ಥಿತಗೊಳಿಸತಕ್ಕದ್ದು. ಸರಕಾರದವರು ನಿಯಂತ್ರಣಕ್ಕೊಳಗಾಗುವ ಧಾನ್ಯಗಳನ್ನು ದೊಡ್ಡ ಪ್ರಮಾಣದಲ್ಲಿ ಸಂಗ್ರಹಿಸಿಟ್ಟು ಕೋಳಿ ವ್ಯಾಪಾರಸ್ಥರು ಧಾರಣೆಗಳನ್ನು ಮಿತಿಮೀರಿ ಏರಿಸಿ ವ್ಯಾಪಾರ ಮಾಡಲು ಪ್ರಾರಂಭಿಸಿದಾಗ ಗೊತ್ತುಪಡಿಸಿದ ಬೆಲೆಗೆ ತಮ್ಮ ಸಂಗ್ರಹವನ್ನೆ ಮಾರಲು ಅಣಿಯಾಗಬೇಕು. ವ್ಯಾಪಾರಸ್ಥರು ತಮ್ಮ ಕೃತಿಗಳಿಂದಲೆ ಇಂಥ ಉಗ್ರ ಉಪಾಯಗಳನ್ನು ಕೈಕೊಳ್ಳಲು ಸರಕಾರವನ್ನು ಆಮಂತ್ರಿಸುವವರೆಗೆ ಸರಕಾರ ಪೇಟೆಯಲ್ಲಿ ತನ್ನ ವಸ್ತುಗಳನ್ನು ಮಾರಲಿಕ್ಕೆ ಬರಲಾರದೆಂಬುದು ನಿಶ್ಚಿತ. ಸರಕಾರದ ಗೋಡೌನುಗಳು ಕೇವಲ ಆಪತ್ಕಾಲಕ್ಕೆಂದು ಹಾಗೆಯೆ ಉಳಿಯುವವು. ವ್ಯಾಪಾರಸ್ಥರು ಅನುಚಿತ ಧಾರಣೆಗಳನ್ನು ಏರಿಸುವರೊ ಹೇಗೆಂಬುದನ್ನು ನಿರೀಕ್ಷಿಸುತ್ತ ಕೂಡಬೇಕು. ಪೇಟೆಯು ತೇಜಿಯಾದ ಕೂಡಲೆ ಸರಕಾರ ವಖಾರದ ಬಾಗಿಲುಗಳನ್ನು ತೆರೆದು ಪೇಟೆಯಲ್ಲಿ ಆಯಾ ಪದಾರ್ಥಗಳನ್ನು ಸುರುವಬೇಕು, ಧಾರಣೆ ಕಡಿಮೆ ಮಾಡುವದೆ ಇದರ ಉದ್ದೇಶವಾಗಿರಬೇಕು. ಪೇಟೆಯ ಮೇಲೆ ಪರಿಣಾಮವಾಗುವದಕ್ಕಾಗಿ ಎಷ್ಟು ಧಾನ್ಯಗಳು ಅವಶ್ಯವೋ ಆ ಧಾನ್ಯದ ನೂರಕ್ಕೆ ೧೦–೧೫ ಕ್ಕಿಂತ ಹೆಚ್ಚು ಸರಕಾರದ ಧಾನ್ಯವಿರುವ ಅವಶ್ಯಕತೆಯಿಲ್ಲ.

ಇದೇನು ಹೊಸ ಕ್ರಮವಲ್ಲ. ಕಾಯದೆಯ ಇಲ್ಲವೆ ಸರಕಾರದ ಉಳಿದ ಅಧಿಕಾರದ ಸಹಾಯವಿಲ್ಲದೆ ಖಾಸಗಿ ಜನರ ನೇತೃತ್ವದಲ್ಲಿ ಸಂಸ್ಥಾಪಿಸಲ್ಪಟ್ಟ ಬಿಹಾರ ಕೇಂದ್ರ ಪರಿಹಾರ ಸಮಿತಿಯವರ ಕಾರ್ಯಕಲಾಪಗಳಲ್ಲಿ ಇದು ಯಶಸ್ವಿಯಾಗಿ ಪ್ರಯೋಗಿಸಲಾಗಿದೆ. ಕೇವಲ ಮನವೊಲಿಸುವ ಮಾರ್ಗವನ್ನೇ ಅವಲಂಬಿಸಿ ಧ್ಯೇಯವನ್ನು ಸಾಧಿಸಲಾಗಿದೆ. ಆರ್ಥಿಕ ಸಮಸ್ಯೆಯಲ್ಲಿಯೂ ಸೆಂಟ್ರಲ್ ಬ್ಯಾಂಕಿನವರು ಬಡ್ಡಿದರಗಳನ್ನು ನಿಯಂತ್ರಿಸುವಲ್ಲಿಯೂ ಇದೇ ಕ್ರಮವನ್ನು ಅನುಸರಿಸಿದ್ದುಂಟು. ಈ ಬಡ್ಡಿದರಗಳು ಅನೇಕರಿಗೆ ಕೇವಲ ಪೇಟೆಯ ಧಾರಣೆಗಳಾಗಿವೆ. ಯಾವದೋ ಒಂದು ತಿಳಿಯದ ಕಾರಣಕ್ಕಾಗಿ ಸರಕಾರ ಈ ಸರಳ ಮಾರ್ಗವನ್ನು ಅನುಸರಿಸಿರುವದಿಲ್ಲ. ಆದರೆ ಧಾರಣೆಗಳನ್ನು ಸ್ವಚ್ಛಂದ ರೀತಿಯಿಂದ ಗೊತ್ತುಪಡಿಸುವ ಕಿಂಗಕ್ಯಾನ್ಯೂಟನ ಮಾರ್ಗವನ್ನನುಸರಿಸಿರುವರು. ಈ ಮಾರ್ಗದಿಂದ ವಸ್ತುಗಳೆಲ್ಲ ಮಾಯವಾಗಲಿಕ್ಕೆ ಅವಕಾಶವನ್ನು ಕಲ್ಪಿಸಿಕೊಡಲಾಗಿದೆ. ಪೇಟೆಯ ಪರಿಸ್ಥಿತಿ ಸುಧಾರಿಸುತ್ತ ಹೋದಂತೆ ಸರಕಾರದವರು ವಸ್ತುಗಳ ಮೇಲಿನ ನಿಯಂತ್ರಣವನ್ನು ಕ್ರಮಶಃ ತೆಗೆದುಹಾಕುವ ಕಾಲವೇನು ಇನ್ನೂ ಮೀರಿ ಹೋಗಿಲ್ಲ. ಸದ್ಯದ ನಿಯಂತ್ರಣ ಪದ್ಧತಿಯಿಂದ ಜನತೆಗಾಗುತಿರುವ ಸಂಕಷ್ಟಗಳನ್ನೆಲ್ಲ ನಿವಾರಿಸಲು ಸರಕಾರಗಳು ಕೂಡಲೆ ಉಪಾಯಗಳನ್ನು ಯೋಜಿಸುವದಾಗಿ ಆಶಿಸುತ್ತೇವೆ.

— ಜೆ. ಸಿ. ಕುಮಾರಪ್ಪ

ಶಾಂತಿಯನ್ನು ಪ್ರಸ್ಥಾಪಿಸಬಲ್ಲೆವೇ ?

೭೦೦ ಟನ್ ಮಹಾಸ್ಫೋಟಕ ದ್ರವ್ಯಗಳು ಒಗೆಯಲ್ಪಟ್ಟದ್ದರಿಂದ ಹೆಲಿಗೋಲ್ಯಾಂಡಿನಲ್ಲಿಯ ದುರ್ಗಗಳೆಲ್ಲ ಹಾರಿಹೋದುವು. ಲಂಡನದ ಅಗ್ನಿಪ್ರಳಯದಿಂದ ಇಕ್ಕಟ್ಟಿನ ಹೊಲಸು ಬೀದಿಗಳೆಲ್ಲ ನಾಶವಾಗಿ ಆರೋಗ್ಯಕರ ಮತ್ತು ಸುಂದರ ನಗರವಾಗಿ ಕಂಗೊಳಿಸುತಿದೆ. ಈಗ ಹಳೆಯ ದುರ್ಗಗಳೆಲ್ಲ ಹಾರಿ ಹೋದುದರ ಪರಿಣಾಮವಾಗಿ ಹತ್ತಿಕ್ಕಲ್ಪಡಲಾರದ ಜರ್ಮನರಿಗೆ ಹೆಚ್ಚು ಉತ್ತಮ ಮತ್ತು ಆಧುನಿಕ ಸಂರಕ್ಷಕ ದುರ್ಗಗಳನ್ನು ಕಟ್ಟಿಸಿಕೊಂಡು ಭಾವೀ ದಾಳಿಗಾಗಿ ಅವನ್ನು ಪ್ರಯೋಗಿಸುವ ಸಂಧಿ ದೊರಕಬಹುದೊ?

ಶಾಂತಿ ಪ್ರಸ್ಥಾಪನೆಗಾಗಿ ಈ ಮಾರ್ಗವನ್ನನುಸರಿಸುವದು ಸಂಕುಚಿತ ದೃಷ್ಟಿಯು. ಇದು ಕೇವಲ ಲಕ್ಷಣವನ್ನು ವಾಸಿಮಾಡುವದಲ್ಲದೆ ಬೇನೆಯನ್ನಲ್ಲ. ಇದರ ಕಾರಣ ಬಹಳ ಆಳವಾಗಿದ್ದು ಅದರ ಬೇರು ಲೋಭ ಮೂಲವಾದ ಆರ್ಥಿಕ ವ್ಯವಸ್ಥೆಯಲ್ಲಿದೆ. ಕಾಲಕಾಲಕ್ಕೊದಗುವ ಪರೀಕ್ಷೆಗಳಿಂದ ಜಾಗತಿಕ ಸ್ವಾಗತಿಕ ಸ್ವಾತಂತ್ರ್ಯವನ್ನು ನಾವು ಯುಕ್ತಗೊಳಿಸುವದಾದರೆ ನಮ್ಮ ದೈನಿಕ ಜೀವನ ಮಾರ್ಗವನ್ನು ಸರಿಪಡಿಸಿಕೊಳ್ಳಬೇಕು. ಈ ದಿಸೆಯಲ್ಲಿ ನಾವು ಈ ಸಮಸ್ಯೆಯನ್ನು ಎದುರಿಸದಿದ್ದರೆ ಅದೆಂದಿಗೂ ಬಗೆಹರಿಯಲಾರದು. — ಜೆ. ಸಿ. ಕುಮಾರಪ್ಪ

ಹೆಚ್ಚು 'ಪ್ರಗತಿ'

ನಮ್ಮ ದೇಶದಲ್ಲಿ ಸೃಷ್ಟಿದೇವತೆ ಒದಗಿಸುತಿರುವ ಆಹಾರ ಸತ್ವಗಳ ನಾಶವು ಅಕ್ಷಮ್ಯ ಅಪರಾಧವೆಂದು ನಾವು ಈ ಮೊದಲಿನ ಸಂಚಿಕೆಯಲ್ಲಿ ತೋರಿಸಿಕೊಟ್ಟಿದ್ದೇವೆ. ಅಮೇರಿಕೆಯಲ್ಲಿ ಧಾರಣೆಗಳನ್ನು ಊರ್ಜಿತದಲ್ಲಿಡುವದಕ್ಕಾಗಿ ಬಟಾಟಿ, ಕಾಫಿ ಮೊದಲಾದವುಗಳನ್ನು ನಾಶಗೊಳಿಸಲಾಗುತ್ತದೆ. ಅದನ್ನು ನಾವು ನಿಷೇಧಿಸುತ್ತೇವೆ. ಆದರೆ ಅದೇ ಕಾಲಕ್ಕೆ ಅದೇ ಕಾರ್ಯವನ್ನು ಮಾಡುತಿರುವ ಸಕ್ಕರೆ ಗಿರಣಿಗಳಿಗೆ ನಾವು ಒಪ್ಪಿಗೆ ಕೊಡುತ್ತೇವೆ. ಬಿಳಿ ಸಕ್ಕರೆ ಇದ್ದಲಿಯಂತೆ ಕೇವಲ ಉತ್ಸಾಹಕ ವಸ್ತುವು. ಸಕ್ಕರೆ ಗಿರಣಿಗಳ ಲಕ್ಷಾಧೀಶರಿಗೆ ಹೆಚ್ಚು ಲಾಭವನ್ನೊದಗಿಸಿ ಕೊಡುವದಕ್ಕಾಗಿ ಕಬ್ಬಿನ ರಸದೊಳಗಿಂದ ಎಲ್ಲ ಪೌಷ್ಟಿಕ ಸತ್ವಗಳನ್ನು ಹೀರಿದ ನಂತರ ಇದು ದೊರಕುತ್ತದೆ.

ಬಂಗಾಲದಲ್ಲಿ ಹೊಸದಾಗಿ ೫ ಸಕ್ಕರೆ ಗಿರಣಿಗಳನ್ನು ಹಾಕುವದಕ್ಕಾಗಿ ಕೇಂದ್ರ ಸರಕಾರ ಅಪ್ಪಣೆ ಕೊಟ್ಟಿದೆಂದು ನಮಗೆ ತಿಳಿದುಬಂದಿದೆ. ಪ್ರತಿಯೊಂದು ಗಿರಣಿಯಲ್ಲಿ ದಿನಾಲು ೬೦೦ ಟನ್ ಸಕ್ಕರೆ ತಯಾರಾಗುತ್ತದೆ.

ಆರ್ಥಿಕ ಲಾಭದ ದೃಷ್ಟಿಯಿಂದ ನೋಡದೆ ಮಾನವೀಯ ದೃಷ್ಟಿಯಿಂದ ವಸ್ತುಗಳನ್ನು ನೋಡಲು ನಾವು ಕಲಿಯುವದೆಂದು?

— ಜೆ. ಸಿ. ಕುಮಾರಪ್ಪ

ಎರಡು ದೋಣಿಗಳಲ್ಲಿ ಕಾಲಿಡುವದು

ಮದ್ರಾಸ ಸದ್ಯದ ಮಂತ್ರಿಮಂಡಳವು ಪ್ರಕಾಶಂ ಮಂತ್ರಿಮಂಡಳದ ಕಾರ್ಯಕ್ರಮದಲ್ಲಿಯ ಪ್ರಗತಿಪರವಾದ ಒಂದೊಂದೇ ಯೋಜನೆಯನ್ನು ಬಿಟ್ಟುಕೊಡಹತ್ತಿರುವರು. ಆ ಮಂತ್ರಿಮಂಡಳದ ಸದ್ಯದ ಜವಳಿ ಧೋರಣದ ಬಗ್ಗೆ ಕೆಳಗಿನ ಪ್ರಕಟನೆಯನ್ನು ಹೊರಡಿಸಲಾಗಿದೆ.

"೧೯೪೬ ನೇ ಎಪ್ರಿಲ ತಿಂಗಳಲ್ಲಿ ಹಿಂದುಸ್ತಾನ ಸರಕಾರ ಯುದ್ಧೋತ್ತರ ಪುನರ್ರಚನೆಯ ಯೋಜನೆಯನ್ವಯ ಮದ್ರಾಸ ಪ್ರಾಂತಕ್ಕೆ ೩೫೩೦೦೦ (೨೦೦೦೦೦ ಸೂಕ್ಷ್ಮ ಮತ್ತು ೧೫೩೦೦೦ ಸ್ಥೂಲ) ಕದಿರುಗಳನ್ನು ಕೊಡಮಾಡಿದರು. ಈಗಿದ್ದ ೯ ಗಿರಣಿಗಳಿಗೆ ಮತ್ತು ಪ್ರಾಂತದಲ್ಲಿ ಸ್ಥಾಪಿತವಾಗಲಿರುವ ಹೊಸ ೨೫ ಗಿರಣಿಗಳಿಗಾಗಿ ಎಂದು ಈ ಸರಕಾರದ ಸೂಚನೆಯ ಮೇಲೆ ಈ ಕದಿರುಗಳನ್ನು ಕೊಡಮಾಡಿತು. ಹಿಂದುಸ್ತಾನ ಸರಕಾರ ಬಂಡವಲನ್ನು ಕೂಡಿಸಲಿಕ್ಕೆ ಅಪ್ಪಣೆ ಕೊಟ್ಟಿದ್ದಲ್ಲದೆ ಇವೆಲ್ಲ ಗಿರಣಿಗಳಿಗೆ ಆಯಾತ ಅಪ್ಪಣೆಯನ್ನು ದಯಪಾಲಿಸಿತು. ಅನೇಕ ಗಿರಣಿಗಾರರು ಹೊಸ ಕಟ್ಟಡಗಳನ್ನು ಕಟ್ಟಲು ಪ್ರಾರಂಭಿಸಿರುವರು. ಪಾಲುಗಳ ಹೊಸಕಂತುಗಳಿಗಾಗಿ ಬರೆದು ಹಣವನ್ನೂ ಸಂಗ್ರಹಿಸಿರುವರು. ಯಂತ್ರಗಳಿಗಾಗಿಯೂ ಬರೆದುಕೊಂಡಿರುವರು. ಇವೆಲ್ಲ ಗಿರಣಿಗಳು ಅಭಿವೃದ್ಧಿಯ ಬೇರೆ ಬೇರೆ ಮೆಟ್ಟಿಲುಗಳಲ್ಲಿವೆ.

"ಆದರೆ ಮುಂದೆ ಮದ್ರಾಸ ಸರಕಾರ ಪ್ರಾಂತದಲ್ಲಿ ಕೈನೂಲು ಮತ್ತು ಕೈಮಗ್ಗಗಳಿಗೆ ಪ್ರೋತ್ಸಾಹನೆ ಕೊಡುವ ಯೋಜನೆಯನ್ನು ಕೈಕೊಂಡಿತು. ಗಿರಣಿ ಉದ್ಯೋಗವನ್ನು ಬೆಳಸಿದ್ದಾದರೆ ಖಾದೀ ಯೋಜನೆಯ ಪ್ರಗತಿಗೆ ಅಡ್ಡಿಯಾಗುವದೆಂದು ಆಗ ಸರಕಾರಕ್ಕೆ ಎನಿಸಹತ್ತಿತು. ಅದುದರಿಂದ ಸರಕಾರದವರು ಜವಳಿ ಉದ್ಯೋಗದ ಸಂಬಂಧದಲ್ಲಿದ್ದ ತಮ್ಮ ಧೋರಣೆಯ ಪುನರ್ವಿಮರ್ಶೆ ಮಾಡಿ ಪ್ರಾಂತಕ್ಕೆ ಕೊಡಮಾಡಿದ ಕದಿರುಗಳನ್ನೆಲ್ಲ ಹಿಂದುಸ್ತಾನ ಸರಕಾರಕ್ಕೆ ತಿರುಗಿ ಬಿಟ್ಟುಕೊಟ್ಟರು! ಯಾವ ಗಿರಣಿಗಳಿಗೆ ಈ ಕದಿರುಗಳು ದೊರೆಯುತಿದ್ದವೊ ಅವರಿಗೆಲ್ಲ ಈ ವಿಷಯವನ್ನು ತಿಳಿಸಲಾಯಿತು.

"ಆದರೆ ಹಿಂದುಸ್ತಾನ ಸರಕಾರದವರು ಈ ರೀತಿ ಕದಿರುಗಳನ್ನು ಬಿಟ್ಟುಕೊಡಲಿಕ್ಕೆ ಒಪ್ಪಲಿಲ್ಲ. ಇದರಿಂದ ವಿಶ್ವಾಸಘಾತವಾದಂತಾಗುತ್ತದೆ ಮತ್ತು ವ್ಯಾಜ್ಯಕ್ಕೆ ಅವಕಾಶವುಂಟಾಗುತಿದೆಂಬ ಕಾರಣವನ್ನು ಹಿಂದುಸ್ತಾನ ಸರಕಾರದ ಮುಂದೆಮಾಡಿತು. ತನ್ನ ನಿರ್ಣಯದ ಪುನರ್ವಿಮರ್ಶೆ ಮಾಡಬೇಕೆಂದು ಈ ಸರಕಾರ ಹಿಂದುಸ್ತಾನ ಸರಕಾರಕ್ಕೆ ಕೇಳಿಕೊಂಡಿತು. ಆದರೆ ಹಿಂದುಸ್ತಾನ ಸರಕಾರದವರು ತಮ್ಮ ಮೊದಲಿನ ಅಭಿಪ್ರಾಯವನ್ನೆ ಸಮರ್ಥಿಸಿದರು. ಹಿಂದುಸ್ತಾನ ಸರಕಾರದ ಈ ಧೋರಣೆಗನುಸಾರವಾಗಿ ಈ ಸರಕಾರದ ಸಮಸ್ಯೆಯನ್ನು ಆಸ್ಥೆಯಿಂದ ವಿಚಾರಮಾಡಿ, ನೈತಿಕ ಮತ್ತು ಕಾಯದೆಯ ಕಾರಣಗಳಿಗಾಗಿ ಪ್ರಾಂತಗಳಿಗೆ ಕೊಡಮಾಡಿದ ಕದಿರುಗಳನ್ನು ತಿರುಗಿ ಒಪ್ಪಿಸಬೇಕೆಂಬ ಪ್ರಶ್ನೆಯಲ್ಲಿ ಅಷ್ಟೊಂದು ಆಗ್ರಹ ತಾಳಬಾರದೆಂದು ನಿರ್ಧರಿಸಿತು.

"ಈ ರೀತಿ ಕೊಡಮಾಡಿದ ಕದಿರುಗಳನ್ನು ಸರಕಾರ ಸ್ವೀಕರಿಸಿರುವದರಿಂದ ಖಾದೀ ಯೋಜನೆಯ ಸಂಬಂಧದಲ್ಲಿ ಇಟ್ಟುಕೊಂಡ ಧೋರಣವನ್ನು ಮದ್ರಾಸ ಸರಕಾರ ಬಿಟ್ಟುಕೊಟ್ಟಿಲ್ಲೆಂದು ಸ್ಪಷ್ಟವಾಗಿ ಹೇಳಬಯಸುತ್ತದೆ. ಈ ಖಾದೀ ಯೋಜನೆಯನ್ನು ಈಗಾಗಲೆ ೭ ಫಿರ್ಕಾಗಳಲ್ಲಿ ಜೋರಿನಿಂದ ಪ್ರಾರಂಭಿಸಲಾಗಿದ್ದು ಇನ್ನುಳಿದ ೨೭ ಫಿರ್ಕಾಗಳಲ್ಲಿಯೂ ಅದನ್ನು ಜಾರಿಯಲ್ಲಿ ತರಬೇಕೆಂದು ಯೋಜಿಸಲಾಗಿದೆ. ಅಖಿಲ ಭಾರತ ಚರಕ ಸಂಘದೊಡನೆ ವಿಚಾರ ವಿನಿಮಯಮಾಡಿ ಗೊತ್ತುಪಡಿಸಿದ ಯೋಜನೆಯನ್ನು ಒಳ್ಳೆ ರಭಸದಿಂದ ಕಾರ್ಯರೂಪದಲ್ಲಿ ತರಲಾಗುವದು. ೧೯೪೬ನೇ ಅಕ್ಟೋಬರ ೯ನೇ ತಾರೀಖಿಗೆ ಚರಕ ಸಂಘ ಪಾಸುಮಾಡಿದ ಗೊತ್ತುವಳಿಯಂತೆಯೂ ಕಾರ್ಯವನ್ನು ಪ್ರಾರಂಭಿಸಲಾಗುವದು."

ವಿಶಿಷ್ಟ ಹಿತಸಂಬಂಧಗಳಿಗೆ ಲಾಭದಾಯಕವಾದ ಈ ನೈತಿಕ ಮತ್ತು ಶಾಸನಬದ್ಧ ಕಾರಣಗಳಾವುವೆಂಬದನ್ನು ತಿಳಿಯಬಯಸುತ್ತೇವೆ. ಹೆಚ್ಚಿನ ಕಾರಣಗಳೇನಾದರೂ ಇದ್ದರೆ ಅವನ್ನು ಯಾವಾಗಲೂ ಮನ್ನಿಸಬೇಕಾಗುವದು. ಆದರೆ ಅವು ನಿಜವಾದ ಕಾರಣಗಳೆಂಬುದನ್ನು ಮಾತ್ರ ಸ್ಪಷ್ಟಪಡಿಸಬೇಕಾಗುವದು.

ಈ ವಿಶಿಷ್ಟ ಸಂದರ್ಭದಲ್ಲಿ ನೈತಿಕ ಕಾರಣವೆಂದರೆ ಸರಕಾರ ನಾಗರಿಕನೊಬ್ಬನಿಗೆ ಕೊಟ್ಟ ವಚನವೆಂದು ಹೇಳಬಹುದು. ಈ ವಚನದ ಪಾಲನೆಯಿಂದ ಸಾರ್ವಜನಿಕರ ಅಕಲ್ಯಾಣವಾಗುವದಿದ್ದರೆ ಅವಸರದಿಂದ ಇಟ್ಟ ಹೆಜ್ಜೆಯನ್ನು ಹಿಂದಕ್ಕೆ ತೆಗೆದುಕೊಂಡು ಅವಶ್ಯವೆನಿಸಿದರೆ ಸಂಬಂಧಿಸಿದ ನಾಗರಿಕನಿಗೆ ತಮ್ಮ ಧೋರಣದಿಂದ ಆಗಬಹುದಾದ ಹಾನಿಯ ಪರಿಹಾರವನ್ನು ತುಂಬಿಕೊಡುವದು ಕರ್ತವ್ಯವಾಗಿದೆ. ಏನಾದರೂ ಈ ಸಂದರ್ಭದಲ್ಲಿ ವಿಚಾರ ಮಾಡತಕ್ಕದ್ದು ಕೇವಲ ಶುದ್ಧ ಹಣದ ವಿಷಯ. ಯಾವದೇ ಗಿರಣಿಗಾರನು ಆತ್ಮೋದ್ಧಾರಕ್ಕಾಗಿ ಗಿರಣಿಯನ್ನು ನಡೆಸುವದಿಲ್ಲ. ತನ್ನ ಆತ್ಮ ವಿಶುದ್ಧವಾಗಲೇಬೇಕೆಂಬ ಮನೀಷೆಯು ಅವನದಿರುವದಿಲ್ಲ. ಅದುದರಿಂದ ಅವನಿಗಾದ ನಷ್ಟವನ್ನು ಸುಲಭವಾಗಿ ತುಂಬಿಕೊಡಬಹುದಾಗಿದೆ. ಈ ಬಗೆಯ ಮಾರ್ಗದಿಂದ ಕಾಯದೆಯ ಕಕ್ಷೆಯೊಳಗಿಂದಲೂ ಪಾರಾಗಬಹುದು. ಇನ್ನುಳಿದ ಯಾವದೆ ಬಗೆಯ ಕಾಯದೆಯ ತೊಡಕುಗಳಿದ್ದರೂ—ಮಹರ್ಷಿ ಪ್ರಣೀತ ಕಾಯದೆಗಳಿಂದ ಹೊರಟವುಗಳಲ್ಲ ಅಥವಾ ಸ್ವರ್ಗದಿಂದ ಇಳಿದು ಬಂದವುಗಳಲ್ಲ. ಆದರೆ ಕೇವಲ ಮನುಷ್ಯ ನಿರ್ಮಿತ ಕಾಯದೆಗಳು—ಅವನ್ನೆಲ್ಲ ದೈನಂದಿನ ಜೀವನಕ್ಕೆ ಅವಶ್ಯಕವಾಗುವ ರೀತಿಯಲ್ಲಿ ಬದಲಿಸಿಕೊಳ್ಳಬಹುದಾಗಿದೆ.

೧೯೩೫ ನೇ ಇಸ್ವಿಯ ಹಿಂದುಸ್ತಾನ ಸರಕಾರದ ಕಾಯದೆಯನ್ವಯ ಜವಳಿ ಗಿರಣಿಗಳ ವಿಷಯವು ಹಿಂದುಸ್ತಾನ ಸರಕಾರದ ಕಕ್ಷೆಯಲ್ಲಿ ಬರುವದು. ಆದರೆ ಮುಂದಿನ ವರುಷ ಬ್ರಿಟಿಶ್ ಸರಕಾರ ಹಿಂದುಸ್ತಾನವನ್ನು ಬಿಟ್ಟುಹೋದ ಕೂಡಲೆ ಈ ಕಾಯದೆ ನಿರ್ಮಾಲ್ಯವಾದಂತಾಗುವದು. ಜವಳಿ ಧೋರಣೆಯ ದೀರ್ಘಾವಧಿ ಯೋಜನೆಯು. ಕೆಲವೇ ತಿಂಗಳುಗಳಲ್ಲಿ ಬದಲಾಗಲಿರುವ ಕಾಯದೆಯು ನಮ್ಮ ಭಾವೀ ಯೋಜನೆಗಳ ಮೇಲೆ ಪರಿಣಾಮವನ್ನುಂಟುಮಾಡುವಂತೆ ಅವಕಾಶವನ್ನು ಕಲ್ಪಿಸಿಕೊಡಬಾರದು.

ಅದುದರಿಂದ ಸರಕಾರದ ಪ್ರಕಟನೆಯಲ್ಲಿ ಕೊಟ್ಟ ಕಾರಣಗಳು ಸಕಾರಣಗಳಲ್ಲ. ಹೊಸ ಗಿರಣಿಗಳನ್ನು ಹೊರಡಿಸುವಾಗ ಮತ್ತು ಇದ್ದಗಳನ್ನು ಅಭಿವೃದ್ಧಿಪಡಿಸುವಾಗ ಖಾದೀ ಕಾರ್ಯಕ್ರಮವನ್ನು ಪ್ರತಿಪಾದಿಸುವುದೆಂದರೆ ಏಕಕಾಲಕ್ಕೆ ಎರಡು ದೋಣಿಗಳಲ್ಲಿ ಕಾಲಿಟ್ಟಂತಾಗುವದು. ಇವೆರಡೂ ಯೋಜನೆಗಳು ಏಕಕಾಲದಲ್ಲಿ ಊರ್ಜಿತ ಹೊಂದಲಾರವು. ಗಿರಣಿಗಾರರ ಹಿತವನ್ನು ಸರಕಾರ ಬಯಸುತಿದ್ದರೆ ಅವರು ಪ್ರತ್ಯಕ್ಷವಾಗಿ ಹಾಗೆ ಮಾಡಬೇಕು. ಯಾವದೇ ಬಗೆಯ ಕಣ್ಣುಮುಚ್ಚಾಲೆಯ ಆಟವನ್ನು ನಡೆಸದೆ ಹೃತ್ಪೂರ್ವಕವಾಗಿ ಅದನ್ನು ಮಾಡಬೇಕು.

ಜೆ. ಸಿ. ಕುಮಾರಪ್ಪ

ಗಾಂಧೀಜಿಯ ಬಿಹಾರ ಯಾತ್ರೆ

೨೧—೪—೪೭

ಗಾಂಧೀಜಿಯವರು ಇಂದು ಸಾಪ್ತಾಹಿಕ ಮೌನವನ್ನು ಆಚರಿಸುತ್ತಿದ್ದುದರಿಂದ ಅವರ ಭಾಷಣವನ್ನು ಪ್ರಾರ್ಥನಾಸಭೆಯಲ್ಲಿ ಓದಿ ಹೇಳಲಾಯಿತು. ಅದರ ಅಧಿಕೃತ ಪಾಠ ಇಂತಿದೆ:

ಇಂದು ಸಂಜೆಯೂ ನಾನು ನಿಮಗೆ ಖಾದಿಯನ್ನು ಕುರಿತೇ ಮಾತಾಡಬೇಕಾಗಿದೆ. ನಿಜವಾದ ರಹಸ್ಯವಿರುವುದು ಕೈನೂಲಿನಲ್ಲಿ. ಪ್ರಾಚೀನ ಕಾಲದಿಂದಲೂ ನೂಲುವದು ಹೆಣ್ಣಿನ ವೈಶಿಷ್ಟ್ಯವೆಂದು ಪರಿಗಣಿಸಲ್ಪಟ್ಟಿತ್ತು. ಬಡ ಹೆಣ್ಣು ಪಾಪ, ಅವಳು ಗಂಡಿನ "ದಾಸಿ". ಗಂಡು ಅವಳಿಗೆ ಸಲಬೇಕಾದ ಕೂಲಿಯನ್ನು ಕೊಡುವ ಒಡೆಯ. ಮಧ್ಯಯುಗದಲ್ಲಿ ಅವಳು ಬರಿ ಹೊಟ್ಟೆ ತುಂಬಿಕೊಳ್ಳುವಷ್ಟು ಪ್ರತಿಫಲಕ್ಕೆ ನೂಲಬೇಕಾಗುತಿತ್ತು.

ಅಸಾಮ್‌ವೊಂದನ್ನು ಬಿಟ್ಟರೆ, ಬೇರೆಲ್ಲ ಕಡೆಗಳಲ್ಲಿ ನೇಯುವದು ಗಂಡಿನ ಕೆಲಸವೆಂದು ಬಗೆಯಲ್ಪಟ್ಟಿತ್ತು. ಅದ್ದರಿಂದಲೇ ಕೈನೇಯ್ಗೆಯಲ್ಲಿ ಜೀವನವೇ ಉಳಿದಿಲ್ಲ. ಅದರೆ ಕೈನೂಲಿನ ಸಮಸ್ತ ವೈಭವದ ಪುನರುಜ್ಜೀವನವಾದ ಹೊರತು ಕೈಮಗ್ಗಕ್ಕೆ ಬದುಕುವ ಆಸೆಯೇ ಅಲ್ಲ. ಈ ಪ್ರಕಾರ ಸ್ತ್ರೀ ಪುರುಷರಿಬ್ಬರೂ ಕೈಯಿಂದ ನೂಲುವದನ್ನು ತಮ್ಮ ಪವಿತ್ರ ಕರ್ತವ್ಯವೆಂದು ಕೈಕೊಳ್ಳಲಿ; ಅಂದರೆ ಹಿಂಜುವದು, ಹಂಜಿ ಮಾಡುವದು ಮತ್ತು ನೂಲುವದನ್ನೆಲ್ಲ ಒಂದೇ ವ್ಯಕ್ತಿ ಮಾಡದಿದ್ದರೆ, ಖಾದಿಗೆ ಉಳಿಗಾಲವಿಲ್ಲ. ಮೋಡಿ ಅಥವಾ ಫ್ಯಾಷನ್ನಿಗಾಗಿ ಖಾದಿಧಾರಣ ಮಾಡುವ ವಿಚಾರ ನನ್ನ ದೃಷ್ಟಿಯಲ್ಲಿಲ್ಲ. ನನ್ನ ಕಲ್ಪನೆಯ ಖಾದಿಯೆಂದರೆ ಅಖಿಲ ಹಿಂದುಸ್ಥಾನದಲ್ಲಿ ಗಿರಣಿ ಬಟ್ಟೆಯ ಸ್ಥಾನದಲ್ಲಿ ಮೆರೆಯುವ ಕೈನೂಲಿನ ಬಟ್ಟೆ. ಇಂಥ ಖಾದಿಯಿಂದ ಅಖಿಲ ಹಿಂದುಸ್ಥಾನಕ್ಕೆ ದೊರಕಬಹುದಾದ ಪ್ರಚಂಡ ಶಕ್ತಿಯ ಅಳವನ್ನು ವರ್ಣಿಸುವದು ಅಸಾಧ್ಯ.

ಹಿಂದುಸ್ಥಾನದ ಕೋಟ್ಯಾಂತರ ಪುರುಷರು, ತಾವು ಸ್ತ್ರೀಯರಿಗೆ ಮಾಡಿದ ಅನ್ಯಾಯದ ಪ್ರಾಯಶ್ಚಿತ್ತಾರ್ಥ ಕಪಟ್ಯಾಬುದ್ಧಿಯಿಂದಾದರೂ ಮತ್ತು ಸ್ತ್ರೀಯರು ಕರ್ತವ್ಯ [illegible]ಯಿಂದಲಾದರೂ ನೂಲದೆ ಹೋಗ್ತನವು ಬೇಕು. [illegible]ನೆಯ ಖಾದಿ ಹಿಂದು-ಮುಸಲ್ಮಾನ ಇವರಿಬ್ಬರ್‌ಗೂ [illegible] ಪ್ರಾಣಿಯೂ ಸ್ನೇಹ ಹಾಗೂ ವ್ಯಾಪಾರ [illegible] ನನ್ನ ಕಲ್ಪ[illegible] ಅದರೆ ಇವೆಲ್ಲವೂ ಸಾಗಿಯೇ ಉಳಿದೀತು. ಕೂಲಿಯಾಗಿ ನೂಲುವವರಿಗೆ ದೊರೆಯುವ ಪ್ರತಿಫಲ ಗಂಡಾಳಿಗೆ ಬೇರೆ ಕೆಲಸಕ್ಕಾಗಿ ದೊರೆಯುವಷ್ಟೇ ಇರಬೇಕು. ಸ್ತ್ರೀಪುರುಷರಲ್ಲಿ ಕೂಲಿಯ ವಿಷಯದಲ್ಲಿ ಪಕ್ಷಪಾತವಿರತಕ್ಕದಲ್ಲ. ಹೆಣ್ಣಿನ ಮೇಲಿನ ಗಂಡಿನ ಒಡೆತನ ಹೋಗಬೇಕು. ಗಂಡಸಿನ ಒಡೆತನದ ದಿನಗಳು ಸಂದುಹೋಗಿವೆ. ಇದನ್ನು ನಾವು ಒಪ್ಪಿಕೊಳ್ಳುವದಿಲ್ಲವೆಂಬ ಮಾತು ಬೇರೆ. ಅದರಿಂದ ಕಾಲಗತಿ ಬದಲಾಗಲಾರದು. ದೇವರು ಹೆಣ್ಣುಗಂಡೆಂಬ ಎರಡು ಹೋಳುಗಳಿಂದೂ ಒಂದು ಇಡಿಯನ್ನು ನಿರ್ಮಿಸಿದ್ದಾನೆ. ಈ ಪ್ರಕೃತಿಯೋಜನೆಯಲ್ಲಿ ಇಬ್ಬರೂ ಸಮಾನಿಕರು. ಲಿಂಗಸಮಾನತೆಯ ಈ ಸಿದ್ಧಾಂತವನ್ನು ಒರೆಗೆ ಹಚ್ಚುವದೇ ಖಾದಿಯ ಉದ್ದೇಶ.

ಚರಖಾ ಸಂಘ ಇದರಲ್ಲಿನ್ನೂ ಯಶಸ್ವಿಯಾಗಿಲ್ಲವಾದರೂ ಅದರ ಪ್ರಯತ್ನ ಆ ದೆಶೆಯಲ್ಲಿದೆ. ಗಿರಣಿಯೊಡೆಯನ ಹೆಂಡತಿಯು ಖಾದಿಯ ಪರಮ ಭಕ್ತಳಾಗುವ ಕಾಲ ಬರಲಿದೆ. ಆಗ ಹಿಂದುಸ್ಥಾನದಲ್ಲಿ ಗಿರಣಿಬಟ್ಟೆ ದೂರೀಕರಿಸಲ್ಪಟ್ಟು ಖಾದಿ ತಾನೇ ತಾನಾಗುವದು.

ನೀವು, ಬಿಹಾರದ ಹೆಂಗಸರು, ಆ ಸುದಿನದ ಉದಯಕ್ಕಾಗಿ ಮಹಾಪ್ರಯತ್ನ ಮಾಡುವಂತಾಗಲೆಂದು ಹಾರೈಸುವೆ.

೨೨—೪—೪೭

ಪ್ರಾರ್ಥನೆಯ ಬಳಿಕ ಗಾಂಧೀಜಿಯವರು ಹಿಂದುಸ್ತಾನಿ ತಾಲಿಮಿ ಸಂಘದ ಕಾರ್ಯಕಲಾಪಗಳ ಮಾತೆತ್ತಿದರು. ಈಗೆರಡು ದಿನಗಳಿಂದ ಅದರ ಅಧಿವೇಶನ ನಡೆದಿತ್ತು. ಈ ಸಂಘಕ್ಕೆ ಕಾಂಗ್ರೆಸ್ಸು ಒಂದು ರಾಯಕವನ್ನು ಕೊಟ್ಟಿತ್ತೆಂಬದು ಸಭಿಕರ ನೆನಪಿನಲ್ಲಿರಬಹುದೆಂದು ಗಾಂಧೀಜಿ ಹೇಳಿದರು. ಅದರಿಂದ ಶಿಕ್ಷಣ ವಿಷಯದಲ್ಲಿ ಕಾಂಗ್ರೆಸ್ಸು ಸಂಘದ ತಜ್ಞರ ಮಾರ್ಗದರ್ಶನ ಅನುಸರಿಸುವದೆಂದು ನಿರೀಕ್ಷಿಸುವದು [illegible]. ಈ ಗ್ರಹಿಕೆಗಿರುವ ಕಾರಣಗಳನ್ನು ವಿವರಿಸಲು ಇದು ಸಮಯವಲ್ಲ. ಅದರೂ ಅದನ್ನು [illegible] ಎನಿಸುತ್ತೇನೆಂದರವರು. ಡಾ|| ಝಾಕೀರ ಹುಸೇನ ಸಂಘದ ಅಧ್ಯಕ್ಷರು. ಅವರೊಬ್ಬ ಮಹಾ ಶಿಕ್ಷಣಶಾಸ್ತ್ರಿಗಳು. ಜಮೀಯಾ ಮಿಲ್ಲಿಯಾದ ಪ್ರಾಣವೇ ಅವರದೆಂದರೂ ಸಲ್ಲುವದು. ಅವರ ನೆರವಿಗೆ ಶ್ರೀ ಆರ್ಯನಾಯಕಮತ್ತು ಅವರ ಧರ್ಮಪತ್ನಿ ಆಶಾದೇವಿ ಇದ್ದಾರೆ. ಇವರಿ[illegible]ಸ್ಸಿನ ಎಂಟನೆ ವರ್ಷದಲ್ಲಿ ಕಾಲಿಟ್ಟಿದೆ. ಅದಕ್ಕೆ ಹೊಸಬಗೆಯ ಶಿಕ್ಷಣ (ನಯೀತಾಲೀಮ) ವೆಂದು ಹೆಸರು ಬರಲು ಬೇರೇನೂ ಕಾರಣವಿಲ್ಲದೆ ಅದು ದೇಶದಿಂದ ಕೈಗಡ ತಂದದ್ದಾಗಲಿ ಒತ್ತಾಯದಿಂದ ಹೇರಿದ್ದಾಗಲಿ ಇಲ್ಲದುದು ಮತ್ತು ಅದು ಹಳ್ಳಿಗಳ ರಾಜ್ಯವಾದ ಹಿಂದುಸ್ಥಾನದ ಸ್ಥಿತಿಗತಿಗೆ ಸರಿಹೋಗುತಿರುವದೂ ಕಾರಣವಾಗಿದೆ. ಮನುಷ್ಯನ ತ್ರಿಭಾಗಗಳಾದ ದೇಹಬುದ್ಧಿ ಚೇತನಗಳಲ್ಲಿ ಸಾಮರಸ್ಯವನ್ನುಂಟು ಮಾಡುವದರಲ್ಲಿ ಅದರ ವಿಶ್ವಾಸವಿದೆ. ದೇಹಬುದ್ಧಿಗಳಿಗಷ್ಟೇ ಪ್ರಾಧಾನ್ಯವಿತ್ತು ಚೇತನವನ್ನು ಹತ್ತಿಕ್ಕುವ ಪಾಶ್ಚಿಮಾತ್ಯರ ಯುಕ್ತಿಪ್ರಿಯಶಿಕ್ಷಣಕ್ಕಿಂತ ಇದು ಭಿನ್ನವಾಗಿದೆ. ಕೈಗಾರಿಕೆಗಳ ಮೂಲಕ ಶಿಕ್ಷಣಕೊಟ್ಟರೆ ಮಾತ್ರ ಇದು ಅತ್ಯಂತ ಯಶಸ್ವಿಯಾದೀತು. ಶಿಕ್ಷಣ ಹಣದ ವಿಷಯದಲ್ಲಿ ಪೂರ್ಣ ಸ್ವಾವಲಂಬಿಯಾಗಬೇಕೆಂಬುದು ಅದರ ಇನ್ನೊಂದು ವೈಶಿಷ್ಟ್ಯ. ಅದು ಶಿಕ್ಷಣಕ್ಕಾಗಿ ಕೋಟ್ಯಂತರ ರೂಪಾಯಿ ಕೊಡಬೇಕೆಂದು ರಾಷ್ಟ್ರದ ಮುಂದೆ ಕೈನೀಡುವದಿಲ್ಲ. ಸ್ವಾವಲಂಬಿ ಶಿಕ್ಷಣದ ಕಲ್ಪನೆಯ ವಿಸ್ತಾರವನ್ನು ನಾಳೆ ಮಾಡುವದಾಗಿ ಗಾಂಧೀಜಿ ಹೇಳಿದರು.

ಮುಂದೆ ಹಿಂದೀಯರು ಇಂಗ್ಲಿಷಿನ ಬದಲು ಹಿಂದುಸ್ತಾನಿಯನ್ನೇ ಉಪಯೋಗಿಸಬೇಕೆಂದು ಬಲವತ್ತರವಾಗಿ ಗಾಂಧೀಜಿ ಪ್ರತಿಪಾದಿಸಿದರು. ಈಚೆಗೆ ಹೊರಡಿಸಲ್ಪಟ್ಟ ಗಾಂಧೀಜಿನ್ನಾ ಜತೆ ವಿನಂತಿಗೆ ತಾವು ಉದ್ದೇಶಪೂರ್ವಕವಾಗಿ ಹಿಂದೀ ಉರ್ದುಗಳೆರಡರಲ್ಲೂ ಅಂಕಿತವಿಕ್ಕಿದುದನ್ನು ಅವರು ಉಲ್ಲೇಖಿಸಿದರು.

ಈ ರೂಢಿಭಂಗವನ್ನು ಲಾರ್ಡ ಲುಯಿ ಮೌಂಟಬ್ಯಾಟನ್ನರು ಮನಸಿಗೆ ಹಚ್ಚಿಕೊಳ್ಳಲಿಲ್ಲ. ಬ್ರಿಟಿಶರು ಇಷ್ಟರಲ್ಲಿ ಹಿಂದುಸ್ತಾನದಿಂದ ಕಾಲ್ತೆಗೆಯುವವರಿದ್ದಾರೆಂದು ಅವರಿಗೆ ಚನ್ನಾಗಿ ಗೊತ್ತು.

೨೩—೪—೪೭

ಇಂದ್ರ[illegible] ನಂತರ ಕೂಡುವ [illegible] ಆಗಿದೆ. ಇರಲಿ. ಕಾಂ[illegible] ಲ್ಲದೆ [illegible] ಪ್ರಾರ್ಥನಾನಂತರ ಗಾಂಧೀಜಿ ಪುನಃ "ನಯೀ ತಾಲೀಮ" ಬಗ್ಗೆ ಮಾತಾಡಿದರು. "ನಯೀತಾಲೀಮು" ಜೀವನದಾಯಿಯಾಗಿದ್ದರೆ ವಿದೇಶಿ ಸರಕಾರ ಕೊಡುತ್ತಿರುವ ಶಿಕ್ಷಣ ಜೀವನಘಾತಕವೆಂದು ಅವರು ಉತ್ಪ್ರೇಕ್ಷಿಸಿದರು.

ಈ ವಿದೇಶಿ ಶಿಕ್ಷಣ ಹಿಂದುಸ್ತಾನದ ಸಂಪತ್ತಿಯನ್ನು ಹೀರಿ ಜನರನ್ನು ದಾಸರನ್ನಾಗಿ ಮಾಡಿಬಿಟ್ಟಿದೆ. "ನಯೀ ತಾಲೀಮು" ಜೀವನದ ಎಲ್ಲ ಅಂಗಗಳನ್ನು ವ್ಯಾಪಿಸಿದೆ. ಅದರಿಂದ ಅದ್ಭುತಗಳನ್ನು ಸಾಧಿಸಬಹುದೆಂದು ಅನುಭವದಿಂದ ತಿಳಿದುಬಂದಿದೆ; ಶಿಕ್ಷಕರು ತಾವು ತೆಗೆದುಕೊಳ್ಳುವದನ್ನೆಲ್ಲ ನಿಜವಾಗಿ ಸಂಪಾದಿಸುತ್ತಾರೆ. ಅದು ಜೀವನಕಲೆಯ ಪ್ರತೀಕ. ಶಿಕ್ಷಕರೂ ವಿದ್ಯಾರ್ಥಿಗಳೂ ಅಧ್ಯಯನ ಅಧ್ಯಾಪನ ಕ್ರಿಯೆಗಳ ಮೊದಲ ಹೆಜ್ಜೆಯಲ್ಲಿಯೆ ಉತ್ಪಾದನೆ ಮಾಡುತ್ತಾರೆ. ಮೊದಲಿಂದಲೇ ಅದು ಜೀವನವನ್ನು ಸಂಪನ್ನವಾಗಿ ಮಾಡುತ್ತದೆ. ಅದು ರಾಷ್ಟ್ರವನ್ನು ನೌಕರಿ ಹುಡುಕುವ ಚಿಂತೆಯಿಂದ ಬಿಡುಗಡೆ ಮಾಡುತ್ತದೆ. ಬರಿ ಅರವತ್ತು ರೂಪಾಯಿ ಇರುವ ತಲಾ ವಾರ್ಷಿಕ ಉತ್ಪನ್ನವನ್ನು ಅದು ಅಷ್ಟಷ್ಟೇ ಹೆಚ್ಚಿಸುತ್ತ ಹೋಗುತ್ತದೆ.

"ನಯೀ ತಾಲೀಮಿ"ಗನುಸಾರವಾಗಿ ಶಿಕ್ಷಣಪಡೆದ ಹಳ್ಳಿಗರು ತಮ್ಮ ಆಹಾರವನ್ನು ತಾವೇ ಉತ್ಪಾದಿಸುವರು. ಅವರು ತಾವೇ ನೂತ ನೂಲಿನ ನಿಷ್ಕಲಂಕ ಖಾದಿಯನ್ನು ಧರಿಸುವರು.

"ನಯೀ ತಾಲಿಮಿ"ನ ಭರವಸೆ ಇಂಥದು. ಆ ಭರವಸೆ ಫಲಿಸುವದು ಸ್ವತಂತ್ರ ಹಿಂದುಸ್ಥಾನದ ಪ್ರತಿಯೊಬ್ಬ ನಾಗರಿಕನ ಇಚ್ಛೆಯನ್ನೂ ಪ್ರಯತ್ನವನ್ನೂ ಅವಲಂಬಿಸಿದೆ. ನಾಗರಿಕರು ಮನಸ್ಪೂರ್ತಿ ಬೆಂಬಲ ಕೊಡದಿದ್ದರೆ ಸರಕಾರಗಳೇನೂ ಮಾಡಲರಿಯವು ಮತ್ತು ಸರಳ ಸುಲಭ ಸೌಕರ್ಯಗಳನ್ನೊದಗಿಸಲಾರದ ಸರಕಾರ ಉಂಡ ಉಪ್ಪಿಗೆ ಕಂಟಕಪ್ರಾಯ.

೨೪—೪—೪೭

ಹರಿಜನ ಸೇವಕ ಸೇವಿಕೆಯರೊಡನೆಯೂ ಖಾದಿ ಕಾರ್ಯಕರ್ತರೊಡನೆಯೂ ತಾವು ನಡೆಸಿದ ಮಾತುಕತೆಗಳನ್ನು ಗಾಂಧೀಜಿ ಎತ್ತಿಕೊಂಡರು. ಅವರು ಹರಿಜನ ಸೇವೆಯ ಬಗ್ಗೆ ಮಾತಾಡುತ್ತ ಅವರು ಸವರ್ಣ ಹಿಂದುಗಳ ಸ್ಪರ್ಶ ಮಾತ್ರದಿಂದಲೇ ಅಸ್ಪೃಶ್ಯತಾ ನಿವಾರಣೆ ಸಾಧ್ಯವಾಗಲಿಲ್ಲವೆಂದು ಹೇಳಿದರು. ಸ್ಪೃಶ್ಯಾಸ್ಪೃಶ್ಯರಿಬ್ಬರಲ್ಲಿಯೂ [illegible]ರಿಂದೀಚೆಗೆ ಸಮಾಜ ತಕ್ಕಮಟ್ಟಿಗೆ ಪ್ರಗತಿ ಹೊಂದಿದೆ. ಅದರೆ ಸ್ಪೃಶ್ಯಾಸ್ಪೃಶ್ಯರೊಳಗಿನ ಭೇದಗಳಲ್ಲಿ ಒಂದೂ ಉಳಿಯದಂತೆ ಕೊಚೆದು ಹೋಗುವ ವರೆಗೂ ತಮಗೆ ಶಾಂತಿಯಿಲ್ಲ. ಹರಿಜನ ಹುಡುಗಿಯರು ತಮ್ಮ ನಡುವೆ ಸಮಾನರಂತೆ ಓಡಾಡುವದನ್ನು ನೋಡಿ ಕಂಗಾಲಾಗುವದು ಸವರ್ಣ ಹೆಂಗಸರಿಗೆ ಶೋಭಿಸುವದಿಲ್ಲ. ಹರಿಜನರ ತೊಂದರೆಗಳ ಪರಿಹಾರದ ವ್ಯವಸ್ಥೆ ಮಾಡಿ ಅವಶ್ಯಕ ಕಾಯದೆಗಳನ್ನು ತಡಮಾಡದೆ ತರುವದು ಜನಪ್ರಿಯ ಮಂತ್ರಿಗಳು ಸಮಾಜಕ್ಕೆ ಸಲಿಸಬೇಕಾದ ಕರ್ತವ್ಯ. ಚರಖಾ ಸಂಘದ ಧರ್ಮದರ್ಶಿಗಳ ಮತ್ತು ತಾಲಿಮೀ ಸಂಘದ ಸಭೆಗಳು ನಡೆಯುತಿರುವದನ್ನು ನೋಡಿ, ಹಿಂದೂ ಮುಸ್ಲಿಮರ ನಡುವೆ ಹಿಂದಿದ್ದ ಸೌಹಾರ್ದವನ್ನು ಪುನಃ ಸ್ಥಾಪಿಸುವದರಲ್ಲಿಯೂ ಖಾದಿಗೆ ಯಥಾಯೋಗ್ಯಸ್ಥಾನವನ್ನು ಕೊಡುವದರಲ್ಲಿಯೂ ತಾವು ಹೇಳಿದಂತೆ ನಯೀ ತಾಲೀಮನ್ನು ಸ್ಥಾಪಿಸುವದರಲ್ಲಿಯೂ ಬಿಹಾರ ಎಲ್ಲರಿಂದ ಮುಂದಾಗುವದೆಂದು ಆಶಿಸಲಾಗಿದೆ, ಎಂದು ಗಾಂಧೀಜಿ ಮುಗಿಸಿದರು.

೨೫—೪—೪೭

ಗೋಮಾಂಸ ಭಕ್ಷಕರಾದ ಮುಸ್ಲಿಮರು ಹಿಂದುಗಳ ನೈಸರ್ಗಿಕ ವೈರಿಗಳಾದುದರಿಂದ ಅವರನ್ನು ನಾಶಗೊಳಿಸುವದೇ ಯೋಗ್ಯವೆಂದು ಕೆಲ ಹಿಂದುಗಳು ಗುಸುಗುಟ್ಟುತ್ತಿರುವ ಸುದ್ದಿ ಗಾಂಧೀಜಿಗೆ ಬಂದಿದ್ದರಿಂದ ಗೋರಕ್ಷಣೆಯ ಬಗೆಗೆ ಅವರು ನಾಲ್ಕು ಮಾತು ಹೇಳಿದರು. ೪೦ ವರ್ಷಗಳ ಹಿಂದೆ, ದಕ್ಷಿಣ ಆಫ್ರಿಕೆಯಲ್ಲಿದ್ದಾಗ ತಾವು "ಮಂಗಲ ಪ್ರಭಾತ" ವನ್ನು ಬರೆದೆವು. ಬಾಲ್ಯದಿಂದಲೇ ತಾವು ಗೋಮಾತೆಯ ಭಕ್ತರು. ಸಮೃದ್ಧಿಯ ನೈಸರ್ಗಿಕ ಮಾತೆಯೆ ಅವಳೆಂದು ನನ್ನ ನಂಬಿಕೆ. ಅದರೂ ಗೋರಕ್ಷಾ ಸಂಘಗಳು ನಿಜವಾಗಿ ಗೋಹತ್ಯಾ ಸಂಘಗಳಲ್ಲದೆ ಅವು ಗೋವಿನರಕ್ಷಣೆ ಮಾಡುವದಿಲ್ಲೆಂದು "ಹಿಂದ ಸ್ವರಾಜ್ಯ"ದಲ್ಲಿ ತಾವು ಬರೆದಿದ್ದುಂಟು. ಇಂದಿಗೂ ತಮ್ಮ ಮತ ಹಾಗೆಯೆ ಉಳಿದಿದೆ. ಗೋವಿನ ನಿಜವಾದ ಸೇವೆಗೆ ಗೋರಕ್ಷಣೆಯ ಕಲೆ ಮತ್ತು ಶಾಸ್ತ್ರದ ಜ್ಞಾನದಿಂ[illegible] ಲ್ಲಿ ವ್ಯಧ್ಯಮನೆತನದವರೂ, [illegible] ಯುಕ್ತ[illegible]ದ ವಿಶಾಲ ಬುದ್ಧಿ ಬೇಕು. ಗೋವನ್ನು ಆರಾಧಿಸುವ ಒಂದೇ ಒಂದು ದೇಶವಾದ ಹಿಂದುಸ್ಥಾನದಲ್ಲಿ ಗೋವನ್ನೂ ಅದರ ಪೀಳಿಗೆಯನ್ನೂ ನಡೆಸಿಕೊಳ್ಳುವಷ್ಟು ಕೆಟ್ಟ ರೀತಿಯಲ್ಲಿ ಬೇರಾವ ದೇಶದಲ್ಲಿಯೂ ನಡೆಸಿಕೊಳ್ಳುವದಿಲ್ಲ. ಬರಿ ಬಾಯ್ಮಾತಿನಲ್ಲಿಯೂ ಗೋಹತ್ಯಾ ಪ್ರಶ್ನೆಯಬಗ್ಗೆ ಮುಸ್ಲಿಮರೊಡನೆ ಘಾನಾಹಾನಿ ಕಾದಾಡುವದರಲ್ಲಿಯೂ ನಮ್ಮ ಗೋಪೂಜೆ ನಡೆಯುತ್ತದೆ. ಮಾಂಸಕ್ಕಾಗಿ ದನವನ್ನು ಕೊಲ್ಲುತ್ತಾರೆಂದು ಮುಸ್ಲಿಮರೊಡನೆ ಹೋರಾಡುವ ಹಿಂದುಗಳೇ ಮುಸ್ಲಿಮರಿಗಿಂತಲೂ ಭಯಾನಕ ರೀತಿಯಿಂದ ಗೋಮಾಂಸವನ್ನುಣ್ಣುವ ಇಂಗ್ಲೀಷರ ಒಡೆತನವನ್ನು ಒಪ್ಪಿಕೊಳ್ಳಲು ನಾಚುವದಿಲ್ಲ. ಗೋಮಾಂಸ ಭಕ್ಷಕರೆಂದು ಮುಸ್ಲಿಮರನ್ನು ನಿಂದಿಸದಿರುವ ತಾವು ಅದಕ್ಕಾಗಿ ಇಂಗ್ಲೀಷರನ್ನೂ ತೆಗಳುವದಿಲ್ಲ. ಆದರೆ ಹಣಕ್ಕಾಗಿ ಆನಂದದಿಂದ ತಮ್ಮ ಇಂಗ್ಲೀಷ ಸ್ವಾಮಿಯ ಸೇವೆ ಮಾಡಿ ಬಂಧು ಮುಸ್ಲಿಮನೊಡನೆ ಹೋರಾಡುವ ಹಿಂದುಗಳ ಅಸಂಗತ ಬುದ್ಧಿಯನ್ನು ಬಯಲಿಗೆಳೆಯುವದೆ ತಮ್ಮ ಉದ್ದೇಶವೆಂದು ಗಾಂಧೀಜಿ ನುಡಿದರು. ಇದಲ್ಲದೆ ಹಿಂದೂಗಳಲ್ಲಿಯೂ ಆನಂದದಿಂದ ಗೋಮಾಂಸವನ್ನು ತಿನ್ನುವವರಿದ್ದಾರೆಂಬದನ್ನು ಜನರು ಮರೆಯುತ್ತಾರೆ. ಡಾಕ್ಟರರ ಸಲಹೆಯನ್ನನುಸರಿಸಿ ಗೋಮಾಂಸದ ಸಾರನ್ನು ಸೇವಿಸುವ ಸನಾತನಿ ಹಿಂದುಗಳನ್ನು ಕಾಣಬಹುದು. ಖಿಲಾಫತ ದಿನಗಳಲ್ಲಿ ಸಾವಿರಾರು ಗೋವುಗಳನ್ನು ಮುಸ್ಲಿಮರ ಕತ್ತಿಯಿಂದುಳಿಸಲಾಯಿತೆಂದು ಅವರು ನೆನಪಿಗೆ ತಂದುಕೊಟ್ಟರು. ಖಿಲಾಫತ್ತನ್ನುಳಿಸುವದರಲ್ಲಿ ಮುಸ್ಲಿಮರಿಗೆ ಹಿಂದುಗಳು ನೆರವಾದರೆ, ಹಿಂದುಗಳಿಗಾಗಿ ಗೋವುಗಳನ್ನುಳಿಸಲು ನೆರವಾಗುವದು ಮುಸ್ಲಿಮರ ಧರ್ಮವೆಂದು ದಿವಂಗತ ಮೌ. ಅಬ್ದುಲ ಬಾರಿಯವರು ಹೇಳುತಿದ್ದರು. ಆದುದರಿಂದ ಗೋಭಕ್ಷಕರೆಂದು ಮುಸ್ಲಿಮರನ್ನು ದ್ವೇಷಿಸುವದು ಎಲ್ಲ ವಿಧದಿಂದ ಮೂರ್ಖತನವೇ ಸರಿ. ಈ ವಿಷಯದಲ್ಲಿ ಹಿಂದುಗಳೂ ಸರ್ವಥಾ ವಿಸಂಗತವಾಗಿ ನಡೆದುಕೊಂಡ ಎಷ್ಟೋ ಉದಾಹರಣೆಗಳನ್ನು ಕೊಡಬಹುದು. ಆದುದರಿಂದ ಹಿಂದುಗಳು ತಮ್ಮ ಜರಿಯುತಿರುವ ಮನೆಯನ್ನು ಅದು ಪೂರ್ಣ ಹಾಳುಬೀಳುವ ಮೊದಲು ಉದ್ಧಾರ ಮಾಡಿಕೊಳ್ಳಲೆಂದು ಗಾಂಧೀಜಿ ಹಾರೈಸಿದರು.

೨೭ ೪ ೪೭

ಪ್ರಾರ್ಥನಾನಂತರ ಭಾಷಣ ಮಾಡುತ್ತ ಗಾಂಧೀಜಿ ಜಮೈಯತ್-ಉಲ್-ಉಲೇಮಾದ ಸಭೆ ಮುಂಚಿನ ದಿನ ಅದುದನ್ನುಲ್ಲೇಖಿಸಿ, ಧರ್ಮವೆಂಬುದು ಎಂದೂ ಖಡ್ಗದ ಆಧಾರದಿಂದ ನಿಂತಿರದೆ ನಿಜವಾದ ದೇವಭಕ್ತರ ಬಲದಿಂದಲೇ ನಿಂತಿರುತ್ತದೆಯೆಂದರು. ಅದರೆ ಈ ದೇವಭಕ್ತರು ಕೇವಲ ಹೆಸರಲ್ಲಿ ಹಾಗಿರದೆ ಕೃತಿಯಲ್ಲಿಯೂ ಇರಬೇಕು. ಜಮೈಯತ್ತಿನ ಸದಸ್ಯರು ನಿಜವಾದ ದೇವ ಭಕ್ತರು, ನಿಷ್ಠಾವಂತರು, ಸರಳಜೀವನ ನಡೆಸುವವರು ಎಂದೂ ಅವರು ಮುಸಲ್ಮಾನರಿಗೆ ಆತ್ಮಶುದ್ಧಿ ಮತ್ತು ಆತ್ಮಸಾಕ್ಷಾತ್ಕಾರವನ್ನು ಬೋಧಿಸುತ್ತಾರೆಂದೂ ತಿಳಿಯುತ್ತದೆ.

ಆ ಸಭೆಯಲ್ಲಿ ಸೇರಿದ ಮುಸ್ಲಿಮ ಗೆಳೆಯರಲ್ಲಿಗೆ ಹೋಗಲು ಸಭಿಕರು ತಮಗೆ ಆನಂದದಿಂದ ಅವಕಾಶ ಕೊಟ್ಟದ್ದರಿಂದ ಗಾಂಧೀಜಿ ಮುಂದೆ ಸಾಗುತ್ತ ಹೇಳಿದರು. ಅದರೆ ಮುಸ್ಲಿಮರಿಗೆ ಅನಾವಶ್ಯಕ ಮಹತ್ವಕೊಟ್ಟು ವ್ಯರ್ಥವಾಗಿ ಅವರನ್ನು ಅಟ್ಟಕ್ಕೇರಿಸುತ್ತಿದ್ದೇನೆಂದು ಬಗೆಯುವವರಾರಾದರೂ ಇದ್ದರೆ ಅವರದು ಮೌಢ್ಯಜನ್ಯವಾದ ಅಹಂಕಾರವೆಂದು ಅವರು ನಿಚ್ಚಳವಾಗಿ ಹೇಳಿಬಿಟ್ಟರು. ಇಂದು ಸಂಜೆ ಯಾರ ಭಜನೆ ಹಾಡಲ್ಪಟ್ಟಿತೋ ಆ ರಾಮನ ಭಕ್ತರೆನಿಸಲು ಇಂಥ ಅಹಂಕಾರಿಗಳು ಅಯೋಗ್ಯರೇ ಸೈ.

"ಮುಸ್ಲಿಮರು ಜನಸಂಖ್ಯೆಯಲ್ಲಿ ನೂರಕ್ಕೆ ೧೪ ಮಾತ್ರ ಇದ್ದಾರೆ. ಅದು ಕಾರಣ ಅವರು ಕರೆದಾಗಲೆಲ್ಲ ವಿನಮ್ರತೆಯಿಂದ ಹೋಗುವದು ಬಹುಸಂಖ್ಯಾಕರಲ್ಲೊಬ್ಬನಾದ ನನ್ನ ಕರ್ತವ್ಯವೆಂದು ಬಗೆಯುತ್ತೇನೆ" ಎಂದು ಅವರು ಹೇಳಿದರು.

ಮುಂದುವರಿಯುತ್ತ ಅವರು ಹೇಳಿದ್ದು: ಇಂದು ಹಾಡಿದ ಹಾಡಿನಲ್ಲಿ ರಾಮನೊಬ್ಬನೇ (ಅಥವಾ ದೇವರು, ಅಲ್ಲಾ ಇಲ್ಲವೆ ಬೇರಾವ ಹೆಸರಿಂದ ಅವನನ್ನು ಕರೆಯಿರಿ) ಪೂಜಾಪಾತ್ರನೆಂದು ಹೇಳಲಾಗಿದೆ. ಅವನು ಉದಾತ್ತ ಕರ್ಮದಿಂದಲ್ಲದೆ ಬೇರಾವ ಪೂಜೆಯಿಂದಲೂ ಸಂತುಷ್ಟನಾಗುವವನಲ್ಲ.

ವಿಶ್ವಪ್ರೇಮವೇ ರಾಮಭಕ್ತರ ಪರಮ ಧರ್ಮವೆಂಬದನ್ನು ಗಾಂಧೀಜಿ ಒತ್ತಿ ಹೇಳಿದರು. "ಅದೊಂದೇ [illegible] ಹಿಂದೂ ಧರ್ಮ, [illegible] ಅಷ್ಟೇ ಏಕೆ ಯಾವದೇ ಧರ್ಮ, ಬಾಳಬಲ್ಲದು. ಹಿಂದೂ ಧರ್ಮವೇ ಇರಲಿ ಬೇರಾವದಿರಲಿ ಅದು ಈ ಮಾರ್ಗದಿಂದ ವಿಚಲಿತವಾದರೆ ಸರ್ವನಾಶಹೊಂದುವದರಲ್ಲಿ ಸಂದೇಹವಿಲ್ಲ" ಎಂದು ಎಚ್ಚರಿಸಿದರು.

ಇಂದು ಗಾಂಧೀಜಿಯ ದಿನ ತುಸು ಶಾಂತ ರೀತಿಯಿಂದ ಸಾಗಿತು. ಭೆಟ್ಟಿಗೆ ಬಂದವರಲ್ಲಿ ಯುಕ್ತಪ್ರಾಂತದ ಜಮೈಯತ-ಇ-ಇಸ್ಲಾಮೀ ಸಂಸ್ಥೆಯ ನಾಲ್ವರು ಮುಸ್ಲಿಮ ಗೃಹಸ್ಥರಿದ್ದರು.

"ಸರ್ಚಲಾಯಿಟ" (ಪಾಟಣಾ) ಪತ್ರಿಕೆಯ ಸಂಪಾದಕರಾದ ಶ್ರೀ ಮುರಲಿ ಮನೋಹರ ಪ್ರಸಾದರೂ ಇಂದು ಸಂಜೆ ಗಾಂಧೀಜಿಯನ್ನು ಕಂಡರು.

೨೮.೪.೪೭

ಪ್ರಾರ್ಥನಾ ಸಭೆಯಲ್ಲಿ ಇಂದು ಓದಲ್ಪಟ್ಟ ಹಿಂದುಸ್ತಾನಿ ಸಂದೇಶದ ಕನ್ನಡ ಸಾರವಿದು:

ನಾನು ಇನ್ನೊಮ್ಮೆ ದಿಲ್ಲಿಗೆ ಹೋಗಬೇಕಾಗಿದ್ದು ತಾ ೩೦ ರ ಮುಂಜಾನೆಯ ಗಾಡಿಯಿಂದ ಹೊರಡುವವನಿರುವೆನೆಂದು ತಿಳಿಸಲು ನನಗೆ ದುಃಖವಾಗುತ್ತದೆ. ಪಂಡಿತ ನೆಹರೂ ನನ್ನನ್ನು ಕರೆದಿದ್ದಾರೆ. ರಾಷ್ಟ್ರಪತಿ ಕೃಪಲಾನಿಯವರೂ ರಜಪುತಾನಾದಿಂದ ಒಂದು ತಂತಿ ಕಳಿಸಿ, ದಿಲ್ಲಿಯಲ್ಲಿ ಮೇ ೧ಕ್ಕೆ ಸೇರಲಿರುವ ಕಾಂಗ್ರೆಸ್ ಕಾರ್ಯಸಮಿತಿಯ ಸಭೆಯ ಕಾಲಕ್ಕೆ ಅಲ್ಲಿರಬೇಕೆಂದು ಹೇಳಿದ್ದಾರೆ. ನಿಮ್ಮನ್ನು ಈ ನಿಟ್ಟಿನಲ್ಲಿ ಬಿಟ್ಟು ಹೋಗಲು ನನಗೆ ವಿಷಾದವಾಗುತ್ತದೆ. ಮುಸಲ್ಮಾನರು ತಮ್ಮ ಭೀತಿಯನ್ನು ಪೂರ್ತಿಯಾಗಿ ತ್ಯಜಿಸುವ ವರೆಗೆ ಮತ್ತು ಎರಡೂ ಜಾತಿಗಳು ನನ್ನನ್ನು ನಿಶ್ಚಿಂತಹೃದಯನನ್ನಾಗಿ ಹೋಗಗೊಡುವ ವರೆಗೆ ಬಿಹಾರದಿಂದ ಹೋಗುವದು ನನಗೆರುಚಿಸುವದಿಲ್ಲ. ನೌಖಾಲಿಯಿಂದಹೊರಟು ಬರುವಾಗಲೂ ನನಗೆ ಹೀಗೆಯೆ ಅನಿಸಿತ್ತು. ಇವೆರಡು ಸ್ಥಳಗಳಿಗೂ ನನ್ನ ಆದರ್ಶವೊಂದೇ: "ಮಾಡು ಇಲ್ಲವೆ ಮಡಿ." ನನ್ನ ಅಹಿಂಸೆ ನನ್ನನ್ನು ಅಲ್ಪಸಂಖ್ಯಾಕರ ಸೇವೆಯಲ್ಲಿ ಮಗ್ನನಾಗಲು ಆಜ್ಞಾಪಿಸುತ್ತದೆ. ಅದು ನನಗೆ ಪುನರ್ಜನ್ಮದಂತಾಗುವದು. ಹಿಂದೂ ಮುಸ್ಲಿಮರಿಬ್ಬರೂ ತಮ್ಮ ದ್ವೇಷವನ್ನು ಹಂದೊಗೆದು ಶಾಂತಿಯಿಂದ ಪುದುವಾಳತೊಡಗಿದರೆಂದರೆ ಅದು ನನಗೆ ಇನ್ನಷ್ಟು ಶಕ್ತಿಯನ್ನು ಕೊಟ್ಟೀತು. ಈ ವಿಪ್ಲವದಲ್ಲಿ ಏನು ಹೊರಡುವದೋ ಭಗವಂತ ಬಲ್ಲ. ಮನುಷ್ಯನು ಪ್ರಯತ್ನದಲ್ಲಿ ಪ್ರಾಣಕೊಡಲು ಮಾತ್ರ ಸಮರ್ಥ. ದೇವರೊಬ್ಬನೇ ಸರ್ವತಂತ್ರ ಸ್ವತಂತ್ರ. ನಾವು ಬರಿ ಶೂನ್ಯಗಳು. ನಾನು ದಿಲ್ಲಿಗೆ ಹೋಗುವ ಕಾರ್ಯ ಹಿಂದಿನದೇ. ಬೇಗನೆ ಹಿಂದಿರುಗಿ ಮತ್ತೆ ಸೇವೆ ಕೈಕೊಳ್ಳಬಹುದೆಂಬ ಭರವಸೆಯಿಂದಿದ್ದೇನೆ.

—೯ನೇ ಪುಟಕ್ಕೆ

ಗಾಂಧೀಜಿಯ ಬಿಹಾರ ಯಾತ್ರೆ

(೮ ನೇ ಪುಟದಿಂದ ಮುಂದರಿದುದು)

ಮುಸ್ಲಿಮರ ಗೆಳೆಯನಾಗಿ ವರ್ತಿಸಿ ಹಿಂದುಗಳ ಹಿತಕ್ಕೆ ಕುತ್ತು ತಂದಿದ್ದೇನೆಂದು ನನ್ನನ್ನು ತೆಗಳುವ ಪತ್ರಗಳು ಇನ್ನೂ ಬರುತಿವೆಯೆಂದು ಹೇಳಿದರೆ ನಿಮಗೆ ಆಶ್ಚರ್ಯವಾಗಬಹುದು. ಮುಸ್ಲಿಮರ ಗೆಳೆತನಕ್ಕೆಳಸುವದರಿಂದಲೇ ನಾನು ನಿಜವಾದ ಹಿಂದುತ್ವವನ್ನು ವ್ಯಕ್ತಗೊಳಿಸಿದೆನೆಂದೂ ಆ ಮೂಲಕ ಹಿಂದುಗಳ ಹಾಗು ಹಿಂದೂ ಧರ್ಮದ ಸೇವೆಯನ್ನು ಸರಿಯಾಗಿ ಮಾಡಿದ್ದೇನೆಂದೂ ಅರವತ್ತು ವರ್ಷಗಳ ಸಾರ್ವಜನಿಕ ಜೀವನದಿಂದ ತೋರಿಸಿಕೊಡಲು ನಾನು ಅಸಮರ್ಥನಾಗಿದ್ದರೆ ಬರಿ ಶಬ್ದಗಳಿಂದ ಅದನ್ನೇನು ತೋರಿಸಿಕೊಡಲಿ? ಎಲ್ಲರನ್ನೂ ಸೇವಿಸಿ ಎಲ್ಲರೊಡನೆ ಗೆಳೆತನಮಾಡಬೇಕೆಂಬುದೇ ನಿಜವಾದ ಧರ್ಮದ ಸಾರ. ಇದನ್ನು ನಾನು ನನ್ನ ತಾಯಿಯ ತೊಡೆಯಲ್ಲೇ ಕಲಿತೆನು. ನೀವು ನನ್ನನ್ನು ಹಿಂದುವೆಂದು ಕರೆಯಲು ನಿರಾಕರಿಸಬಹುದು. ನಾನು ನನ್ನ ಸಮರ್ಥನೆಗಾಗಿ ಇಕಬಾಲನ ಪ್ರಸಿದ್ಧ ಪದ್ಯದ ಒಂದು ಪಂಕ್ತಿಯನ್ನು ಉದಾಹರಿಸುವದಕ್ಕಿಂತ ಹೆಚ್ಚೇನೂ ಮಾಡಲರಿಯೆ. "ಮಝಬ ನಹೀ ಸಿಖಾತಾ ಆಪಸಮೆ ಬೈರ ರಖನಾ". ನಮ್ಮನಮ್ಮೊಳಗೆ ವೈರಪಟ್ಟುಕೊಳ್ಳಲು ಧರ್ಮ ಕಲಿಸುದಿಲ್ಲ. ಗೆಳೆಯನಲ್ಲಿ ಸ್ನೇಹದಿಂದಿರುವದು ತೀರ ಸುಲಭ. ಆದರೆ ಯಾರು ತನ್ನನ್ನು ನಮ್ಮ ವೈರಿಯೆಂದು ಬಗೆಯುವನೋ ಅವನಲ್ಲಿ ಸ್ನೇಹವಿಡುವದೇ ನಿಜ. ಧರ್ಮದ ಸಾರಸರ್ವಸ್ವವನ್ನು ಇನ್ನೊಂದು ಬಗೆಯ ಸ್ನೇಹ ಬರಿ ವ್ಯವಹಾರ ವ್ಯಾಪಾರ.

೨೯—೪—೪೭

ನಾಳೆಯ ತಮ್ಮ ದಿಲ್ಲಿ ಪ್ರವಾಸದ ಬಗೆಗೆ ಮಾತಾಡುತ್ತ ಗಾಂಧೀಜಿ ನಿಲ್ದಾಣದಲ್ಲಿ ಬಂದು ಸಂದಣಿಗೂಡಬಾರದೆಂದು ಜನರನ್ನು ಕೇಳಿಕೊಂಡರು. ತಮ್ಮ ವಿಶ್ರಾಂತಿಗಾಗಲಿ ಕೆಲಸಕ್ಕಾಗಲಿ ಭಂಗತಾರದಿರುವದೇ ಜನರು ತಮ್ಮಲ್ಲಿ ತೋರಬಹುದಾದ ಪರಮ ಪ್ರೀತಿಯೆಂದರವರು. ಜನರ ಘೋಷಣೆಗಳ ಕೂಗಾಟವನ್ನು ಸಹಿಸಿಕೊಳ್ಳುವದು ಈ ವಯಸ್ಸಿನಲ್ಲಿ ತಮ್ಮ ಸಾಮರ್ಥ್ಯಕ್ಕೆ ಮೀರಿದ್ದು.

ಬೀಳ್ಕೊಳ್ಳುವ ಮೊದಲು, ಮಸಾರಿಯಲ್ಲಿ ಪುನರ್ನಿವೇಶನ ಕಾರ್ಯದಲ್ಲಿ ಸರಕಾರಕ್ಕೆ ನೆರವಾಗುತಿರುವ ಮೇಜರ ಜನರಲ್ ಶಹಾನವಾಜರಿಂದ ಬಂದ ಒಂದು ಪತ್ರವನ್ನು ಜನರಿಗೆ ಓದಿ ತೋರಿಸಲು ತಮಗೆ ಸಂತೋಷವಾಗುತ್ತದೆಂದು ಗಾಂಧೀಜಿ ಹೇಳಿದರು. "ಪುನರ್ನಿವೇಶನ (ನಿರಾಶ್ರಿತರ) ಕಾರ್ಯ ದೃಢಗತಿಯಿಂದ ಮುಂದೆ ಸಾಗುತ್ತಿದೆ ಈ ಭಾಗದ ಹಿಂದೂ ಜನರ ಮನೋವೃತ್ತಿಯಲ್ಲಿ ಸ್ಪಷ್ಟವಾದ ಬದಲಾವಣೆಯನ್ನು ನಾನು ಕಾಣುತಿದ್ದೇನೆ," ಎಂದು ಶಹಾನವಾಜರು ಬರೆದಿದ್ದಾರೆ.

"ಉದಾಹರಣೆಗಾಗಿ ನಾನು ಮೂರು ಪ್ರಕರಣಗಳನ್ನು ಉಲ್ಲೇಖಿಸುವೆ:

"(೧) ಅಕಬರಪುರ ಹಳ್ಳಿಯಲ್ಲಿ ನಾವೊಂದು ಸಭೆ ಮಾಡಿ ಹಳ್ಳಿಯ ಪಂಚಾಯತಿಯನ್ನು ನೇಮಿಸಿದೆವು ಎರಡು ದಿನಗಳ ಮೇಲೆ ಆ ಪಂಚಾಯತಿಯ ಮುಖ್ಯಸ್ಥನು ಪಾಟನಾಕ್ಕೆ ಹೋಗಿ ಅಲ್ಲಿ ವಿವಿಧ ನಿರಾಶ್ರಿತರ ಶಿಬಿರಗಳಲ್ಲಿದ್ದ ನಿರಾಶ್ರಿತರನ್ನು ಕಂಡು ಅವರನ್ನು ತಿರುಗಿ ಹಳ್ಳಿಗಳಿಗೆ ಸ್ವಾಗತಿಸುವದಾಗಿಯೂ ಜೀವಕೊಟ್ಟಾದರೂ ಅವರನ್ನು ರಕ್ಷಿಸುವದಾಗಿಯೂ ಆಶ್ವಾಸನ ಕೊಟ್ಟನು.

"ಇದರ ಫಲವಾಗಿ ಸುಮಾರು ೫೦ ಮುಸ್ಲಿಂ ಕುಟುಂಬಗಳು ಹಳ್ಳಿಗೆ ಮರಳಿ ಅಲ್ಲಿ ಸುಖವಾಗಿ ಬಾಳತೊಡಗಿವೆ. ಅಲ್ಲೀಗ ಪೋಲೀಸ ಪಡೆಯಿಲ್ಲ. ಅದು ಬೇಕೆಂದು ಅವರು ಕೇಳಿಯೂ ಇಲ್ಲ.

"ನಾನು ಅಲ್ಲಿಗೆ ಸೀದಾ ಕಳಿಸಿದಾಗ ಹಳ್ಳಿಗರು ಅದನ್ನು ತೆಗೆದುಕೊಳ್ಳಲೊಪ್ಪಲಿಲ್ಲ. ಮುಸ್ಲಿಮರು ತಮ್ಮ ಅತಿಥಿಗಳೆಂದೂ ಅವರ ಊಟ ಉಪಚಾರಕ್ಕೂ ಅವರ ಬೆಳೆಯನ್ನು ಸುಗ್ಗಿ ಮಾಡಲಿಕ್ಕೂ ತಕ್ಕ ಏರ್ಪಾಟನ್ನು ತಾವೇ ಮಾಡುವದಾಗಿ ಅವರು ಹೇಳಿಕಳಿಸಿದರು.

"(೨) ಇನ್ನೊಂದು ಪ್ರಕರಣದಲ್ಲಿ ಬೀರಪುರ್‌ದ ಒಬ್ಬ ಮುಸಲ್ಮಾನನು ನನ್ನ ಬಳಿಗೆ ಬಂದು ತನ್ನ ಹಳ್ಳಿಗೆ ತಿರುಗಿ ಹೋಗಲು ಅಪೇಕ್ಷಿಸಿದನು. ಗಲಭೆಗಳ ನಂತರ ಮರಳಿಹೋಗಲು ಅವನಿಗೆ ಇದೇ ಮೊದಲಾಗಿ ಸಂಧಿ ದೊರೆತಿತ್ತು. ಅವನು ಅಳುತಿದ್ದನು. ಒಬಂಟಿಗನಾಗಿ ಹೋಗಲು ಹೆದರಿಕೆಯಾಗುತಿತ್ತು ಅವನಿಗೆ. ನಾನು ಅವನಿಗೆ ನನ್ನ ಮೋಟಾರು ಕೊಟ್ಟು ಇಬ್ಬರು ಆಯುಧದ ಸೈನಿಕರನ್ನು ಜತೆಯಲ್ಲಿ ಕಳಿಸಿದೆ. ದಾರಿಯಲ್ಲಿ ಅವರಿಗೆ ಬೀರ ಪಂಚಾಯತಿಯ ಮುಖ್ಯ... ಸಿಕ್ಕಿದನು. ಅವನು ಮೋಟಾರು ನಿಲ್ಲಿಸಿ ಒಳಗಿರುವ ಮುಸ್ಲಿಮನನ್ನು ಮಾತಾಡಿಸಿ ಸೈನಿಕರನ್ನೇಕೆ ತಂದಿದ್ದಿಯೆಂದು ಕೇಳಿದನು. ತನಗೆ ಭಯವಾಗಿದೆಯೆಂದು ಅವನು ಉತ್ತರ ಕೊಟ್ಟನು. ಅದಕ್ಕೆ ಆ ಹಿಂದೂ ಗೃಹಸ್ಥನು, ಗಾಂಧೀಜಿ ವಚನ ಕೊಟ್ಟ ಮೇಲೂ ಅಂಗರಕ್ಷಕರನ್ನೊಯ್ಯುವದು ಅವಶ್ಯವಾದರೆ ಅದು ಇಡಿ ಹಳ್ಳಿಗೇ ಅವಮಾನಾಸ್ಪದವೆಂದು ಹೇಳಿ, ಆ ಮುಸ್ಲಿಮನಿಗೇನಾದರೂ ಆಪತ್ತು ಬಂದರೆ ಅವನಿಗಿಂತ ಮೊದಲು ತಾನೆ ಪ್ರಾಣ ಕೊಡುವದಾಗಿ ಭರವಸೆ ಕೊಟ್ಟನು.

ಆದ್ದರಿಂದ ಆ ಮುಸ್ಲಿಂ ಗೃಹಸ್ಥನು ನನ್ನ ಬಳಿಗೆ ಬಂದು ತನಗಿನ್ನು ರಕ್ಷಣೆ ಬೇಕಿಲ್ಲವೆಂದೂ ತನಗೆ ಪೂರ್ಣ ಸುರಕ್ಷಿತವೆನಿಸತೊಡಗಿದೆಯೆಂದೂ ಹೇಳಿದನು.

"(೩) ಮಸಾರಿಯಲ್ಲಿ ಆಯುಧದ ಸೈನಿಕರು— ಅವರಲ್ಲಿ ಅಧಿಕಾಂಶ ಜನರು ಹಿಂದುಗಳೂ ಸೀಖರೂ ಇರುವರು—ಒಳ್ಳೆ ಕೆಲಸ ಮಾಡುತಿರುವರು. ಅವರಲ್ಲಿ ಪ್ರಧಾನನೆಂದರೆ ಲೆ. ಕರ್ತಾರ ಸಿಂಗನೆಂಬ ಸೀಖನು. ಅವನು ನಿರಾಶ್ರಿತರ ಗಂಟುಮೂಟೆಗಳನ್ನು ತಾನೇ ನಿಲ್ದಾಣದಿಂದ ಅವರ ಮನೆಗೆ ಹೊತ್ತು ತರುತ್ತಾನೆ. ಮತ್ತು ರಾತ್ರಿ ಅವರ ಮನೆಗಳ ಸುತ್ತ ಗಸ್ತಿ ತಿರುಗುತ್ತಾನೆ. ದಿನವೂ ಮುಂಜಾನೆ ಅವನು ಬಕೀಟು ತುಂಬ ಹಾಲನ್ನು ಮಸೀದೆಗೊಯ್ದು ಎಲ್ಲ ಮಕ್ಕಳಿಗೂ ರೋಗಗ್ರಸ್ತರಿಗೂ ಹಂಚುತ್ತಾನೆ.

"ಸುಮಾರು ಮೂರು ದಿನ ಹಿಂದೆ ಒಬ್ಬ ನಿರಾಶ್ರಿತನು ಸತ್ತಾಗ ಅವನ ಗೋರಿಯನ್ನು ಕರ್ತಾರ ಸಿಂಗನು ತಾನೇ ತೋಡಿದನು. ಈಗ ಎಲ್ಲ ಮುಸ್ಲಿಮರಿಗೂ ಅವನು ಪ್ರೀತಿಯವನಾಗಿದ್ದಾನೆ. ಅವರು ಮಸೀದೆಯಲ್ಲಾಗುವ ತಮ್ಮ ಸಭೆಗಳಿಗೆ ಅವನನ್ನು ಆಮಂತ್ರಿಸುತ್ತಾರೆ."

ಜನರಲ್ ಶಾಹನವಾಜರು ಕಳಿಸಿದ ವರದಿಯಿಂದ, ಹಿಂದುಗಳು ಪ್ರಾಮಾಣಿಕತೆಯಿಂದ ಮುಸ್ಲಿಮರ ಸ್ನೇಹವನ್ನು ಸಂಪಾದಿಸಿದರೆ ಈಗ ಹಬ್ಬಿರುವ ಸರ್ವಗ್ರಾಸಿ ದಾವಾಗ್ನಿ ಆರಿಹೋಗುವದೆಂದು ತಮಗೆನಿಸುತ್ತಿದೆಯೆಂದು ಗಾಂಧೀಜಿ ಹೇಳಿದರು. ಸುತ್ತಲೂ ಉರಿ ಹತ್ತಿರುವಾಗ ಎಲ್ಲ ಕಡೆಗಳಲ್ಲೂ ಅದನ್ನಾರಿಸಲು ಪ್ರಯತ್ನಿಸುವರೆ? ನಮ್ಮ ಮುಂದಿರುವ ಸ್ಥಳದಲ್ಲಿ ಅದನ್ನಾರಿಸಲು ದೃಢವಾದ ಪ್ರಯತ್ನಗಳನ್ನು ಮಾಡಿದರೆ ಇಡಿ ದೇಶವೇ ಹಿಡಿತಕ್ಕೆ ಬರುವದು. ಬಿಹಾರವೇನು ಚಿಕ್ಕ ಪ್ರಾಂತವಲ್ಲ. ಅಲ್ಲಿ ಹಿಂದುಗಳೂ ಮುಸ್ಲಿಮರು ಪ್ರಮಾಣಿಕರಾಗಿ ವರ್ತಿಸಿದರೆ ಮತ್ತು ಮುಸ್ಲಿಮರು ತಮ್ಮ ಭಯವನ್ನು ಕಳೆದೊಗೆದರೆ ಕಲಕತ್ತೆಯಲ್ಲಿಯೂ ಬೇರೆ ಕಡೆಗಳಲ್ಲಿಯೂ ನಡೆಯುವವೆಂದು ಕೇಳ ಬರುತಿರುವ ಘಟನೆಗಳು ತಾವಾಗಿ ನಾಶವಾಗದಿರವೆಂದು

೩೦ನೆ ಕನ್ನಡ ಸಾಹಿತ್ಯ ಸಮ್ಮೇಲನ

ಹರಪನ ಹಳ್ಳಿಯಲ್ಲಿ ಪ್ರಾರಂಭ

ಸಾವಿರಗಟ್ಟಲೆ ಪ್ರತಿನಿಧಿ, ಪ್ರೇಕ್ಷಕರು

ಮುವ್ವತ್ತನೆಯ ಕನ್ನಡ ಸಾಹಿತ್ಯ ಸಮ್ಮೇಲನ ಹರಪನಹಳ್ಳಿಯಲ್ಲಿ (ಬಳ್ಳಾರಿ ಜಿಲ್ಲೆ) ಮೊನ್ನೆ ತಾ. ೭ ಕ್ಕೆ ನಿಯೋಜಿತ ಅಧ್ಯಕ್ಷರಾದ ಶ್ರೀ ಸಿ. ಕೆ. ವೆಂಕಟರಾಮಯ್ಯನವರ ಅಧ್ಯಕ್ಷತೆಯಲ್ಲಿ ಸಮ್ಮೇಲನಕ್ಕಾಗಿಯೆ. ನಿರ್ಮಿಸಲ್ಪಟ್ಟಿದ್ದ ಭವ್ಯ ಮಂಟಪದಲ್ಲಿ ಪ್ರಾರಂಭವಾಯಿತು. ಕಳೆದ ವರ್ಷದ ಅಧ್ಯಕ್ಷರಾಗಿ ಈಗ ಕಾಲವಾಗಿರುವ ಕನ್ನಡ ನಾಟಕ ಪಿತಾಮಹರು ಶ್ರೀ ಟಿ ಪಿ ಕೈಲಾಸಂ ಅವರ ಸ್ಮರಣಾರ್ಥವಾಗಿ ಸಮ್ಮೇಲನ ಮಂಟಪಕ್ಕೆ "ಕೈಲಾಸಂ ನಗರ" ಎಂದು ಹೆಸರಿಡಲ್ಪಟ್ಟಿತ್ತು. ಮೂರು ಸಾವಿರ ಮಹಿಳೆಯರೂ ೭ ಸಾವಿರ ಪುರುಷರೂ ಮಂಟಪದಲ್ಲಿ ಕಿಕ್ಕಿರಿದು ನೆರೆದಿದ್ದರು.

ನಿಯೋಜಿತಾಧ್ಯಕ್ಷರ ಹಸ್ತದಿಂದ ಮೊದಲು ಕನ್ನಡ ಬಾವುಟವನ್ನು ಏರಿಸಲಾಯಿತು.

ಸ್ವಾಗತಾಧ್ಯಕ್ಷರಾದ ಶ್ರೀ ಇಜಾರಿ ಪಶುಪಾಲಪ್ಪನವರ ಭಾಷಣವನ್ನು ಅವರ ಅಸ್ವಸ್ಥತೆಯ ನಿಮಿತ್ತ ಅವರ ಚಿರಂಜೀವ ಶಿರಸಪ್ಪನವರು ಓದಿದರು. (ಭಾಷಣದ ಸಾರ ಬೇರೆ ಕಡೆ ಕೊಡಲ್ಪಟ್ಟಿದೆ.)

ಸಮ್ಮೇಲನದ ಉದ್ಘಾಟನೆಯನ್ನು ಮದ್ರಾಸಿನ ಆರೋಗ್ಯ ಮಂತ್ರಿಗಳಾದ ಮಂಗಳೂರಿನ ಶ್ರೀ ಅತ್ತಾವರ ಬಾಲಕೃಷ್ಣ ಶೆಟ್ಟಿಯವರು ನೆರವೇರಿಸಿದರು. ಅವರು ತಮ್ಮ ಭಾಷಣದಲ್ಲಿ ನಾಲ್ಕೂದಿಕ್ಕುಗಳಿಂದ ಕನ್ನಡದ ಮೇಲಾಗುತಿರುವ ಆಕ್ರಮಣವನ್ನು ಖಂಡಿಸಿ ಕರ್ನಾಟಕದ ಬೇಡಿಕೆಗಳನ್ನೂ ಮುಂದಿಸಿದರು. ಕರ್ನಾಟಕದ ಹಿತ ಸಂಬಂಧಗಳನ್ನು ಕಾಯ್ದುಕೊಳ್ಳಲು ನಿಷ್ಠೆಯಿಂದ ಪ್ರಯತ್ನಿಸುವದಾಗಿ ಆಶ್ವಾಸನವಿತ್ತರು. ನೀಲಗಿರಿ, ಕೊಡಗು, ದಕ್ಷಿಣ ಕನ್ನಡಗಳ ಆಕ್ರಮಣಕ್ಕಾಗಿ ದಕ್ಷಿಣದಿಂದ ನಡೆದ ಪ್ರಯತ್ನವನ್ನು ಕನ್ನಡಿಗರೆಂದೂ ಸಹಿಸರು. ಏಕೀಕೃತ ಕರ್ನಾಟಕದಲ್ಲೇ ಅವರು ಬಾಳುವರೆಂದು ಶ್ರೀ ಶೆಟ್ಟರು ಗರ್ಜಿಸಿದರು.

ಪರಿಷತ್ತಿನ ಉಪಾಧ್ಯಕ್ಷರಾದ ಶ್ರೀ ಮಾಸ್ತಿ ವೆಂಕಟೇಶಯ್ಯಂಗಾರರು ತಮ್ಮ ಸರಸವಾಣಿಯಲ್ಲಿ ಅಧ್ಯಕ್ಷರ ಪರಿಚಯ ಮಾಡಿಕೊಟ್ಟರು. ಶ್ರೀ ಸಿ. ಕೆ. ವೆಂಕಟರಾಮಯ್ಯನವರು ಹಸುಗೂಸಿದ್ದಂತೆ. ಅವರ ವಯಸ್ಸು ೫೦ ಎಂದು ನನಗೆ ಇನ್ನೆಯೆ ಗೊತ್ತಾದುದು. ತಿಳಿಯಾದ ನೀರು ಹೇಗಿದೆಯೆಂದು ಕೇಳಿದರೆ ಒಬ್ಬ ಸತ್ಪುರುಷನ ಹಾಗೆ, ಎಂದು ಹೇಳಿ ಶ್ರೀ ವೆಂಕಟರಾಮಯ್ಯನವರನ್ನು ದೃಷ್ಟಾಂತವಾಗಿ ತೋರಿಸಬಹುದೆಂದು ಶ್ರೀ ಮಾಸ್ತಿಯವರು ಹೇಳಿದರು.



ಅಧ್ಯಕ್ಷರಾದ
ಶ್ರೀ ಸಿ. ಕೆ. ವೆಂಕಟರಾಮಯ್ಯ

ಅಧ್ಯಕ್ಷರು ಆ ಮೇಲೆ ತಮ್ಮ ಭಾಷಣವನ್ನು ಪ್ರಾರಂಭಿಸಿದರು. ೫೪ ದೊಡ್ಡ ಆಕಾರದ ಮುದ್ರಿತ ಸ್ಥಳವನ್ನಾಕ್ರಮಿಸಿದ ಅವರ ಸುದೀರ್ಘ ಭಾಷಣ ಕಳೆದ ವರ್ಷದ ಶ್ರೀ ಕೈಲಾಸಂ ಅವರ ಆರು ಪುಟಗಳ ಭಾಷಣದೊಡನೆ ಹೋಲಿಸುವಂತಿತ್ತು. ಅಧ್ಯಕ್ಷರು ಅದರ ಮೊದಲೆರಡು ಪುಟಗಳನ್ನೋದಿ ಆ ಮೇಲೆ ಹೊತ್ತಿಗೆಯನ್ನು ಬದಿಗಿಟ್ಟು ನೆನಪಿನಿಂದಲೇ ಭಾಷಣದ ಸಾರವನ್ನು ಸಂಗ್ರಹಿಸಿ ಹೇಳಿದರು.

ಕನ್ನಡ ಸಾಹಿತ್ಯದ ಇತಿಹಾಸ, ಪರಂಪರೆ, ಅದರಿಂದ ನೆರೆ ಭಾಷೆಗಳು ಪಡೆದ ಋಣ ಕನ್ನಡದಲ್ಲಾಗಬೇಕಾದ ಕಾರ್ಯಗಳು, ಸಾಹಿತ್ಯದ ಸಮಸ್ಯೆಗಳು ಮೊದಲಾದ ಒಂದಲ್ಲ ಎರಡಲ್ಲ ಹಲವು ವಿಚಾರಗಳನ್ನು ಸುದೀರ್ಘ ಅವತರಣಿಕೆಗಳೊಡನೆ ಅವರು ಚರ್ಚಿಸಿದ್ದರು. ಹಳೆಯ ಸಂಪ್ರದಾಯದವರೂ ಹೊಸ ಪ್ರಗತಿಶೀಲರೂ ಕಾದಾಡದೆ ಕೂಡುವಾಳಬೇಕೆಂಬದು ಅವರ ಭಾಷಣದ ಮುಖ್ಯ ಪಲ್ಲವಿಯಾಗಿತ್ತು.



ಉದ್ಘಾಟಕರಾದ ಮಾನ್ಯ ಅತ್ತಾವರ
ಬಾಲಕೃಷ್ಣ ಶೆಟ್ಟಿಯವರು

ಸಮ್ಮೇಲನದ ಅಂಗವಾಗಿ ... ಏರ್ಪಟ್ಟಿದ್ದ ಪ್ರದರ್ಶನವನ್ನು ಬಳ್ಳಾರಿಯ ಕಲೆಕ್ಟರರಾದ ಶ್ರೀ ಅನಂತರಾಮನ್ನರು ಉದ್ಘಾಟಿಸಿದರು.

ಸಮ್ಮೇಲನಕ್ಕೆ ರಾಷ್ಟ್ರಪತಿ ಆಚಾರ್ಯ ಕೃಪಲಾನಿ, ಡಾ. ರಾಜೇಂದ್ರ ಪ್ರಸಾದ, ಸ್ವಾ.



ಡಾ. ಎಂ. ಸಿ. ಕುಮ್ಮಟಗಟ್ಟಿ
ವಿಜ್ಞಾನಗೋಷ್ಠಿಯ ಅಧ್ಯಕ್ಷರು!

ರಾಮ ರೆಡ್ಡಿ, ಭಕ್ತವತ್ಸಲಂ, ಮಾಧವ ಮೆ.ನನ್ ಮುಂತಾದವರ ಸಂದೇಶಗಳು ಬಂದಿದ್ದವು.

ಗೋಷ್ಠಿಗಳು

ತಾ. ೮ ಕ್ಕೆ ಸಮ್ಮೇಲನದ ಅಂಗವಾಗಿ ಜನಪದ ಗೋಷ್ಠಿ ಮತ್ತು ವಿಜ್ಞಾನ ಗೋಷ್ಠಿ ಸೇರಿತ್ತು. ತಾ. ೬ ಕ್ಕೆ ಜರಗಿದ ಸಾಹಿತ್ಯ ಗೋಷ್ಠಿಗೆ ಕಲಬುರ್ಗಿಯ ತಾಲೂಕದಾರರಾದ ಕಾವ್ಯಾನಂದ ಎಂದು ಪ್ರಸಿದ್ಧರಾದ ಶ್ರೀ ಸಿದ್ದಯ್ಯ ಪುರಾಣಿಕರು ಅಧ್ಯಕ್ಷರಾಗಿದ್ದರು. ಜನಪದ ಗೋಷ್ಠಿಯ ಅಧ್ಯಕ್ಷರಾದ ಶ್ರೀ ಬೆಟಗೇರಿ ಕೃಷ್ಣಶರ್ಮರ ಭಾಷಣದ ಸಾರವನ್ನು ಬೇರೆಡೆ ಕೊಡಲಾಗಿದೆ. ಅದನ್ನು ಶ್ರೀ ಜಿ ಎಸ್. ಹಾಲಪ್ಪನವರು ಉದ್ಘಾಟನ ಮಾಡಿದರು. ವಿಜ್ಞಾನ ಗೋಷ್ಠಿಯನ್ನು ಉದ್ಘಾಟಿಸಿದವರು ಮಂಗಳೂರಿನ ಶ್ರೀ ಕೆ. ಬಿ. ಜಿನರಾಜ ಹೆಗಡೆಯವರು ಅವರು ಕನ್ನಡದಲ್ಲಿ ವೈಜ್ಞಾನಿಕ ಪತ್ರ ಪುಸ್ತಕಗಳ ಕೊರತೆಗಾಗಿ ವಿಷಾದಪಟ್ಟು ಅವುಗಳನ್ನು ರಚಿಸಿ ಪ್ರಕಟಿಸಲು ಮುಂಬಯಿ ಮದ್ರಾಸ ಸರಕಾರಗಳು ಮುಂದಾಗಬೇಕೆಂದರು. ಅಧ್ಯಕ್ಷರಾದ ಡಾ. ಕುಮ್ಮಟಗಟ್ಟಿಯವರು "ವಿಜ್ಞಾನ ಹಾಗು ನಿತ್ಯ ಜೀವನ"ವನ್ನು ಕುರಿತು ವಿಚಾರಪೂರ್ಣ ಭಾಷಣ ಮಾಡಿದರು.

(ವಿವರಗಳು ಮುಂದಿನ ವಾರ)

ಕನ್ನಡ ಸಾಹಿತ್ಯ ಪರಿಷತ್ತಿನ ಹೊಸ ಅಧಿಕಾರಿ ವರ್ಗ

ಕನ್ನಡ ಸಾಹಿತ್ಯ ಪರಿಷತ್ತಿನ ವಾರ್ಷಿಕ ಸಾಧಾರಣ ಸಭೆಯು ಶ್ರೀ ಮಾಸ್ತಿ ವೆಂಕಟೇಶ ಅಯ್ಯಂಗಾರರ ಅಧ್ಯಕ್ಷತೆಯಲ್ಲಿ ಕೂಡಿ ಹೊಸ ವರುಷದ ಅಧಿಕಾರಿ ವರ್ಗಕ್ಕೆ ಕೆಳಗಿನ ಮಹನೀಯರನ್ನು ಆರಿಸಿಕೊಂಡಿತು: ಸ್ವಾ. ಎಸ್. ಎಸ್. ಲೋಕೂರ (ಅಧ್ಯಕ್ಷರು), ಶ್ರೀ. ಮಾಸ್ತಿ ವೆಂಕಟೇಶ ಅಯ್ಯಂಗಾರ (ಉಪಾಧ್ಯಕ್ಷರು), ಶ್ರೀ. ಸಿ. ಕೆ. ನಾಗರಾಜರಾವ (ಕಾರ್ಯದರ್ಶಿ), ಶ್ರೀ ರೇವಣಸಿದ್ಧಪ್ಪಾ ಕೋಶಾಧ್ಯಕ್ಷರು. ಕಳೆದ ಕೆಲ ವರ್ಷಗಳಿಂದ ಅಧ್ಯಕ್ಷರಾಗಿ ಪರಿಷತ್ತಿಗೆ ಗೌರವ ತಂದ ಶ್ರೀಮಂತ ಬಸವಪ್ರಭು ಸರದೇಸಾಯಿ ವಂಟಮೂರಿಯವರಿಗೆ ಕೃತಜ್ಞತೆ ವ್ಯಕ್ತಮಾಡುವ ಗೊತ್ತುವಳಿಯು ಸ್ವೀಕೃತವಾಯಿತು.

ದೇಶದಲ್ಲಿ ಮರುಭೂಮಿಯ ವಿಸ್ತಾರ ನಡೆದಿದೆ

ಸಿಂಧ ಮತ್ತು ರಜಪೂತಸ್ಥಾನದ ಮರುಭೂಮಿಗಳು ಪೂರ್ವ ಮತ್ತು ಉತ್ತರಕ್ಕೆ ವರ್ಷಕ್ಕೆ ಅರ್ಧ ಮೈಲಿನಂತೆ ವಿಸ್ತಾರವಾಗುತ್ತ ನಡೆದಿವೆಂದು ಡೇಹರಾಡೂನದಲ್ಲಿಯ ಅರಣ್ಯ ಸಂಶೋಧನ ಸಂಸ್ಥೆಯವರು ಪ್ರಕಟಿಸಿದ ವರದಿಯಲ್ಲಿದೆ.

ಸದ್ಯಕ್ಕೆ ಹಿಂದುಸ್ಥಾನದಲ್ಲಿ ಮರುಭೂಮಿಯು ೧ ಲಕ್ಷ ಚೌರಸ ಮೈಲಿನಷ್ಟು ಭೂಮಿಯನ್ನು ಆವರಿಸಿದೆ. ಮತ್ತು ಈ ಪ್ರದೇಶದ ಸುತ್ತಲಿನ ೧ ಲಕ್ಷ ಚೌರಸ ಮೈಲಿನಷ್ಟು ಭೂಮಿಯಲ್ಲಿ ಮರುಭೂಮಿಯುಂಟಾಗುವ ಅಪಾಯ ಒದಗಿದೆ ಎಂದು ಅವರು ವರದಿಯಲ್ಲಿ ಕಾಣಿಸಿದ್ದಾರೆ.

ಹಿಂದುಸ್ಥಾನಕ್ಕೆ ಅಗಾಧವಾದ ಅಪಾಯ ಒದಗಿದೆ ಬೇಕಾಗಿದೆ. ಪ್ರತಿ ವರ್ಷ ೩೦೦ ಚೌರಸ ಮೈಲು ಭೂಮಿಯು ಮರುಭೂಮಿಯಾಗುತ್ತ ನಡೆದಿದೆ ಇದಲ್ಲದೆ ವರ್ಷ ವರ್ಷಕ್ಕೆ ಭೂಮಿಯು ಕೊಚ್ಚಿಕೊಂಡು ಹೋಗುತ್ತ ನಡೆದಿದೆಯಾದ್ದರಿಂದ ಇಲ್ಲಿಯ ಆಹಾರ ಪರಿಸ್ಥಿತಿ ಮೇಲೆ ದುಷ್ಪರಿಣಾಮವಾಗದಿರದು. ಅದ್ದರಿಂದ ಅರಣ್ಯ ಬೆಳೆಸುವ ಕಾರ್ಯವು ಅದ್ಯತೆಯಾಗಬೇಕೆಂದು ಅವರು ಸಲಹೆ ಕೊಟ್ಟ

ಇನ್ನೊಂದು ದಿಲ್ಲಿ ವಿಷ್ಕಂಭಕ

೧—೫—೧೯೪೭

ಗುರುವಾರ ಸಾಯಂಕಾಲದ ಪ್ರಾರ್ಥನಾ ಸಭೆಯ ಕಾಲಕ್ಕೆ ಸಂಪೂರ್ಣ ಶಾಂತತೆಯಿತ್ತು; ಸಭಿಕರು ಮಾದರಿಯ ಧೋರಣೆಯನ್ನು ವಹಿಸಿದ್ದಕ್ಕಾಗಿ ಗಾಂಧೀಜಿ ಅವರನ್ನ ಅಭಿನಂದಿಸಿದರು.

ಪ್ರಾರ್ಥನಾನಂತರ ಗಾಂಧೀಜಿ ಮಾತಾಡುತ್ತ ದಿಲ್ಲಿಯಿಂದ ಮರಳಿ ಪಾಟಣಾಕ್ಕೆ ತಾವು ಹೋಗುವಾಗ ರೇಲ್ವೆ ಸ್ಟೇಶನುಗಳಲ್ಲಿ ಏನೂ ಗದ್ದಲವಿಲ್ಲದ್ದನ್ನು ಉಲ್ಲೇಖಿಸುತ್ತ ದಿಲ್ಲಿಯಲ್ಲಿಯ ಪ್ರಾರ್ಥನಾ ಸಭೆಗಳಲ್ಲಿ ಜನಸಮೂಹವು ತಾಳಿದ ಶಾಂತತೆಯ ಪರಿಣಾಮ ಪಾಟಣಾಕ್ಕೆ ಮರಳುವಾಗಿನ ಹಾದಿಯಲ್ಲೆಲ್ಲ ಉಂಟಾಯಿತು. ಅವರೆ ಬಿಹಾರ ಪ್ರವಾಸದ ಕಾಲದಲ್ಲಿ ಅದಿಲ್ಲದಂತಾಯಿತೆಂದು ಹೇಳಿದರು. ಆದರೆ ಈ ಸಲ ಆ ಪಾಠ ಮರೆತು ಹೋದಂತಿದೆ. ವಿಶೇಷ ಗದ್ದಲವನ್ನು ಭಾಷಣಕಾರನು ಸಹಿಸಲಾರನೆಂಬುದನ್ನು ಮರೆತುಬಿಟ್ಟು ಜನರು ಬಹಳ ಹರ್ಷೋದ್ಗಾರಗಳನ್ನು ಪ್ರದರ್ಶಿಸಿದರು. ಆದರಿಂದ ತಾವು ತೊಂದರೆಯನ್ನನುಭೋಗಿಸಬೇಕಾಯಿತೆಂದು ಅವರು ಹೇಳಿದರು.

ಅನಂತರ ಮಹಾತ್ಮಾ ಗಾಂಧಿಯವರು ಸರಹದ್ದ ಪ್ರಾಂತ ಪಂಜಾಬ ಮತ್ತು ಉಳಿದ ಕಡೆಗಳಲ್ಲಿ ನಡೆಯುತ್ತಿರುವ ಹಿಂಸೆಯನ್ನುಲ್ಲೇಖಿಸಿದರು. ದೇಶದಲ್ಲಿ ಶಾಂತಿಯನ್ನು ಪ್ರಸ್ಥಾಪಿಸಬೇಕು, ರಾಜಕೀಯ ಧ್ಯೇಯಸಾಧನೆಗಾಗಿ ಬಲಪ್ರಯೋಗವನ್ನು ಪ್ರಯೋಗಿಸುವದನ್ನು ಬಿಟ್ಟುಗೊಡಬೇಕೆಂದು ಮುಂತಾಗಿ ಕಾಯದೆ ಆಜಂ ಜಿನ್ನಾ ಮತ್ತು ತಾವು ಸಂಯುಕ್ತ ಪ್ರಕಟನೆಯನ್ನು ಹೊರಡಿಸಿದ್ದರೂ ಅದರ ಪರಿಣಾಮ ಸ್ವಲ್ಪವೂ ಆಗದೆ ಅದರ ಉದ್ದೇಶ ಸಂಪೂರ್ಣವಾಗಿ ನಿರರ್ಥಕವಾಯಿತೇಕೆಂದು ಸಭಿಕರು ಕೇಳಬಹುದೆಂದು ಗಾಂಧೀಜಿ ನುಡಿದರು.

ಈ ಸಂಯುಕ್ತ ಪ್ರಕಟನೆಯನ್ನು ಹೊರಡಿಸುವದಕ್ಕೆ ಕಾರಣರಾದ ವೈಸರಾಯರ ಮರ್ಯಾದೆ ಮತ್ತು ಕಾಯದೆ ಆಜಂರ ಮರ್ಯಾದೆ ಇದರಲ್ಲಿ ಕುತ್ತಿಗೊಳಗಾಗಿದೆಂದು ತಮ್ಮ ಅಭಿಪ್ರಾಯ. ಬಹುಸಂಖ್ಯಾಕ ಮುಸಲ್ಮಾನರನ್ನು ಪ್ರತಿನಿಧಿಸುತ್ತಿದೆಂದು ಹೇಳಿಕೊಳ್ಳುತ್ತಿರುವ ಅಖಿಲ ಭಾರತ ಮುಸ್ಲಿಂ ಲೀಗಿನ ಅಸಂದಿಗ್ಧ ಅಧ್ಯಕ್ಷರಾಗಿರುವ ಜಿನ್ನಾ ಸಾಹೇಬರು ತಮ್ಮ ಅನುಯಾಯಿಗಳು ತಮ್ಮ ಬಿನ್ನಹದಂತೆ ನಡೆಯಲಿಲ್ಲೆಂದು ಒಪ್ಪಿಕೊಂಡರೆ ಹೊಣೆಯಲ್ಲಿ ಹೋಮ ಮಾಡಿದಂತಾಗುವದೆಂದು ತಮ್ಮ ಅಭಿಪ್ರಾಯವಾಗಿದೆಂದು ಗಾಂಧೀಜಿ ಹೇಳಿದರು. ಪಾಕಿಸ್ತಾನ ಶಬ್ದದಲ್ಲಿ ಅಡಕವಾಗಿರುವ ರಾಜಕೀಯ ಧ್ಯೇಯ ಸಾಧನೆಗಾಗಿ ಮುಸಲ್ಮಾನರು ಹಿಂಸೆಯನ್ನು ಕೈಕೊಂಡರೆ ಲೀಗಿನ ಅಧಿಕಾರವೆಲ್ಲಿಯೆಯಿತು? ವಿವೇಕಕ್ಕೆ ಬಿಡದೆ ಬ್ರಿಟಿಶ್ ಸರಕಾರ ಬಲಾತ್ಕಾರಕ್ಕೆ ಬಗ್ಗಬೇಕೊ ಎಂದೂ ಗಾಂಧೀಜಿ ಕೇಳಿದರು.

ಸಂಯುಕ್ತ ಸಂದೇಶದಲ್ಲಿ ಅಡಕವಾದ ಎಲ್ಲ ಅರ್ಥಕ್ಕೂ ಅದಕ್ಕೆ ಸಹಿಹಾಕಿದವರ ಹೃತ್ಪೂರ್ವಕ ಅನುಮೋದನೆಯಿದೆಯೆಂದು ಖಂಡಿತವಾದ ಹೊರತು ಇಂಥ ಪ್ರಕಟನೆ ಹೊರಡಿಸುವದಲ್ಲಿ ಪ್ರಾಮಾಣಿಕತನವಾದರೂ ಏನಿದೆಯೆಂದು ತಾವು ಮೊದಲೇ ಸಂಶಯ ವ್ಯಕ್ತಗೊಳಿಸಿದ್ದುದಾಗಿ ಅವರು ಹೇಳಿದರು.

೨—೫—೧೯೪೭

'ಪಾಕಿಸ್ತಾನ ವಿರೋಧಿ ಸಂಘ'ದ ಜನರಲ್ ಸೆಕ್ರೆಟರಿಗಳಾದ ಶ್ರೀ ಎಲ್. ಜಿ. ಥತ್ತೆಯವರು ಈ ದಿನ ಗಾಂಧೀಜಿ ಸಾಯಂಪ್ರಾರ್ಥನೆಗಾಗಿ ಹೊರಗೆ ಬರುವ ಸ್ವಲ್ಪಕಾಲ ಮುಂಚಿತವಾಗಿ ವಾಲ್ಮೀಕಿ ಮಂದಿರದ ಮುಂದೆ ಸೆರೆಹಿಡಿಯಲ್ಪಟ್ಟರು.

ಪ್ರಾರ್ಥನೆಯ ಕಾಲಕ್ಕೆ ಕುರಾಣದೊಳಗಿನ ವಾಕ್ಯಗಳನ್ನು ಪಠಿಸಲು ತಮ್ಮ ಆಕ್ಷೇಪವಿದೆಂಬದಾಗಿ ಅವರು ಮೊದಲೆ ಗಾಂಧೀಜಿ ಒಂದು ಪತ್ರ ಬರೆದು ತಿಳಿಸಿದ್ದರು.

ಪ್ರಾರ್ಥನೆಯ ಕಾಲಕ್ಕೆ ಕುರಾಣದೊಳಗಿನ ಶ್ಲೋಕಗಳನ್ನು ಪಠಿಸುವದಕ್ಕೆ ಆಕ್ಷೇಪ ತೆಗೆದುಕೊಂಡು 'ಹಿಂದೂ ಧರ್ಮ ಕೀ ಜಯ್' ಎಂದು ಘೋಷಿಸಿದ್ದಕ್ಕಾಗಿ ಮತ್ತೊಬ್ಬ ಮನುಷ್ಯ ಅನಂತರ ಸೆರೆಹಿಡಿಯಲ್ಪಟ್ಟನು. ಗಾಂಧೀಜಿ ಪ್ರಾರ್ಥನೆಯನ್ನು ಬಿಟ್ಟುಗೊಟ್ಟರು.

ತಮ್ಮ ಕುರಾಣ ಪಠಣಕ್ಕೆ ಆಕ್ಷೇಪತೆಗೆದು ಕೊಂಡರೆಂದು ಯಾರಾದರೂ ಸೆರೆಹಿಡಿಯಲ್ಪಟ್ಟರೆ ಅದು ತಮಗೆ ನ್ಯಾಚಿಕೆಗೇಡಾದ ಮಾತಾಗಿದ್ದುದರಿಂದ ಆ ಮನುಷ್ಯನನ್ನು ಬಿಟ್ಟುಗೊಡದೇಕೆಂದು ಗಾಂಧೀಜಿ ಪೋಲೀಸರಿಗೆ ಬಿನ್ನವಿಸಿಕೊಂಡರು.

ಜನರ ಈ ಸಂಕುಚಿತ ಮನಸ್ಸಿಗಾಗಿ ಗಾಂಧೀಜಿ ವಿಷಾದಪಟ್ಟರು. ಕೇವಲ ಜಯಘೋಷ ಮಾಡುವದರಿಂದ ಹಿಂದೂ ಧರ್ಮದ ಉದ್ಧಾರವೆಂದಿಗೂ ಆಗಲಾರದು. ಕುರಾಣ ಪಠಣಕ್ಕೆ ಕೆಲ ಹಿಂದೂ ಜನರು ಏಕೆ ಆಕ್ಷೇಪ ತೆಗೆದುಕೊಳ್ಳುವರೊ ತಿಳಿಯದಾಗಿದೆ. ಕೆಲಸ್ಥಳಗಳಲ್ಲಿ ಮುಸಲ್ಮಾನರು ಹೇಗೆ ವರ್ತಿಸಬೇಕೊ ಹಾಗೆ ವರ್ತಿಸಲಿಲ್ಲೆಂದು ಹಿಂದುಗಳು ಕುರಾಣ ಪಠಣಕ್ಕೆ ವಿರೋಧ ಪ್ರದರ್ಶಿಸಿ ಮುಯ್ಯಿ ತೀರಿಸಿಕೊಳ್ಳಬೇಕೇ ಎಂದು ಕೇಳಿದರವರು.

ಪ್ರಾರ್ಥನೆಯ ಕಾಲಕ್ಕೆ ಪಠಿಸಲಾಗುತ್ತಿರುವ ಕುರಾಣದೊಳಗಿನ ಶ್ಲೋಕಗಳು ಪರಮಾತ್ಮನ ಸ್ತೋತ್ರರೂಪವಾಗಿವೆ. ಅರಬ್ಬೀ ಭಾಷೆಯಲ್ಲಿ ಪ್ರಾರ್ಥನೆಯನ್ನು ಮಾಡಿದರೆ ಹಿಂದೂ ಧರ್ಮಕ್ಕೆ ಆಗುವ ಹಾನಿಯೇನು? ಇಂಥವರಿಗೆ ಅವರ ಧರ್ಮ ಇಲ್ಲವೆ ಕರ್ತವ್ಯವೇ ಗೊತ್ತಿಲ್ಲೆಂದು ಹೇಳಬೇಕಾಗುವದು. ಆ ಪ್ರಾರ್ಥನೆಯನ್ನು ಮಂದಿರದಲ್ಲಿಯೂ ಸಹಿಸಲಾಗಿದೆ ಎಂದೆಂದರು ಗಾಂಧೀಜಿ.

ಅದೇ ಬಗೆಯ ಪ್ರಾರ್ಥನೆ ಯಜುರ್ವೇದದಲ್ಲಿಯೂ ಇದೆಂದು ಗೆಳೆಯನೊಬ್ಬ ತಮಗೆ ಹೇಳಿರುವನು. ಹಿಂದೂ ಶಾಸ್ತ್ರಗ್ರಂಥಗಳನ್ನು ಅಭ್ಯಾಸ ಮಾಡಿದವರಿಗೆ ೧೦೮ ಉಪನಿಷತ್ತುಗಳಲ್ಲಿ ಅಲ್ಲೋಪನಿಷತ್ತು ಎಂಬ ಒಂದು ಉಪನಿಷತ್ತು ಇರುವದೆಂದು ತಿಳಿದಿರುವದು ಸಾಕು. ಈ ಉಪನಿಷತ್ತನ್ನು ಬರೆದವನಿಗೆ ತನ್ನ ಧರ್ಮ ಗೊತ್ತಿರಲಿಲ್ಲವೆ? ಗುರು ನಾನಕ ತಮ್ಮ ಧಾರ್ಮಿಕ ಸಂಚಾರದ ಕಾಲಕ್ಕೆ ಸತ್ಯಶೋಧನೆಗಾಗಿ ಅರಬಸ್ತಾನಕ್ಕೆ ಹೋಗಿದ್ದರೆಂದು ಹೇಳಲಾಗುತ್ತದೆ ಎಂದು ನುಡಿದರು ಗಾಂಧೀಜಿ.

"ಜಗತ್ತಿನಲ್ಲಿ ಯಾವದೆ ಧರ್ಮ ಆತ್ಮಾಹುತಿಯಿಲ್ಲದೆ ಬಾಳಲಾರದು" ಮುಂದುವರಿದರು ಗಾಂಧೀಜಿ. ಧರ್ಮಕ್ಕಾಗಿ ಆತ್ಮಾಹುತಿಯನ್ನು ಮಾಡಲು ಜನರು ಸಿದ್ಧರಾದಾಗಲೆ ಆ ಧರ್ಮ ಪ್ರಬಲವಾದುದುಂಟು. ಶತ್ರುಗಳನ್ನು ಕೊಲ್ಲದೆ ಇಲ್ಲವೆ ಅವರಿಗೆ ಯಾವದೇ ಬಗೆಯ ಕೇಡನ್ನು ಬಗೆಯದೆ ತಮ್ಮ ಪ್ರಾಣವನ್ನು ಸಮರ್ಪಿಸಿದ ಹುತಾತ್ಮರು ತಮ್ಮ ರಕ್ತದಿಂದಲೆ ಜೀವನ ವೃಕ್ಷಕ್ಕೆ ನೀರೆರೆಯಬೇಕಾಗುವದು. ಹಿಂದು ಧರ್ಮದ ಮತ್ತು ಉಳಿದೆಲ್ಲ ಧರ್ಮಗಳ ರಹಸ್ಯವೆ ಇದಾಗಿರುವದು.

ಆದರೆ ಈಗ ಕಾಣುತ್ತಿರುವ ನೋಟವನ್ನು ನೋಡಿದರೆ ಹಿಂದುಸ್ತಾನದಲ್ಲಿ ಹಬ್ಬಿದ ಬೇನೆಯ ಲಕ್ಷಣವದೆಂದು ಗೊತ್ತಾಗುವದು, ಮುಂದರಿದರು ಗಾಂಧೀಜಿ. ಆ ಹಿಷ್ಣುತೆ, ಅಸಹನ ಮತ್ತು ಪ್ರತೀಕಾರದ ಮಾತೇ ಎಲ್ಲೆಲ್ಲಿಯೂ ಕೇಳ ಬರುತ್ತದೆ. ಸಾಮೂಹಿಕ ಯುದ್ಧದ ಮಾತನ್ನು ಎತ್ತಲಾಗುತಿದೆ. ಹಿಂದುಸ್ತಾನವೆಂದಿಗೂ ಯುದ್ಧ ರಾಷ್ಟ್ರವಾಗಬಾರದಂತೆ ಪರಮಾತ್ಮನು ನೋಡಿಕೊಳ್ಳಲಿ. ಯದಾಕದಾಚಿತ್ ಹಿಂದುಸ್ತಾನ ಅಂಥ ರಾಷ್ಟ್ರವಾದರೆ ಜಗತ್ತಿನ ಶಾಂತಿಗೆ ಗಂಡಾಂತರ ಪ್ರದವಾಗುವದು. ಆದರೆ ಈಗಿನಂತೆ ಘಟನೆಗಳು ಸಂಭವಿಸಹತ್ತಿದರೆ ಹಿಂದುಸ್ತಾನಕ್ಕೆ ಅಹೋರಾತ್ರ ರಗಳೆಯಿವೆ? ಆ ಹಿಂದುಸ್ತಾನಕ್ಕೆ ಅಹೋರಾತ್ರ ರಗಳೆಯಿಲ್ಲದಿದ್ದರೆ ಜಗತ್ತಿನ ಪಾಡೇನು? ಸರಹದ್ದ ಪ್ರಾಂತ, ಪಂಜಾಬ, ಸಿಂಧ ಮತ್ತು ಉಳಿದ ಕಡೆ ಇಂದು ಬರುತ್ತಿರುವ ಭಯೋತ್ಪಾದಕ ಘಟನೆಗಳಿಂದ ಪಾಕಿಸ್ತಾನವನ್ನು ಪಡೆಯಬೇಕೆ?

ಮುಸಲ್ಮಾನರಿಗಿಂತ ಹಿಂದುಗಳಿಗೆ ಪಕ್ಷಪಾತ ತೋರಿಸಲಾಗುತ್ತದ್ಯೆ ಏನಿಲ್ಲೆಂದರೂ ಎಲ್ಲವೂ ಸುಸೂತ್ರ ನಡೆಯುವದು. ಮುಸಲ್ಮಾನ ಬಹುಮತ ಪ್ರಾಂತದಲ್ಲಿಯ ಹಿಂದುಗಳನ್ನು ಅತ್ಯಂತಿಕ ಸಮಾನ ದರ್ಜೆಯಲ್ಲಿಯಂತೂ ನಡೆಸಿಕೊಳ್ಳಲಾಗುವದು ಎಂದು ಹಲವುಜನರು ಸೂಚಿಸುವದುಂಟು. ಪಾಕಿಸ್ತಾನ ಸ್ಥಾಪನೆಯಾಗುವ ಮೊದಲೆ ಮುಸಲ್ಮಾನರಿಗೆ ಈ ರೀತಿ ಶಿಕ್ಷಣ ಕೊಡದಿದ್ದರೆ ಹೀಗಾಗುವದು ಅಶಕ್ಯ ಕೋಟಿಯ ಮಾತೇ ಎಂದು ತಾವು ಸೂಚಿಸಬಯಸುತ್ತೇವೆಂದು ಗಾಂಧೀಜಿ ಹೇಳಿದರು. ಪಾಕಿಸ್ತಾನ ಸ್ಥಾಪನೆಯ ನಂತರ ಪರಿಸ್ಥಿತಿ ಸುಧಾರಿಸುವದೆಂದು ಆಶಿಸಲಾಗದು. ಪಾಕಿಸ್ತಾನ ಪ್ರಾಂತಗಳಲ್ಲಿಯ ಇಲ್ಲವೆ ಭಾಗಗಳಲ್ಲಿಯ ಅಲ್ಪಸಂಖ್ಯಾಕರ ಮನಸಿನಲ್ಲಿ ವಿಶ್ವಾಸ ಹುಟ್ಟುವಂತೆ ನೋಡಿಕೊಳ್ಳುವದು ಕಾಯದೆ ಆಜ್ಹಂ ಮತ್ತು ಅವರ ಸಂಗಾತಿಗಳ ಕರ್ತವ್ಯವಾಗಿದೆ. ಅನಂತರ ಪಾಕಿಸ್ತಾನ ವಿಭಜನೆಯ ಅಂಚಕೆಯುಳಿಯಲಾರದು.

ಇಂದು ಪ್ರಾರ್ಥನಾ ಸಭೆ ಎಂದಿನಂತೆ ಪ್ರಾರಂಭವಾಯಿತು. ಕುರಾಣದೊಳಗಿನ ಶ್ಲೋಕಗಳ ಪಠನ ನಡೆದ ಕೂಡಲೆ ಸಭಿಕರಲ್ಲಿ ಒಬ್ಬನು ಆಕ್ಷೇಪ ತೆಗೆದುಕೊಂಡನು. ಪೋಲೀಸರು ಅವನನ್ನು ಸೆರೆಹಿಡಿದರು. ಆದರೆ ಗಾಂಧೀಜಿ ಕೂಡಲೆ ಪ್ರಾರ್ಥನೆಯನ್ನು ನಿಲ್ಲಿಸಿಬಿಟ್ಟರು. ಸೆರೆಹಿಡಿದವನನ್ನು ಬಿಟ್ಟುಗೊಡಬೇಕೆಂದು ಪೋಲೀಸರಿಗೆ ಬಿನ್ನವಿಸಿಕೊಂಡರು.

ತಾನು ಮಾಡಿದ ಕೃತ್ಯಕ್ಕಾಗಿ ಯಾವನೊಬ್ಬ ಮನುಷ್ಯ ಸೆರೆಹಿಡಿಯಲ್ಪಟ್ಟಾಗ ತಾವು ಪ್ರಾರ್ಥನೆ ಮಾಡುವದು ನಾಚಿಕೆಗೇಡೆಂದು ನುಡಿದರು ಗಾಂಧೀಜಿ. ಮುಂಚಿತವಾಗಿ ಹೊರಟುಹೋಗೆಂದು ವಿನಂತಿಸಿದರೆ ಆ ಸ್ಥಳವನ್ನು ಬಿಟ್ಟು ಹೋಗುವದಾಗಿ ಅವರು ಅಂದರು. ಟ್ರಸ್ಟಿಗಳಾದರೂ ಮೆಹತಾರವರ ಟ್ರಸ್ಟಿಗಳೇ ಆದ್ದರಿಂದ ಅವರೊಡನೆ ವಿಚಾರವಿನಿಮಯ ಮಾಡುವದಕ್ಕಾಗಿ ಯಾದರೂ ತಾವು ಅಲ್ಲಿ ಉಳಿಯುವದಿಲ್ಲೆಂದರು ಗಾಂಧೀಜಿ.

೩—೫—೪೭

ಇಂದಿನ ಪ್ರಾರ್ಥನಾ ಸಭೆಯಲ್ಲಿ ಭಾಷಣ ಮಾಡುತ್ತ ವಿಶ್ವಾಸಕ್ಕೆ ಅಪಾತ್ರರೆಂದು ಸಿದ್ಧವಾಗುವವರಿಗೆ ವೈಸರಾಯರ ಮೇಲೆ ಅಪ್ರಾಮಾಣಿಕತೆಯ ಆರೋಪವನ್ನು ಹೊರಿಸುವದಾಗಲಿ ಇಲ್ಲವೆ ಅವಿಶ್ವಾಸತಾಳುವದು. ಶುದ್ಧ ತಪ್ಪು ಎಂದು ಗಾಂಧಿಜಿ ನುಡಿದು ಈ ಸೂಕ್ಷ್ಮ ಸಮಯದಲ್ಲಿ ಪತ್ರಿಕಾಕಾರರೆಲ್ಲ ತಮ್ಮ ಪಾತ್ರವನ್ನು ಚೆನ್ನಾಗಿ ವಹಿಸಬೇಕೆಂದು ಬಿನ್ನವಿಸಿಕೊಂಡರು.

ಹಿಂದುಸ್ತಾನದಲ್ಲಿ ಇಂದಿರುವ ದುಃಸ್ಥಿತಿಯ ಬಗ್ಗೆ ಗಾಂಧೀಜಿ ಮತ್ತೊಮ್ಮೆ ಸಭಿಕರ ಲಕ್ಷ್ಯವನ್ನೆಳೆದರು. ಇಂದು ಎಲ್ಲರ ಕಣ್ಣು ವಿಶೇಷತಃ ಏಶಿಯಾ ಮತ್ತು ಅಫ್ರಿಕಾ ಖಂಡಗಳ ಕಣ್ಣು ಹಿಂದುಸ್ತಾನದ ಕಡೆಗೇ ಹೊರಳಿವೆಂದರು. ಅವರು ಏಶಿಯನ್ ಪರಿಷತ್ತಿನಲ್ಲಿ ಗಾಂಧೀಜಿಗೆ ಅದರ ಸುಳಿವು ಹತ್ತಿದ್ದಿತು. ಜಪಾನ ಸಾಮ್ರಾಜ್ಯತ್ವಕ್ಕೆ ಬಲಿಯಾಗಿ ಯೋಗ್ಯ ಮಾರ್ಗವನ್ನು ಹಾಕಿ ಕೊಡುವಲ್ಲಿ ಅಯಶಸ್ವಿಯಾಯಿತು. ಇಂದು ಅದರ ಪಾಡೇನಾಗಿದೆ? ಎಂದು ಕೇಳಿದರು ಗಾಂಧೀಜಿ. ಹಿಂದುಸ್ತಾನ ಅಹಿಂಸಾತ್ಮಕವಾಗಿ ಹೋರಾಡಿದ್ದರಿಂದಲೆ ಬ್ರಿಟನ್ನದ ಮೇಲೆ ನೈತಿಕ ವಿಜಯವನ್ನು ಅದು ಸಂಪಾದಿಸಿದೆ. ಅಂತೆಯೆ ಏಶಿಯನ್ ರಾಷ್ಟ್ರಗಳೆಲ್ಲ ಹಿಂದುಸ್ತಾನದಿಂದ ಯೋಗ್ಯ ಧುರೀಣತ್ವವನ್ನು ಅಪೇಕ್ಷಿಸುತ್ತವೆ. ಈ ಆಶೋತ್ತರಗಳನ್ನು ನಿರರ್ಥಕಗೊಳಿಸದಂತೆ ನೋಡಿಕೊಳ್ಳುವುದು ಪ್ರತಿಯೊಬ್ಬ ಭಾರತೀಯನ ಕರ್ತವ್ಯವಾಗಿದೆ.

ಏಶಿಯಾ ಮತ್ತು ಅಫ್ರಿಕಾ ಖಂಡಗಳಿಗೆ ಸರಿಯಾದ ಧುರೀಣತ್ವ ದೊರೆತಿದ್ದಾದರೆ ಇಡೀ ಜಗತ್ತಿನ ಪರಿಸ್ಥಿತಿಯೆ ಅದರಿಂದ ಬದಲಾಗುವದು ಎಂದರು ಗಾಂಧೀಜಿ. ನೆರೆಬಂದಾಗ ಮೇಲಿನ ನೀರು ರಾಡಿಯಾಗುವಂತೆ ಸ್ವಾತಂತ್ರ್ಯರೂಪಿ ನೆರೆಬಂದಾಗ ಸ್ವಲ್ಪ ಗೊಂದಲವುಂಟಾಗುವದು. ಆದರೆ ನೆರೆಹೋದ ಬಳಿಕ ನೀರು ಸ್ವಚ್ಛ ಮತ್ತು ಶಾಂತವಾಗಿ ಹರಿಯುವಂತೆ ಈ ಸ್ವಾತಂತ್ರ್ಯದ ಹೋರಾಟದ ನಂತರ ಸಧ್ಯದ ಜಾತೀಯ ಗಲಭೆಗಳೆಲ್ಲ ನಿಂತು ಕೊಳೆಯೆಲ್ಲ ತೊಳೆದುಹೋಗುವದು. ಎಂದರು ಗಾಂಧೀಜಿ.

ವೈಸರಾಯರು ಮತ್ತು ಅವರ ನಿರ್ಣಯಗಳು ಹಾಗು ಕಾಂಗ್ರೆಸ ಕಾರ್ಯ ಸಮಿತಿಯ ನಿರ್ಣಯಗಳ ಸಂಬಂಧವಲ್ಲಿ ದಿಲ್ಲಿಯ ಪ್ರಮುಖ ಪತ್ರಿಕೆಯೊಂದು ಹೊರಗೆಡುಹಲು ಪ್ರಯತ್ನಿಸಿದ ಸಂಗತಿಯ ಸಂಬಂಧದಲ್ಲಿ ಅವರು ಕಟುವಾಗಿ ದೂರಿಕೊಂಡರು. ಈ ರೀತಿ ವರ್ತಿಸುವದೆಂದರೆ ಪತ್ರಿಕೋದ್ಯಮದ ಮಟ್ಟನ್ನು ಕೆಳಗಿಳಿಸಿದಂತೆಯೆ ಸೈ ಎಂದರವರು. ತಾವು ಸ್ವತಃ ಅನೇಕ ವರುಷಗಳಿಂದ ಪತ್ರಿಕೋದ್ಯೋಗಿಗಳಾಗಿರುವದರಿಂದ ಒಳ್ಳೆ ಪತ್ರಿಕೆಗಳ ರೀತಿ ನೀತಿ ಪರಂಪರೆಗಳು ಎಂತಿರಬೇಕೆಂಬುದನ್ನು ಅಧಿಕಾರವಾಣಿಯಿಂದ ಹೇಳಬಲ್ಲೆವೆಂದು ಹೇಳಿದರು. ವೈಸರಾಯರ ಹೃದಯದಲ್ಲಿದ್ದುದನ್ನೆಲ್ಲ ಹೊರಗೆಡಹುವುದು ಅವರದೇ ಕರ್ತವ್ಯ. ಅಲ್ಲಿಂದ ಇಲ್ಲಿಂದ ಕೆಲ ಮಾತುಗಳನ್ನು ತಿಳಿದುಕೊಂಡು— ದೊಡ್ಡ ಕ್ಷೋಭೆಯನ್ನೆಬ್ಬಿಸುವದೆಂದರೆ ಮಹದನ್ಯಾಯ ಮಾಡಿದಂತೆಯೆ ಸೈ. ಆದರಿಂದ ಸಾರ್ವಜನಿಕರಲ್ಲಿ ತಪ್ಪುತಿಳುವಳಿಕೆಯಾಗಿ ಧ್ಯೇಯಕ್ಕೆ ಹಾನಿಯಾದೀತು. ಕೆಲ ಪರದೇಶಿ ಪತ್ರಿಕೆಗಳ ಅಡ್ಡದಾರಿಯನ್ನನುಸರಿಸುವದು ತಪ್ಪಾದುದು. ಮಾರಾಟವನ್ನು ಹೆಚ್ಚಿಸಿಕೊಳ್ಳುವುದಕ್ಕಾಗಿ ಇಲ್ಲವೆ ಸ್ಪರ್ಧೆಯಲ್ಲಿ ಹೆಸರುಪಡೆಯುವದಕ್ಕಾಗಿ ಪತ್ರಿಕೆಗಳು ತಪ್ಪು ರೀತಿ ನೀತಿಗಳನ್ನು ಅನುಸರಿಸಬಾರದು.

ರೈತರು ಅಥವಾ ಸಾಗುವಳಿದಾರರು

ಜಮೀನದಾರ ಮತ್ತು ರೈತರಲ್ಲಿಯ ಸಂಬಂಧವನ್ನು ನಿಯಮಿತಗೊಳಿಸುವದಕ್ಕಾಗಿ ಅನೇಕ ಪ್ರಜಾ ಪ್ರಾತಿನಿಧಿಕ ಮಂತ್ರಿಮಂಡಳಗಳು ಪ್ರಯತ್ನಿಸುತಿವೆ. ಸಾಮಾನ್ಯವಾಗಿ ಹೇಳಬೇಕಾದರೆ ಜಮೀನದಾರರು ಕೇವಲ ಲಾವಣಿ ಪಡೆಯುವವರು; ಇಲ್ಲವೆ ದೂರವಾಸಿಗಳು. ಹೊಲದ ಆತ್ಯಂತಿಕ ಸಂಬಂಧ ಅವರಿಗಿರುವದಿಲ್ಲ; ಪ್ರತ್ಯಕ್ಷ ಬೆಳೆ ಮುಂತಾದ್ದರ ಸಂಬಂಧವೂ ಅವರಿಗಿರುವದಿಲ್ಲ. ಸಾಗುವಳಿ ಮಾಡುವ ರೈತನ ಹಿತಸಂಬಂಧಗಳೆಲ್ಲ ಭೂಮಿಯಲ್ಲಿಯೆ ಉಳಿಯಬೇಕೆಂಬ ದೃಷ್ಟಿಯಿಂದ ಇಬ್ಬಗೆಯ ಸೂಚನೆಗಳು ಮಾಡಲ್ಪಟ್ಟದ್ದುಂಟು. ಮೊದಲನೆಯದಾಗಿ ಸರಕಾರದವರು ಜಮೀನದಾರರಿಗೆ ಪರಿಹಾರ ಕೊಟ್ಟು ಹೊಲ ಕೊಂಡು ಸ್ವತಃ ಹೊಲವನ್ನು ಸಾಗು ಮಾಡುವ ರೈತನಿಗೆ ಕೊಡುವದು. ಎರಡನೆಯ ಮಾರ್ಗವೆಂದರೆ ದೊಡ್ಡ ದೊಡ್ಡ ಆಸ್ತಿಗಳನ್ನೆಲ್ಲ ಸರಕಾರ ವಶಪಡಿಸಿಕೊಂಡು ಸಣ್ಣಸಣ್ಣ ಖಾಸಗಿ ಹಿಡುವಳಿಗಳನ್ನಾಗಿ ಅವನ್ನು ಒಡೆಯಬೇಕು—

ಹೊಲವನ್ನು ಜಪ್ತಮಾಡಿ ವಶಪಡಿಸಿಕೊಳ್ಳುವ ಅವಶ್ಯಕತೆ ತೋರುವದಿಲ್ಲೆಂಬುದು ಮೊದಲನೆಯ ಮಾತಾಗಿದೆ. ಜಮೀನದಾರರಿಗೆ ಪರಿಹಾರ ಕೊಡುವ ಅವಶ್ಯಕತೆಯೂ ತೋರುವದಿಲ್ಲ. ಹೊಲಗಳು ಯಾರ ಒಡೆತನದವೆ ಆಗಿರಲಿ ಸಮಾನ ಕೃಷಿಯ ಕ್ರಮದನ್ವಯ ಅವುಗಳನ್ನು ಸಾಗು ಮಾಡಲಿಕ್ಕೆ ಕೊಡತಕ್ಕದ್ದು. ಆ ಹಳ್ಳಿಗೆ ಸಾಲುವಷ್ಟು ಸಮಾನ ಆಹಾರ ಮತ್ತು ಉಳಿದ ಅವಶ್ಯಕ ಪದಾರ್ಥಗಳು ಸಾಕಷ್ಟು ಪ್ರಮಾಣದಲ್ಲಿ ಉತ್ಪಾದಿಸಲ್ಪಡುವಂತೆ ನೋಡಿಕೊಳ್ಳುವದು ಮಾತ್ರ ಗುರಿಯಾಗಿರತಕ್ಕದ್ದೆಂಬ ಮಾರ್ಗವನ್ನನುಸರಿಸುವದು ಉಚಿತವೆಂದು ತೋರುತ್ತದೆ. ಈ ಯೋಜನೆಯನ್ವಯ ಸುಮಾರು ೫೦ ಸಾವಿರ ಜನವಸತಿಯುಳ್ಳ ಹಳ್ಳಿ ಗುಂಪುಗಳಿಗೆ ಸಾಲುವಷ್ಟು ಉತ್ಪಾದನೆಯನ್ನು ಬೆಳೆಯುವಂತೆ ಭೂಮಿಗಳ ಲಾಯಸೆನ್ಸ ಕೊಡತಕ್ಕದ್ದು. ಈ ರೀತಿ ಲಾಯಸೆನ್ಸ ಕೊಟ್ಟ ಬಳಿಕ ಲಾಯಸೆನ್ಸ ಪಡೆದವರೆ ಆ ಭೂಮಿಗಳನ್ನು ಕೃಷಿ ಮಾಡತಕ್ಕದ್ದು. ಲಾಯಸೆನ್ಸ ಕೊಡಲ್ಪಟ್ಟ ಇಂಥ ಭೂಮಿಗಳು ಸಾಕಷ್ಟು ಕಾರಣಗಳಿಲ್ಲದೆ ಎರಡು ಮೂರು ವರುಷ ಪಡದಿದ್ದರೆ ಆ ಹೊಲಗಳ ಒಡೆತನವೆಲ್ಲ ಪುನಃ ಸರಕಾರಕ್ಕೆ ಪ್ರಾಪ್ತವಾಗುವದು. ಸಮಾನ ಕೃಷಿಯ ಕ್ರಮಕ್ಕನುಸಾರವಾಗಿ ಪದಾರ್ಥಗಳನ್ನು ಉತ್ಪಾದಿಸುವದಕ್ಕಾಗಿ ಭೂಮಿಗಳನ್ನು ಪಯೋಗಿಸುವ ಹೊಣೆ ಹೊರುವ ಹಳ್ಳಿಗರಿಗೆಲ್ಲ ಆ ಹೊಲಗಳನ್ನು ಸರಕಾರ ಪುನಃ ಹಂಚತಕ್ಕದ್ದು.

ಈ ಪದ್ಧತಿಯಿಂದ ಯಾವ ಹೊಲವೂ ಪಡಬೀಳದಂತೆ ಯೋಜಿಸಲಾಗುವದು ಮತ್ತು ಅದೇ ಕಾಲಕ್ಕೆ ಹಲವಾರು ವರುಷಗಳಿಂದ ದೂರವಾಸಿಗಳಾಗಿರುವವರ ಕೈಯಿಂದ ಪ್ರತ್ಯಕ್ಷ ಸಾಗುಮಾಡುವ ರೈತರ ಕೈಗೆ ಹೊಲಗಳು ತಿರುಗಿ ದೊರೆತಂತಾಗುವದು. ಜನತೆಯ ಅವಶ್ಯಕತೆಗಳನ್ನು ಪೂರಯಿಸುವದಕ್ಕಾಗಿ ಆಹಾರ ಪದಾರ್ಥಗಳು ಸಿಕ್ಕುವವೆಂಬ ಆಶ್ವಾಸನವೂ ದೊರೆತಂತಾಗುವದು ಮತ್ತು ಕೇವಲ ದೂರವಾಸಿಗಳ ಕಾರಣದಿಂದ ಹೊಲಗಳು ಸಾಗಾಗದೆ ಬಿದ್ದುಕೊಳ್ಳುವದನ್ನೂ ತಪ್ಪಿಸಿದಂತಾಗುವದು.

ಹೊಲಗಳನ್ನು ಜಪ್ತ ಮಾಡುವ ಕಾಯದೆಗೆ ಬರುವ ವಿರೋಧಕ್ಕಿಂತ ಕಡಮೆ ವಿರೋಧ ಇಂಥ ಕಾಯದೆಗೆ ಬರಬಹುದು. ಎರಡನೆಯದು ಹಿಂಸಾತ್ಮಕವಾಗಿದ್ದರೆ ಮೊದಲನೆಯದು ಅಹಿಂಸಕವಾಗಿದೆ. ಉತ್ಪಾದನೆಯನ್ನು ಹೆಚ್ಚಿಸಿ ಆಹಾರ ಪದಾರ್ಥಗಳ ಕೊರತೆಯನ್ನು ಹೋಗಲಾಡಿಸಬಯಸುವ ಪ್ರಾಂತಗಳಿಗೆಲ್ಲ ನಾವು ಈ ಸೂಚನೆಯನ್ನು ಮಾಡಬಯಸುತ್ತೇವೆ.

—ಜೆ. ಸಿ. ಕುಮಾರಪ್ಪ

ಹೈದರಾಬಾದಿನಿಂದ ಜಯಪ್ರಕಾಶರ ಗಡಿಪಾರು

ತಾ. ೭ಕ್ಕೆ ಮುಂಬಯಿಯಿಂದ ಹೈದರಾಬಾದಿಗೆ (ದ) ಬಂದಿದ್ದ ಸಾಮ್ಯವಾದಿ ನಾಯಕರಾದ ಶ್ರೀ ಜಯಪ್ರಕಾಶನಾರಾಯಣರನ್ನು ಹೈದರಾಬಾದ ಸಂಸ್ಥಾನ ಪೋಲೀಸರು ತಾ. ೮ಕ್ಕೆ ಬಂಧಿಸಿದರು. ಆ ಮೇಲೆ ಅವರನ್ನು ಮುಂಬಯಿ ವಿಮಾನ ಹತ್ತಿಸಿ ಮ.ಮುಂಬಯಿಗೆ ಕಳಿಸಲಾಯಿತು

ತಾ. ೭ ರಾತ್ರಿ ಜಯಪ್ರಕಾಶರು ಹೈದರಾಬಾದಿನಲ್ಲಿ ಭಾಷಣ ಮಾಡಿದ್ದರು. ಇನ್ನೂ ಮೂರು ಭಾಷಣಗಳಾಗುವವಿದ್ದವು. ಆದರೆ ಮುಂಜಾನೆ ೩-೩೦ ಕ್ಕೆ ಪೋಲೀಸರು ಅವರ ಮನೆಯನ್ನು ಪ್ರವೇಶಿಸಿ ಹೈದರಾಬಾದ ಸಂರಕ್ಷಣ ಕಾಯದೆಯನ್ವಯ ಅವರನ್ನು ಕೂಡಲೆ ಸಂಸ್ಥಾನದಿಂದ ಗಡಿಪಾರು ಮಾಡುವ ಆಜ್ಞೆಯನ್ನು ತೋರಿಸಿದರು. ಜಯಪ್ರಕಾಶರು ಅದನ್ನು ನಿರಾಕರಿಸಿದ್ದರಿಂದ ಅವರನ್ನು ಬಂಧಿಸಲಾಯಿತು. ಅವರ ಪತ್ನಿ ಪ್ರಭಾವತಿ ದೇವಿಯವರೂ ಅವರನ್ನು ಹಿಂಬಾಲಿಸಿದರು. ಜಾತೀಯ ಕ್ಷೋಭೆಯನ್ನು ಗಡಿಪಾರಿಗೆ ಕಾರಣವೆಂದು ತೋರಿಸಲಾಗಿತ್ತು.

ಆ ಮೇಲೆ ಅವರನ್ನು ವಿಮಾನದಲ್ಲಿ ಕುಳ್ಳಿರಿಸಿ ಹೊರಗಟ್ಟಲಾಯಿತು.

ಕರ್ನಾಟಕ

ಧಾರವಾಡ

ದಿ. ಹರ್ದೇಕರ ಮಂಜಪ್ಪನವರ [illegible] ಸಮಿತಿಯ ವತಿಯಿಂದ ಸ್ಮಾರಕಗ[illegible]ದನ್ನು ಹೊರಡಿಸಲು ಕೆ. ವಿ. ಪುಟ್ಟಪ್ಪ ಡಾ. ನಂದೀಮಠ ಅವರನ್ನೊಳಗೊಂಡು ಸಮಿತಿಯೊಂದು ನೇಮಕವಾಗಿದೆ.

ಹಾನಗಲ್ಲಿನಲ್ಲಿ ಶಾಂತತೆಯನ್ನು ಕಾಯ್ದುಕೊಳ್ಳುವದಕ್ಕಾಗಿ ಕರ್ಫ್ಯೂ ಆಜ್ಞೆಯನ್ನು ಜಾರಿಯಲ್ಲಿ ತರಬೇಕೆಂದು ಮಾಮಲೇದಾರರ ಅಧ್ಯಕ್ಷತೆಯಲ್ಲಿ ಕೂಡಿತು ಶಾಂತಿ ಸಮಿತಿಯ ಸಭೆಯಲ್ಲಿ ನಿರ್ಧರಿಸಲಾಯಿತು. ಕಾಂಗ್ರೆಸ ಸಮಿತಿಯ ಅಧ್ಯಕ್ಷ ಅಕ್ಕಿ ಮಲ್ಲಪ್ಪನವರು ಮತ್ತು ಮುಸಲ್ಮಾನ ಮುಂದಾಳುಗಳಾದ ಬಾಬಾಸಾಹೇಬರು ಸಮಯೋಚಿತ ಚಿಕ್ಕ ಭಾಷಣ ಮಾಡಿದರು.

ರಾವಸಾಹೇಬ ಫಕೀರಪ್ಪಾ ಹಸಬಿ ಇವರು ನರಗುಂದ ಮುನಸಿಪಾಲಿಟಿಯ ಅಧ್ಯಕ್ಷರು ಶ್ರೀ ಮೈನುದ್ದೀನಸಾ ಖಾಜಿಯವರು ಉಪಾಧ್ಯಕ್ಷರಾಗಿ ಸರ್ವಾನುಮತದಿಂದ ಆರಿಸಲ್ಪಟ್ಟರು. ಶ್ರೀ ಹಸಬಿಯವರು ಅಧ್ಯಕ್ಷರಾಗಿ ಆರಿಸಲ್ಪಟ್ಟದ್ದು ಇದು ೪ ನೇ ಸಲ.

ಗದಗಬೆಟಗೇರಿ ನಗರಸಭೆಗೆ ಶ್ರೀ ಸಿ. ಎಫ್. ಅಂಗಡಿಯವರು ಅಧ್ಯಕ್ಷರಾಗಿಯೂ ಶ್ರೀ ನಾಗಯ್ಯನವರು ಶಿವಪ್ಪನವರ ಇವರು ಉಪಾಧ್ಯಕ್ಷರಾಗಿಯೂ ಆರಿಸಲ್ಪಟ್ಟರು. ಸಭೆಗೆ ೩೫ ಜನಸದಸ್ಯರು ಬಂದಿದ್ದರು ಆಯ್ಕೆಯ ಹೊತ್ತಿಗೆ ಗೊಂದಲವೆದ್ದುದರಿಂದ ಪೋಲೀಸರು ಬಂದು ಶಾಂತತೆಯನ್ನು ಕಾಯ್ದುಕೊಂಡರು. ಶ್ರೀ ಅಂಗಡಿಯವರು ಅಧ್ಯಕ್ಷರಾಗಿ ಆರಿಸಿ ಬಂದದ್ದು ಇದು ನಾಲ್ಕನೆಯ ಸಲ.

ಧಾರವಾಡದಲ್ಲಿಯ ಕನ್ನಡ ಸಂಶೋಧನ ಸಂಸ್ಥೆಯನ್ನು ನೋಡಲು ಡಾಯರೆಕ್ಟರ ಜನರಲ್ ಆಫ್ ಆರ್ಕ್ಯಾಲಜಿ ಶ್ರೀ ವೀಲರರು ತಮ್ಮ ಪರಿವಾರದೊಂದಿಗೆ ಬಂದಿದ್ದರು. ಸಾಯಂಕಾಲ ೫ ಗಂಟೆಗೆ ಸಂಸ್ಥೆಯನ್ನು ಸಂದರ್ಶಿಸಿ ಅಲ್ಲಿನ ವಿವಿಧ ಅಂಗಗಳಲ್ಲಿ ನಡೆದ ಕಾರ್ಯಕಲಾಪಗಳನ್ನು ನುಲಕ್ಷಿಸಿ ಸಂತೋಷ ಪ್ರದರ್ಶಿಸಿದರು. ಸಂಸ್ಥೆಯ ಡಾಯರೆಕ್ಟರರಾದ ಶ್ರೀ ಪಂಚಮುಖಿಯವರು ಪ್ರಾಚ್ಯ ಸಂಶೋಧನೆಯಲ್ಲಿ ಮಾಡಿದ ಶೋಧಗಳ ಮಹತ್ವವನ್ನರಿತು ಅವರು ಜೆರಕಲ್ಲು ನಿವೇಶನವನ್ನು ಅಗಿಯಬಹುದೆಂದೂ ದೇಶಾದ ಸಹಾಯ ಸಲಹೆಗಳನ್ನು ಕೊಡುವದಾಗಿಯೂ ಹೇಳಿದರು.

ವಿಜಾಪುರ

ವಿಜಾಪುರದ ಅಂಬಾಜಿ ಗವಳಿಯ ೨೨ ವರುಷದ ಮಗುವನ್ನು ಅಮಾನುಷ ರೀತಿಯಿಂದ ಕೊಲೆ ಮಾಡಿ ಬಂಬಾಳ ಅಗಸಿಯ ಹತ್ತರ ಒಗೆದದ್ದು ಗೊತ್ತಾದ್ದರಿಂದ ೧ ನೇ ತಾರೀಕು ಶವ ಪರೀಕ್ಷೆಗಾಗಿ ಆಸ್ಪತ್ರೆಗೆ ಹೆಣವನ್ನು ತರಲಾಯಿತು. ಹೆಣ್ಣು ಹೊನ್ನಿನ ಆಸೆ ತೋರಿಸಿ ಮುನ್ನಾ ದಿನ ರಾತ್ರಿ ಮನೆಗೆಳೆದುಕೊಂಡು ಹೋಗಿ ಕೊಲೆ ಮಾಡಿ ಬಂಬಾಳ ಅಗಸಿ ಹತ್ತರ ತಂದು ಒಗೆದಿರಬಹುದೆಂದು ಜನರಲ್ಲಿ ತರ್ಕವಿತರ್ಕ. ಕಿವಿಗಳಲ್ಲಿ ಮತ್ತು ಮೈಮೇಲೆ ಚಿನ್ನದ ಒಡವೆಗಳಿದ್ದವಂತೆ. ಕಿವಿಗಳನ್ನು ಕೊಯ್ದದ್ದಕ್ಕೆ ಇದೇ ಕಾರಣ.

ಬಾಗಲಕೋಟೆಯ ಸಮೀಪಕ್ಕೆ ಇರುವ ಹವೇಲಿಯಲ್ಲಿ ಘಟಪ್ರಭಾ ನದಿಗೆ ಲಿಫ್ಟ ಪಂಪ ಕೂಡಿಸಿ ೫೦೦ ಎಕರೆ ಭೂಮಿಗೆ ನೀರು ಪೂರಯಿಸಬೇಕೆಂದೂ ಅಲ್ಲಿಯೆ ಒಂದು ಒಕ್ಕಲತನ ಶಾಖೆಯ ಮಂತ್ರಿಗಳು ನಿರ್ಧರಿಸಿರುವರೆಂದು ತಿಳಿಯುತ್ತದೆ. ಉಪ ಮಂತ್ರಿಗಳಾದ ಶ್ರೀ ಕಂಠಿಯವರು ಸಾಲೆಗೆ ಬೇಕಾಗುವ ಹೊಲ ಮುಂತಾದ್ದನ್ನು ಹಿಡಿಯುವ ಕೆಲಸ ಮಾಡಿಕೊಂಡು ಹೋದರು.

ಬಾಗಲಕೋಟೆಯಿಂದ ತೊಗರಿ ಬೇಳೆ ಧಾರವಾಡ ಬೆಳಗಾವಿ ಜಿಲ್ಹೆಗಳಿಗೆ ದೊಡ್ಡ ಪ್ರಮಾಣದಲ್ಲಿ ನಿಯಂತ್ರಣ ಪೂರ್ವದಲ್ಲಿ ಕಳಿಸಲಾಗಿತ್ತು. ಫೆಬ್ರುವರಿ ೪ ಕ್ಕೆ ಜಿಲ್ಹಾ ನಿಯಂತ್ರಣಾಜ್ಞೆ ಹೊರಟಂದಿನಿಂದ ತೊಗರಿ ಬೇಳೆ ಅಧಿಕೃತ ನಿರ್ಯಾತವಾಗಿಲ್ಲ ಎಂದು ಮುಂತಾಗಿ ವಿಜಾಪುರ ಜಿಲ್ಹಾ ಮ್ಯಾಜಿಸ್ಟ್ರೇಟರು ಪ್ರಕಟಿಸಿದ್ದಾರೆ.

ಹರಿಹರ—ನಗರಸಭೆಯ ಉಪಾಧ್ಯಕ್ಷ ಆಯ್ಕೆಯಲ್ಲಿ ಸೈಯ್ಯದ ಮಹಮ್ಮದ ಸಾಹೇಬರು ಅವಿರೋಧವಾಗಿ ಆರಿಸಿ ಬಂದರು. ಇವರು ಇಲ್ಲಿಯ ಪ್ರಮುಖ ವರ್ತಕರಿದ್ದು ಲೋಕಪ್ರಿಯರಾಗಿರುವರು.

ಬೆಳಗಾವಿ

[illegible] ಮುಂಬೈ ಸರಕಾರ [illegible] ಪರಸಗಡ ತಾಲೂಕಿನಲ್ಲಿದ್ದು, ಉಳಿದವು ಸಂಪಗಾವ ತಾಲೂಕಿನಲ್ಲಿವೆ. ಬರಗಾಲ ಕಾಮಗಾರಿಗಳನ್ನು ಪ್ರಾರಂಭಿಸುವದಕ್ಕಾಗಿ ಜಿಲ್ಹಾ ಬೋರ್ಡಿಗೆ ೧೦೧೦೦೦ ರೂ. ಮಂಜೂರ ಮಾಡಿದ್ದಾರೆ.

ಸೋಶಾಲಿಷ್ಟ ಧುರೀಣರಾದ ಜಯಪ್ರಕಾಶ ನಾರಾಯಣರು ಕರ್ನಾಟಕ ಸಂಚಾರವನ್ನು ಮುಗಿಸಿಕೊಂಡು ಹೋದರು. ಇವರ ಸಂಗಡ ಶ್ರೀಮತಿ ಕಮಲಾದೇವಿಯವರೂ ಇದ್ದರು ಕಾಂಗ್ರೆಸಿನ ಸಂಸ್ಥೆಯ ಕೆಲಸವೀಗ ಮುದಂಶಾಗಿದ್ದು ಅದನ್ನು ವಿಸರ್ಜಿಸಬಹುದೆಂದು ಮುಂತಾಗಿ ಅಭಿಪ್ರಾಯಪಟ್ಟರು.

ಉತ್ತರ ಕನ್ನಡ

ಜನತೆಯು ಸಹಕಾರವಿಲ್ಲದೆ ಅಂಚೆ ಚೀಟಿ [illegible] ಅಸಾಧ್ಯವಾದ್ದರಿಂದ ಜನತೆಯು ಸಹಕಾರ ಸಹಾಯಬೇಕೆಂಬ ಗೊತ್ತುವಳಿ ಕಾರವಾರ ಅಂಚೆ ನೌಕರರ ಸಮಿತಿಯ ಸಭೆಯಲ್ಲಿ ಸ್ವೀಕೃತವಾಯಿತು.

ಮುಂಬಯಿ ಸರಕಾರದ ಉಪಮಂತ್ರಿಗಳಾದ ಶ್ರೀ. ಕಂಠಿಯವರು ಜಿಲ್ಹೆಯ ಕೆಲ ಸ್ಥಳಗಳನ್ನು ಸಂಚರಿಸಿ ಬಂದರು. [illegible] ಒಡೆಯರು ಉಪಾಯಗಳನ್ನು ಕಂಡು ಹಿಡಿಸುತ್ತಾರೆಂದು ತಿಳಿಸಲು ಮಾಮಲೇದಾರರ ಕಡೆ ಅರ್ಜಿ ಮಾಡಿದ ಹೊರತು ಅವರಿಗೆ ದಿನಸಿ ಸಿಕ್ಕ ಬರುವದಿಲ್ಲ ಹೆದರಬೇಡಿರೆಂದು ಮುಂತಾಗಿ ಹೇಳಿದರು.

ಸಿದ್ದಾಪುರ ಭಾಗದಲ್ಲಿ ಆಚೆ ವಾರ ಭಯಂಕರ ಬಿರುಗಾಳಿ ಬೀಸಿ ಅನರ್ಥ ಸಂಭವಿಸಿತು. ಅನೇಕ ಮರಗಳು ಮುರಿದು ಬಿದ್ದವು. ಹುಲ್ಲು ಹೊದಿಕೆಯ ಮನೆಗಳು ಹಾರಿ ಹೋಗಿವೆ. ಮಂಗಳೂರು ಹಂಚುಗಳೂ ಹಾರಿ ಹೋಗಿವೆ.

ಸಹಕಾರಿ ಸಂಘಗಳ ಅಸಿಸ್ಟಂಟ ರಜಿಸ್ಟ್ರಾರ ಶ್ರೀ ಪಾಟೀಲರು ಕಳೆದ ವಾರ ಸಂಘಗಳ ತಪಾಸಣೆಗಾಗಿ ಅಂಕೋಲೆಗೆ ಬಂದಿದ್ದರು. ೧೯ ನೇ ತಾರೀಕು ಅಂಕೋಲೆಯಲ್ಲಿ ಸಭೆ ಸೇರಿಸಿ ಋಣ ವಿಮೋಚನೆ ಕಾನೂನನ್ನು ತಿಳಿಸಿ ಹೇಳಿದರು.

[illegible]

[illegible] ಶ್ರೀ ಗುರುರಾಜ [illegible] ಗುರುರಾಜಾಚಾರ್ಯ, [illegible] ಗಳನ್ನು ಬಂಧಿಸಿದ್ದನ್ನು [illegible]

ಇದರ ಲಾಭ ಪಡೆಯಬಯಸುವವರು [illegible] ರೊಳಗಾಗಿ ತಮ್ಮ ಪರಿಪತ್ರದ [illegible] ತಪ್ಪದೆ ಅರ್ಜಿ ಮಾಡಿಕೊಳ್ಳ[illegible]ದರು.

ಗವರ್ನ್‍ಮೆಂಟ್ ಆಫ್ ಇಂಡಿಯಾ
ಮಹತ್ವದ ಪ್ರಕಟನೆ

ಡಿಸ್ಪೋಜಲ್ಸ್ ಪಾಕ್ಷಿಕ ಬುಲೆಟಿನ್

ಡಿರೆಕ್ಟೋರೇಟ ಜನರಲ್ ಆಫ್ ಡಿಸ್ಪೋಜಲ್ಸ ನಾಲ್ಕನೇ ಕ್ಯಾಟಲಾಗ್ ನಂ. MMH ಪ್ರಕಟನೆಯ ತಾರೀಕು 2ನೇ ಎಪ್ರಿಲ್ 1947—ಇದು ಈ ತರದ ಕ್ಯಾಟಲಾಗಗಳ ಪೈಕಿ ಕೊನೆಯದು. ಅದರ ಬದಲು ಎರಡು ವಾರಗಳಿಗೊಮ್ಮೆ ಒಂದು ಡಿಸ್ಪೋಜಲ್ಸ ಬುಲೆಟಿನ್ ಪ್ರಕಟಿಸಲ್ಪಡುವುದು. ಇದರ ಸರಿಯಾದ ತಾರೀಕು ನಂತರ ತಿಳಿಸಲ್ಪಡುವುದು.

ಡಿಸ್ಪೋಜಲ್ಸ್ ಬುಲೆಟಿನ್‌ನೊಳಗೆ ಸೇರಿರುವ ವಿಷಯಗಳು

೧. ಬಹಿರಂಗವಾಗಿ ಟೆಂಡರಗಳನ್ನು ಕರೆದು ನಿರ್ಣಯಿಸಿದ ರಿಜರ್ವ್ ಕ್ರಯಕ್ಕಿಂತ ಹೆಚ್ಚು ಕೇಳುವವರಿಗೆ ಮಾರಲ್ಪಡುವ ಸರ್ಪ್ಲಸ್ ಸಾಮಾನುಗಳ ಪಟ್ಟಿ.

೨. ಮಹತ್ವವಾದ ಲಿಲಾವುಗಳ ಪ್ರಕಟಣೆ, ಅಲ್ಲದೆ ಠೋಕ ಮತ್ತು ಬೆರೆತಿರುವ ರಾಶಿಗಳ, ಸಾಮಾನುಗಳ ವಿಶೇಷ ಮಾರಾಟದ ಪ್ರಕಟನೆ.

೩. ಮಾರಾಟದ ಶರ್ತುಗಳು, ಟೆಂಡರ್ ತುಂಬಿ ಕಳುಹಿಸುವ ಕ್ರಮ ಮತ್ತು ಕೊನೆಯ ತಾರೀಕು.

೪. ಸರ್ಪ್ಲಸ್ ಸಾಮಾನುಗಳನ್ನು ಕ್ರಯಕ್ಕೆ ತೆಗೆದುಕೊಳ್ಳುವವರಿಗೆ ಪ್ರಯೋಜನ ಬೀಳುವ ಇತರ ವಿಷಯಗಳು.

ದೊರಕುವ ಸ್ಥಳ ಡಿಸ್ಪೋಜಲ್ಸ ಪಾಕ್ಷಿಕ ಬುಲೆಟಿನ್‌ಗಳು ಡಿರೆಕ್ಟೋರೇಟ ಜನರಲ್ ಆಫ್ ಡಿಸ್ಪೋಜಲ್ಸ ಇವರ ಹೊಸದಿಲ್ಲಿಯಲ್ಲಿರುವ ಮುಖ್ಯ ಕಚೇರಿಯಿಂದ ರಜಿಸ್ಟರ ಆದ ವರ್ಗಣಿದಾರರ ಪಟ್ಟಿ ಅನುಸಾರವಾಗಿ ಹಂಚಲ್ಪಡುವವು.

ಕೆಲವು ಪ್ರತಿಗಳು ಡಿರೆಕ್ಟೋರೇಟ ಜನರಲ್ ಆಫ್ ಡಿಸ್ಪೋಜಲ್ಸ, ಹೊಸದಿಲ್ಲಿ, ಇವರ ಮುಂಬಯಿ, ಕಲಕತ್ತಾ, ಲಾಹೋರ, ಕಾನಪೂರ, ಮದ್ರಾಸ ಮತ್ತು ಕರಾಚಿ ಕಚೇರಿಗಳಲ್ಲಿ ಮಾರಾಟಕ್ಕೆ ಸಿಕ್ಕುತ್ತವೆ.

ವರ್ಗಣಿ ಆರು ತಿಂಗಳುಗಳಿಗೆ ರೂಪಾಯಿ 5/- ಮುಂಚಿತವಾಗಿ ಮನಿ ಆರ್ಡರ್ ಇಲ್ಲವೆ ಪೋಸ್ಟಲ್ ಆರ್ಡರ್‌ನಿಂದ ಕಳುಹಿಸತಕ್ಕದ್ದು. ಚೆಕ್ ಮತ್ತು ಪೋಸ್ಟೇಜ ತಿಕೀಟುಗಳು ಸ್ವೀಕರಿಸಲ್ಪಡುವುದಿಲ್ಲ. ಆಯಾ ಸ್ಥಳಗಳಲ್ಲಿ ಬಿಡಿ ಪ್ರತಿ ಒಂದರ ಕ್ರಯ ಆಣೆ 8.

ಪ್ರತಿ ಒಂದು ಬುಲೆಟಿನ್‌ನಿನ ಕೆಲವು ಪ್ರತಿಗಳು ಮಾತ್ರ ಮುದ್ರಿಸಲ್ಪಡುವುವು. ಆದುದರಿಂದ ವರ್ಗಣಿದಾರರಾಗಲು ಇಚ್ಛಿಸುವವರು ಕೆಳಗಿರುವ ಕೂಪನ್‌ವನ್ನು ಇಂಗ್ಲೀಷಿನಲ್ಲಿ ಬರೆದು ಅದರಲ್ಲಿ ತೋರಿಸಿದ ವಿಳಾಸಕ್ಕೆ ಕಳುಹಿಸಬೇಕು.

ಕಂಪೆನಿಯ ಹೆಸರನ್ನು ಮತ್ತು ಅದು ಸೇರಿರುವ ವ್ಯಾಪಾರ ಸಂಘದ ಹೆಸರನ್ನು ತಿಳಿಸುವುದು ಅವಶ್ಯ. ಆದರೆ, ವ್ಯಾಪಾರ ಸಂಘದ ಮೆಂಬರು ಮಾತ್ರ ವರ್ಗಣಿದಾರರಾಗಬಹುದು ಎಂಬ ನಿರ್ಬಂಧವಿಲ್ಲ.

COUPON

CUT HERE ... CUT HERE

The Publicity Officer,
Directorate-General of Disposals,
Shahjahan Road, NEW DELHI.

Please enrol me as a subscriber for the Disposals Fortnightly Bulletin. Money Order No ——————has been sent to you separately/Postal Order for Rs 5/- is enclosed herewith, being my subscription for six months.

Name (in Block letters) ....
Representing Firms ....
Address (in Block letters) ....
Town (in Block letters) ....
Name of Trade Association or Chamber of Commerce ....

CUT HERE

A C 236

ಮುಂಬಯಿ

ಔದ್ಯೋಗಿಕ ಮತ್ತು ತಾಂತ್ರಿಕ ಮಾಧ್ಯಮಿಕ ಶಿಕ್ಷಣದ ಬಗ್ಗೆ ಸಲಹೆ ಕೊಡಲು ಮುಂಬಯಿ ಸರಕಾರ ಒಂದು ಸಮಿತಿಯನ್ನು ನೇಮಿಸಿದೆ. ಪ್ರಾಥಮಿಕ ಶಿಕ್ಷಣದ ಪ್ರಸಾರದಿಂದ ಉಂಟಾಗುವ ಔದ್ಯೋಗಿಕ ಮತ್ತು ತಾಂತ್ರಿಕ ಶಿಕ್ಷಣದ ಬೇಡಿಕೆಯನ್ನು ಗಮನಿಸಿ ಪ್ರಾಂತದಲ್ಲಿ ಔದ್ಯೋಗಿಕ ತಾಂತ್ರಿಕ ಮತ್ತು ಕಸಬುಗಳ ಶಿಕ್ಷಣ ವಿಸ್ತಾರದ ಸ್ವರೂಪ ಮತ್ತು ಪ್ರಗತಿಯ ಬಗ್ಗೆ ಸರಕಾರಕ್ಕೆ ಸಲಹೆ ಕೊಟ್ಟಿರುವರು.

ಪಂಢರಪುರದ ವಿಠೋಬನ ದೇವಸ್ಥಾನವನ್ನು ಹರಿಜನರಿಗೆ ಮುಕ್ತ ಮಾಡಬೇಕೆಂದು ಸಾನೇ ಗುರೂಜಿಯವರು ೧ನೇ ತಾರೀಕಿನಿಂದ ಉಪವಾಸ ಪ್ರಾರಂಭಿಸಿದ್ದಾರೆ. ಅವರ ತೂಕ ಈಗ ೧೦ ಪೌಂಡು ಕಡಿಮೆಯಾಗಿದೆ. ಅಶಕ್ತತೆಯೂ ಹೆಚ್ಚಿದೆ.

ಸಾಮ್ಯವಾದಿಗಳ ನೇತೃತ್ವದಲ್ಲಿ ಕೆಲಸ ಮಾಡುತ್ತಿರುವ ಕೂಲಿಕಾರ ಸಂಘಗಳನ್ನು ಹೊಸದಾಗಿ ಸ್ಥಾಪಿತವಾಗಿರುವ ಹಿಂದೀ ಕೆಲಸಗಾರರ ಮಹಾ ಮಂಡಳಕ್ಕೆ ಸೇರಿಸಬೇಕೋ ಎಂಬದನ್ನು ವಿಚಾರಿಸಲು ಜಯಪ್ರಕಾಶ ನಾರಾಯಣರು ಸಹೋದ್ಯೋಗಿಗಳ ಸಭೆಯನ್ನು ಕರೆದಿರುವರು. ಅದರೂ ಕೊನೆಯ ನಿರ್ಣಯವನ್ನು ಸಾಮ್ಯವಾದಿ ಪಕ್ಷದ ಕಾರ್ಯ ಸಮಿತಿಯು ಕೈಕೊಳ್ಳುವರು.

ಪುಣೆಯ ಕೇಸರಿ ಮುದ್ರಣಾಲಯದಿಂದ ೧೦೦೦೦ ರೂಪಾಯಿಗಳ ಹೊಸ ಜಾಮೀನನ್ನು ಕೇಳಿರುವರು. ಅಲ್ಲಿ ಮುದ್ರಿಸಲ್ಪಡುತ್ತಿರುವ ಮರಾಠಾ ಪತ್ರಿಕೆಯ ಮುದ್ರಕ ಮತ್ತು ಪ್ರಕಾಶಕರಿಂದ ಬೇರೆ ೧೦ ಸಾವಿರ ರೂಪಾಯಿ ಜಾಮೀನ ಕೇಳಲಿರುವರೆಂದು ತಿಳಿದು ಬಂದಿದೆ.

ಮದ್ರಾಸ

ಮದ್ರಾಸದ ಮುಖ್ಯ ಮಂತ್ರಿಗಳಾದ ಓಮಂದೂರ ರಾಮಸ್ವಾಮಿಯವರು ದಿಲ್ಲಿಗೆ ಹೋಗಿ ಮಹಾತ್ಮಾ ಗಾಂಧಿಯವರನ್ನೂ ರಾಷ್ಟ್ರಾಧ್ಯಕ್ಷ ಆಚಾರ್ಯ ಕೃಪಲಾನಿಯವರನ್ನೂ ಕಂಡು ಮಂತ್ರಿಮಂಡಳದ ಬಗ್ಗೆ ಚರ್ಚಿಸಿದರು. ಸದ್ಯಕ್ಕೆ ಹೊಸ ಮಂತ್ರಿಗಳನ್ನು ಇಲ್ಲವೆ ಉಪಮಂತ್ರಿಗಳನ್ನು ನೇಮಿಸುವದು ಅನವಶ್ಯವೆಂದು ಧುರೀಣರಿಬ್ಬರೂ ಅಭಿಪ್ರಾಯಪಟ್ಟರೆಂದು ರಾಮಸ್ವಾಮಿಯವರು ತಿಳಿಸಿದರು. ಓಮಂದೂರರು ವೈಸರಾಯರನ್ನೂ ಭೆಟ್ಟಿಯಾದರು.

ಮದ್ರಾಸ ಪ್ರಾಂತದಲ್ಲಿ ಅಲ್ಲಲ್ಲಿ ಜನತೆಯ ಉಪಯೋಗಕ್ಕಾಗಿ ಕ್ಷಯರೋಗ ನಿವಾರಣೆಯ ಆಸ್ಪತ್ರೆಗಳನ್ನು ಸರಕಾರದವರು ಪ್ರಾರಂಭಿಸಲಿರುವರು. ಅವುಗಳಲ್ಲಿ ತ್ರಿಚನಾಪಲ್ಲಿಯ ಅಸ್ಪತ್ರೆಯನ್ನು ಮೇ ೧೦ಕ್ಕೆ ರಾಜಗೋಪಾಲಾಚಾರ್ಯರು ಪ್ರಾರಂಭಿಸುವರು.

ಮದ್ರಾಸದ ಹಿಂದಿನ ಮುಖ್ಯ ಮಂತ್ರಿಗಳಾದ ಶ್ರೀ. ಟಿ. ಪ್ರಕಾಶಂರು ಗಾಂಧೀಜಿಯವರನ್ನು ಭೆಟ್ಟಿಯಾಗಿ ಪ್ರಾಂತದ ಪರಿಸ್ಥಿತಿಯನ್ನು ಅರುಹಿದರು.


ಹೊಸದಿಲ್ಲಿ

ಬಂಗಾಲವನ್ನೂ ವಿಭಜಿಸಬೇಕೆಂದು ವೈಸರಾಯರ ಭವನದೆದುರು ಮತಪ್ರದರ್ಶನ ಮಾಡಿದ ೬ ಜನ ಸನಾತನಿ ಹಿಂದುಗಳನ್ನು ೫ನೇ ತಾರೀಕು ದಿಲ್ಲಿಯಲ್ಲಿ ಬಂಧಿಸಲಾಯಿತು. ಸರದಾರ ವಲ್ಲಭಭಾಯರ ಭವನದೆದುರು ಮತಪ್ರದರ್ಶನ ಮಾಡಿದ ಎಂಟು ಜನರ ಇನ್ನೊಂದು ತಂಡವನ್ನೂ ಬಂಧಿಸಲಾಯಿತು. ೪ನೇ ತಾರೀಕು ಇದೇ ಸ್ಥಳದಲ್ಲಿ ೧೨ ಜನರನ್ನು ಸೆರೆಹಿಡಿಯಲಾಗಿದೆ.

ರಂಗೂನ ಸೆರೆಮನೆಯಲ್ಲಿಡಲ್ಪಟ್ಟ ಅನೇಕ ಕೆಂಪು ಧ್ವಜದ ಕಮ್ಯುನಿಸ್ಟರು ಆಮರಣ ಉಪವಾಸ ಪ್ರಾರಂಭಿಸಿರುವರೆಂದು ತಿಳಿಯುತ್ತದೆ. ಕಳೆದ ೫೦ ದಿನಗಳಿಂದ ನಿರಾಹಾರದಿಂದಿದ್ದು ಕಮ್ಯುನಿಸ್ಟ ಮುಂದಾಳು ಟನ್‌ಯು ಎಂಬವನ ಪ್ರಕೃತಿ ಚಿಂತಾಜನಕವಾಗಿದೆ. ಒಬ್ಬ ಸ್ತ್ರೀ ಸದಸ್ಯೆ ೨೫ ದಿನಗಳಿಂದ ಉಪವಾಸದಿಂದಿದ್ದು ಅವಳ ಪ್ರಕೃತಿ ಈಗ ಕ್ಷಣ ಕ್ಷಣಕ್ಕೆ ಕೆಡುತ್ತಲಿದೆ.

ಹಿಂದುಸ್ಥಾನದಲ್ಲಿಯ ಚೀನೀ ನಿಯೋಜಿತ ರಾಯಭಾರಿಗಳಾದ ಡಾ. ಲೊಚಿಯಾ ಲಂಗರು ದಿಲ್ಲಿಗೆ ಬಂದರು. ಅವರನ್ನು ಚೀನಿ ರಾಯಭಾರ ಕಚೇರಿಯವರು ಮತ್ತು ಹಿಂದುಸ್ಥಾನ ವಿದೇಶ ಖಾತೆಯವರು ಸ್ವಾಗತಿಸಿದರು.

ರಾಜಕೀಯ ರಂಗದಲ್ಲಿ ಮುಸ್ಲಿಂ ಸಮಾಜಕ್ಕೆ ಯಾವ ವಿಧದಲ್ಲಿಯೂ ಸೌಕರ್ಯ ಸೌಲಭ್ಯಗಳನ್ನು ಕೊಡಬಾರದೆಂದು ಸವರ್ಣ ಹಿಂದುಗಳು—ಕಾಂಗ್ರೆಸ್ಸಿಗರಿರಲಿ ಹಿಂದು ಮಹಾಸಭಾ ವಾದಿಗಳಿರಲಿ— ಪ್ರಯತ್ನಿಸುತ್ತಿರುವರೆಂದು ಕೇಂದ್ರ ಶಾಸನ ಸಭೆಯ ಹಿಂದಿನ ಅಧ್ಯಕ್ಷರಾದ ಸರ್ ಅಬ್ದುರ್ ರಹೀಮರು ಸುದೀರ್ಘ ಪ್ರಕಟನೆ [illegible]ದುವನ್ನು.



ಬಂಗಾಲ

ಅಮೃತಬಜಾರ ಪತ್ರಿಕೆಯ ೫೦೦೦ ರೂಪಾಯಿಗಳ ಜಾಮೀನ ಹಣದಲ್ಲಿ ೪೦೦೦ ರೂಪಾಯಿಗಳನ್ನು ಜಪ್ತಮಾಡಲಾಗಿದೆ. ಜಾತೀಯ ದ್ವೇಷಕ್ಕೆ ಕಾರಣವಾಗುವ ಶಬ್ದಗಳು ಅಗ್ರಲೇಖದಲ್ಲಿದ್ದವಂತೆ. ಮತ್ತೆ ೭ ಸಾವಿರ ರೂಪಾಯಿಗಳ ಹೊಸ ಜಾಮೀನು ಕೇಳಿದೆ. ದೈನಿಕ ಕೃಷಕದ ೫೦೦೦ ರೂಪಾಯಿಗಳನ್ನೂ ಜಪ್ತ ಮಾಡಿದ್ದು ಹೊಸದಾಗಿ ಜಾಮೀನನ್ನೂ ಕೇಳಿದ್ದಾರೆ.

ಬಂಗಾಲ ವಿಭಜನೆಯ ಚಳವಳಿಯನ್ನು ನಿಲ್ಲಿಸದಿದ್ದರೆ ಪ್ರಾಣವನ್ನೆ ಅಪಹರಿಸುವನಾಗಿ ಕೆಲ ಮುಂದಾಳುಗಳಿಗೆ ಅನಾಮಧೇಯ ಪತ್ರಗಳು ಬಂದಿರುವವೆಂದು ತಿಳಿಯುತ್ತದೆ. ಎಲ್ಲ ಪತ್ರಗಳು ಒಂದೇ ಬಗೆಯ ಕಾಗದದ ಮೇಲೆ ಟಾಯಿಪು ಮಾಡಲ್ಪಟ್ಟಿವೆ. ಕಾಂಗ್ರೆಸ ಮತ್ತು ಲೀಗ ಮುಂದಾಳುಗಳಿಗೆ ಈ ಬಗೆಯ ಪತ್ರ ಬಂದಿವೆಯಂತೆ.

ಬಂಗಾಲ ವಿಭಜನೆ ಆಟ್ಟಿಟ್ಟ ಮಾತಾದ್ದರಿಂದ ಬಂಗಾಲ ಮಂತ್ರಿಮಂಡಳವು ಶಾಸನ ಸಭೆಯ ಯಾವ ಕಾರ್ಯಕಲಾಪಗಳನ್ನೂ ನಡೆಸುವಂತಿಲ್ಲ ಬಾರದೆಂದು ಶಾಸನಸಭೆಯ ವಿರೋಧಿ ಪಕ್ಷವು ಮಂತ್ರಿಮಂಡಳವನ್ನು ಕೇಳಿಕೊಂಡಿದೆ.

ವಿಭಜನೆಯಾಗದೆ ಬಂಗಾಲಕ್ಕೆ ಅಧಿಕಾರ ದೊರೆತವರೂ ಬಂಗಾಲದಲ್ಲಿ ಪ್ರತಿಸರಕಾರ ಸ್ಥಾಪಿತವಾಗಬೇಕೆಂದು ಮುಂತಾಗಿ ಕಲಕತ್ತಾ ಕಾಂಗ್ರೆಸಿಗರು ನಿರ್ಧರಿಸಿದ್ದಾರೆ.

ಕಲಕತ್ತೆಯ ಚಿತಪುರದ ಭಾಗದಲ್ಲಿ ೩೪ ಗಂಟೆಗಳ ಕರ್ಫ್ಯೂ ಜಾರಿಯಲ್ಲಿ ಬಂದಿದೆ.

ಹಿಂದುಸ್ಥಾನ ವಿಭಾಗಿಸಲ್ಪಟ್ಟರೆ ಬಂಗಾಲದ ವಿಭಜನೆ ಅನಿವಾರ್ಯ. ಅಖಂಡ ಹಿಂದುಸ್ಥಾನದಲ್ಲಿ ಮಾತ್ರ ಅಖಂಡ ಬಂಗಾಲ ಉಳಿಯಬಲ್ಲುದೆಂದು ಮಹರ್ಷಿ ಅರವಿಂದ ಘೋಷರು ಅಭಿಪ್ರಾಯಪಟ್ಟಿದ್ದಾರೆ. ಈ ವಿಷಯದ ಬಗ್ಗೆ ಚಾರುಪಾದ ಭಟ್ಟಾಚಾರ್ಯರು ಮಹರ್ಷಿಗಳಿಗೆ ತಂತಿ ಕಳಿಸಿದ್ದಕ್ಕೆ ಪಾಂಡಿಚೇರಿಯಿಂದ ಮೇಲಿನಂತೆ ತಂತಿ ಬಂದಿರುವದು.

ಕಲಕತ್ತೆಯಲ್ಲಿಯ ಪೋಲೀಸ ಅತ್ಯಾಚಾರಗಳ ವಿಚಾರಣೆ ಸೆರೆಮನೆಯಲ್ಲಿ ಪ್ರಾರಂಭವಾಗಿದೆ. ಎಪ್ರಿಲ ೧೪ಕ್ಕೆ ಹ್ಯಾರಿಸನ ರೋಡಿನಲ್ಲಿ ಒಂದು ಮನೆ ಹೊಕ್ಕು ಅಲ್ಲಿ ಸ್ತ್ರೀಯರ್ವರ ಮೇಲೆ ಅತ್ಯಾಚಾರ ಮಾಡಿದ ಆರೋಪ ಕಲಕತ್ತೆಯ ಹುರ್ವರು ಸಶಸ್ತ್ರ ಪೋಲೀಸರ ಮೇಲಿದೆ.

ಬಂಗಾಲ ಸರಕಾರದ ಅಕ್ಷಮ್ಯ ನಿರ್ವೀರ್ಯ ಧೋರಣೆಯ ಮೂಲಕ ಪ್ರಾಂತದ ಪರಿಸ್ಥಿತಿಯೆಲ್ಲ ಕೆಟ್ಟಿದ್ದರಿಂದ ವೈಸರಾಯರು ಕೂಡಲೆ ಅದರಲ್ಲಿ ಕೈಹಾಕಿ ಪ್ರಾಂತವನ್ನೂ ಶಿಕ್ಷಣವನ್ನೂ ಕಾಪಾಡಬೇಕೆಂದು ಬಂಗಾಲ ಹನ್ನೊಂದು ಜನ ವಿದ್ವಜ್ಜನರು ಲಾರ್ಡ ಲೂಯಿ ಮೌಂಟ ಬ್ಯಾಟನ್‌ರಿಗೆ ತಂತೀ ಕಳಿಸಿರುವರು.

ಪಂಜಾಬ

ಪಂಜಾಬ ಸಾಮ್ಯವಾದಿ ಪಕ್ಷದ ವಾರ್ಷಿಕಾಧಿವೇಶನ ಈ ತಿಂಗಳ ಕೊನೆಯಲ್ಲಿ ಲಾಹೋರಿನಲ್ಲಿ ಆಚಾರ್ಯ ನರೇಂದ್ರ ದೇವರ ಅಧ್ಯಕ್ಷತೆಯಲ್ಲಿ ಜರಗುವದು. ಸಾಮ್ಯವಾದಿ ಧುರೀಣರೆಲ್ಲ ಈ ಪರಿಷತ್ತಿಗೆ ಬರಲಿರುವರು.

ರಾಜಕೀಯ ಮತ್ತೆ ಭೌಗೋಲಿಕ ದೃಷ್ಟಿಯಿಂದ ಭಾರತ ಅಖಂಡವಾಗಿ ಉಳಿಯಬೇಕೆಂದು ಪಂಜಾಬ ಪ್ರಾಂತಿಕ ಕಾಂಗ್ರೆಸ ಸಮಿತಿ ಅಭಿಪ್ರಾಯಪಡುತಿದೆ. ಭಾರತದ ವಿಭಜನೆ ಅನಿವಾರ್ಯವಾದರೆ ಒಕ್ಕೂಟ ಭಾರತವನ್ನು ಸೇರಲಿಚ್ಛಿಸುವ ಪಂಜಾಬಕ್ಕೆ ಸ್ವಾತಂತ್ರ್ಯವಿರಬೇಕೆಂದೂ ಅಭಿಪ್ರಾಯಪಟ್ಟಿದೆ. ಪಂಜಾಬಿನಲ್ಲಿ ೫೦೦೦೦ ಕಾಂಗ್ರೆಸ್ ಸ್ವಯಂ ಸೇವಕರ ದಳವನ್ನು ಸಂಘಟಿಸಬೇಕೆಂದೂ ಗೊತ್ತಾಯಿತು.

ವಿಭಜನೆಯೊಂದೇ ಪಂಜಾಬಿನ ಸಮಸ್ಯೆಯನ್ನು ಬಗೆಹರಿಸಬಲ್ಲದೆಂದು ಬ್ಯಾ. ಜಿನ್ನಾರವರಿಗೆ ಕೊಟ್ಟ ಉತ್ತರದಲ್ಲಿ ಅಭಿಪ್ರಾಯ ಪಟ್ಟಿರುವರು.

ಲಾಹೋರಿನ ಸುಪ್ರಸಿದ್ಧ ಬ್ಯಾಂಕೊಂದು ತನ್ನ ಕೇಂದ್ರ ಕಚೇರಿಯನ್ನು ದಿಲ್ಲಿಗೆ ಸ್ಥಳಾಂತರಿಸುವ ವಿಚಾರ ಮಾಡಿದ್ದು ಪಾಲಕರ ಸಭೆಯಲ್ಲಿ ಕೊನೆಯ ನಿರ್ಣಯ ತೆಗೆದುಕೊಳ್ಳಲಿದೆ. ಇನ್ನೊಂದು ಕಂಪನಿ ಮತ್ತು ಪೇಟೆ ಎರಡು ಬ್ಯಾಂಕುಗಳು ಸ್ಥಳಾಂತರ ಮಾಡುವವು.

ಆಸಾಮ

ಆಸಾಮದ ಹೊಸ ಗವರ್ನರರಾದ ಸರ್ ಅಕ್ಬರ ಹೈದರಿಯವರ ಪ್ರತಿಜ್ಞಾ ವಿಧಿಯು ೪ನೇ ತಾರೀಕು ಜರಗಿತು. ಮುಖ್ಯ ಮಂತ್ರಿ ಬಾರ್ಡೋಲಾಯಿಯವರು ದಿಲ್ಲಿಯಿಂದ ಸಂದೇಶ ಕಳಿಸುತ್ತ ಈ ಪ್ರಥಮ ಹಿಂದೀ ಗವರ್ನರರನ್ನು ಅಭಿನಂದಿಸಿದ್ದಾರೆ. ಆಸಾಮದ ಜನರಿಗೆ ಸೇವೆ ಸಲ್ಲಿಸುವದೆ ತಮ್ಮ ಧ್ಯೇಯವೆಂದು ಗವರ್ನರರು ತಮ್ಮ ಉತ್ತರದಲ್ಲಿ ಹೇಳಿದರು.

ಆಸಾಮದ ಮೇಲೆ ದಾಳಿ ನಡೆಸಬೇಕೆಂದು ಪೂರ್ವ ಪಾಕಿಸ್ತಾನ ಕಿಲ್ಲೆಯಲ್ಲಿ ಸಂಘಟನೆ ನಡೆಸಿದ್ದ ಜನರ ಮುಖ್ಯ ಸಂಘಟಕರಾದ ಮೌಲ್ವಿ ಅಬ್ದುಲ್ ಕಾಸಿಮ ಎಂ. ಎಲ್. ಎ. ಇವರು ಮಹಾನಕಪುರ ಗ್ರಾಮದಲ್ಲಿ ಶರಣಾಗತರಾದರು. ಆಸಾಮದಲ್ಲಿ ಜಾತ್ಯತೀತ ಅಹಿಂಸೆಯ ಸತ್ಯಾಗ್ರಹ ನಡೆಯಬೇಕೆಂದು ಶರಣಾಗತರಾಗುವ ಪೂರ್ವದಲ್ಲಿ ಮೌಲ್ವಿ ಸಾಹೇಬರು ಸಾರ್ವಜನಿಕ ಸಭೆಯೊಂದರಲ್ಲಿ ಹೇಳಿದರು.

ಆಸಾಮ ಶಾಸನಸಭೆಯ ಮುಸ್ಲಿಂ ಲೀಗ ಪಕ್ಷದ ಉಪಧುರೀಣ ಮೌಲ್ವಿ ಅಬ್ದುಲ್ ಹಮೀದ ಮತ್ತು ಬೇರೆ ಕೆಲ ಜನರ ವಿರುದ್ಧ ಇದ್ದ ಪೋಲೀಸ ವಿಚಾರಣೆಯನ್ನು ಮತ್ತೆ ನಡೆಸಬೇಕೆಂದು ಅಡಿಶನಲ್ ಸೆಶನ್ಸ ಜಜ್ಜರು ವಿಧಿಸಿದರು. ಅಗಸ್ಟ ೧೫ಕ್ಕೆ ರಾಷ್ಟ್ರೀಯ ಮುಸಲ್ಮಾನರಿದ್ದ ಮುಸ್ಲಿಂ ಹೊಟೆಲ್ ಮೇಲೆ ದಾಳಿ ಮಾಡಿದರೆಂದು ಇವರ ಮೇಲೆ ತಕರಾರಿದೆ.

ಮಂತ್ರಿತ್ರಯದ ಯೋಜನೆಯಿಂದ ಭಯಗ್ರಸ್ತವಾದ ಆಸಾಮವು ಈಗ ಅದರಿಂದ ಮುಕ್ತವಾಗುವ ಕಾಲ ಬಂದಿರುವಾಗ ಪುಂಡರ ಹಾವಳಿಯ ಭಯವೊಂದು ಉತ್ಪನ್ನವಾಗಿದೆ. ಅದಕ್ಕಾಗಿ ಆಸಾಮದ ಪ್ರತಿಯೊಬ್ಬ ದೇಶಬಾಂಧವನು ಪುಂಡತನವನ್ನು ನಿರ್ಮೂಲಗೊಳಿಸಲಣಿಯಾಗಬೇಕೆಂದು ಆಸಾಮ ಮುಖ್ಯ ಮಂತ್ರಿಗಳಾದ ಬಾರ್ಡೋಲಾಯಿಯವರು ಅಭಿಪ್ರಾಯಪಟ್ಟಿರುವರು.

ಸರಹದ್ದ

ಗಡಿನಾಡ ಪ್ರಾಂತದ ಹಿಂದಿನ ಮುಖ್ಯಮಂತ್ರಿಗಳಾದ ಸರದಾರ ಔರಂಗಜೇಬ ಖಾನರು ಕಾಯಿದೆ ಮುರಿದದ್ದರಿಂದ ೪ನೇ ತಾರೀಕು ಮರ್ದಾನದಲ್ಲಿ ಸೆರೆಹಿಡಿಯಲ್ಪಟ್ಟರು.

ತಮ್ಮನ್ನಾರಿಸಿ ಕಳಿಸಿದ ಮತದಾರರ ಹೊರತು ಗಡಿನಾಡ ಮಂತ್ರಿಮಂಡಳವನ್ನು ಯಾರೂ ಆಕ್ರಮೋಪಾಯ ಅಥವಾ ಹೆದರಿಕೆಯಿಂದ ಉರುಳಿಸಲಾರರೆಂದು ಡಾ ಖಾನಸಾಹೇಬರು ನೌಶೇರ ತಹಶೀಲದ ರುಮಾರ ಎಂಬ ಹಳ್ಳಿಯಲ್ಲಿ ಸಾರ್ವಜನಿಕ ಸಭೆಯೊಂದರಲ್ಲಿ ಭಾಷಣ ಮಾಡಿದರು.

ಸರಹದ್ದಿನಿಂದ ಮುಸ್ಲಿಂ ಲೀಗ ಶಿಷ್ಟಮಂಡಲವೊಂದು ವೈಸರಾಯರನ್ನು ಕಾಣಲು ಹೋಗಲಿರುವದಷ್ಟೆ. ಅದರಲ್ಲಿ ಡಾ. ಖಾನಸಾಹೇಬರ ಮನೆಯ ಮುಂದೆ ಸತ್ಯಾಗ್ರಹ ಮಾಡಿ ಫರಾರಿಯಾದವರೊಬ್ಬರು ಇರುವರು. ಇವರನ್ನು ವಿಮಾನದಿಂದ ಬ್ಯಾ. ಜಿನ್ನಾರ ಕಡೆಗೆ ಕಳಿಸಲಾಗಿದೆಂದು ತಿಳಿದುಬಂದದ್ದು ಈ ಫರಾರಿ ಆರೋಪಿ ಮಿಯಾ ಅಬ್ದುಲ್ ಶಹಾರನ್ನು ಶಿಷ್ಟಮಂಡಳದಲ್ಲಿ ಹೇಗೆ ಸೇರಿಸಿಕೊಳ್ಳಲಾಯಿತೆಂಬ ಬಗ್ಗೆ ವಿಚಾರಣೆ ನಡೆಸುವದಾಗಿ ಖಾನ ಸಾಹೇಬರು ಹೇಳಿದರು.

ಗಡಿನಾಡಿನಲ್ಲಿ ಪುನಃ ಚುನಾವಣೆ ಆಗಬೇಕು. ಎಂದು ಆಜ್ಞೆ ಹೊರಟರೆ ಅಲ್ಲಿ ದೊಡ್ಡ ಪ್ರಮಾಣದಿಂದ ರಕ್ತಪಾತ ಸಂಭವಿಸುವದು ಎಂದು ಸರಹದ್ದ ಪ್ರಾಂತದ ಧುರೀಣರಾದ ಖಾನ ಅಬ್ದುಲ್ ಗಫರಖಾನರು ಹೇಳಿದರು.

ಗಡಿನಾಡಿನಲ್ಲಿ 'ಝುಲಮೆಫಾಕಟೂನ'(ತರುಣ ಪಠಾಣರು) ಎಂಬ ಹೊಸ ಶಕ್ತಿಯ ಪಕ್ಷ ಅಸ್ತಿತ್ವದಲ್ಲಿ ಬಂದಿದೆ. ಗಡಿನಾಡ ಗಾಂಧಿಯವರ ಮಕ್ಕಳೂ ಕೇಂದ್ರ ಶಾಸನ ಸಭೆಯ ಸದಸ್ಯರೂ ಆಗಿರುವ ಶ್ರೀ ಖಾನ ಅಬ್ದುಲ್ ಗಣಿ ಖಾನರೆ ಅದನ್ನು ಸಂಘಟಿಸಿರುವರು. ಈ ಪಕ್ಷದವರು ಮುಯ್ಯಕ್ಕೆ ಮುಯ್ಯ ಮತ್ತು ಸ್ವಸಂರಕ್ಷಣೆಗಾಗಿ ಹಿಂಸೆ ಈ ತತ್ವಗಳನ್ನು ನಂಬಿರುವರು.

ಜೋಗ ವಿದ್ಯುಚ್ಛಕ್ತಿ


ಮುಂಬಯಿ ಸರಕಾರದ ಸುಪರಿಂಟೆಂಡಿಂಗ ಎಂಜಿನಿಯರರ ಸ್ಪಷ್ಟೀಕರಣ

ಮುಂಬಯಿ ಸರಕಾರದ ಇಲೆಕ್ಟ್ರಿಕಲ್ ಗ್ರಿಡ್‌ದ ಸುಪರಿಂಟೆಂಡಿಂಗ ಎಂಜಿನಿಯರ ಡಾ. ಪ್ರಸಾದರು ಹುಬ್ಬಳ್ಳಿಗೆ ಬಂದಾಗ ಆ ಯೋಜನೆಯ ಬಗ್ಗೆ ಸ್ಪಷ್ಟೀಕರಣ ಮಾಡಿದರು. ಅದಿಂತಿದೆ—

ಮೈಸೂರ ಮತ್ತು ಮುಂಬಯಿ ಸರಕಾರಗಳಲ್ಲಾದ ಕರಾರಿನನ್ವಯ ಮುಂಬಯಿ ಪ್ರಾಂತಕ್ಕೆ ಜೋಗದಿಂದ ೩೬೦೦ ಕಿಲೋವ್ಯಾಟ (೫೦೦೦ ಹಾರ್ಸ ಪಾವರ)ನಷ್ಟು ವಿದ್ಯುಚ್ಛಕ್ತಿ ಸಿಗುತ್ತದೆ. ಇದನ್ನು ಹೇಗೆ ಉಪಯೋಗಮಾಡಿಕೊಳ್ಳಬೇಕೆನ್ನುವದೇ ಮುಖ್ಯ ಪ್ರಶ್ನೆಯಾಗಿರುವದು. ಡಾ. ಪ್ರಸಾದರ ಯೋಜನೆಯನ್ವಯ ಇದನ್ನು ಮೊದಲನೆಯದಾಗಿ, ಜೋಗದಿಂದ ಕುಮಟಾ ಗೋಕರ್ಣ ಮಾರ್ಗವಾಗಿ ಕಾರವಾರಕ್ಕೆ ನೂರು ಮೈಲು ಒಯ್ಯಬಹುದು. ಎರಡನೆಯದಾಗಿ ಹರಿಹರ ಕೇಂದ್ರದಿಂದ ರಾಣೇಬೆನ್ನೂರ ಬ್ಯಾಡಗಿ ಮತ್ತು ಹಾವೇರಿಗಳಿಗೆ ಪೂರೈಸಬಹುದು. ಮೂರನೆಯದಾಗಿ ಜೋಗದಿಂದ ಸಿದ್ದಾಪೂರ ಸಿರ್ಸಿ, ಹಾನಗಲ್ಲ ಮಾರ್ಗದಿಂದ ನೇರವಾಗಿ ಹುಬ್ಬಳ್ಳಿಗೆ ತರಬಹುದು. ಇವುಗಳಲ್ಲಿ ಒಂದು ಮತ್ತು ಎರಡನೇ ಮಾರ್ಗಗಳಲ್ಲಿ ಬೇಡಿಕೆ ಅಷ್ಟಾಗಿರುವದಿಲ್ಲ. ಅಲ್ಲದೆ ಉತ್ಪಾದನೆಯ ಕೇಂದ್ರದಲ್ಲಿಯೇ ಶಕ್ತಿಯನ್ನು ಕೊಡುವ ಕರಾರಿರುವದರಿಂದ ಹರಿಹರದಿಂದ ತೆಗೆದುಕೊಂಡರೆ, ಜೋಗದಿಂದ ಹರಿಹರ ವರೆಗೆ ೮೦ ಮೈಲು ವಿದ್ಯುಚ್ಛಕ್ತಿಯನ್ನು ತಂದುಕೊಡುವ ಬಾಡಿಗೆ ಕೊಡಬೇಕಾಗುವದು. ಈ ಎರಡು ಮಾರ್ಗಗಳಲ್ಲಿ ಇಷ್ಟು ಅಡಚಣೆಗಳಿದ್ದರೂ ಅವುಗಳ ವಿಚಾರವನ್ನು ಬಿಟ್ಟು ಕೊಟ್ಟಿಲ್ಲವೆಂದು ಅವರು ಸ್ಪಷ್ಟವಾಗಿ ತಿಳಿಸಿದರು.

ಮೂರನೆಯ ಮಾರ್ಗವು ಎಲ್ಲಕ್ಕೂ ಮಹತ್ವದ್ದಿದೆ. ಹುಬ್ಬಳ್ಳಿ ಕರ್ನಾಟಕದ ಔದ್ಯೋಗಿಕ ಕೇಂದ್ರವಿರುವದರಿಂದ ಮತ್ತು ಅಲ್ಲಿ ಹೆಚ್ಚು ಉದ್ಯೋಗಗಳು ಬೆಳೆಯುವ ಸಂಭವವಿರುವದರಿಂದ ಅಲ್ಲಿ ಬೇಡಿಕೆ ಬಹಳ ಹೆಚ್ಚಾಗಿರುವದು. ಆದರೂ ವಿದ್ಯುಚ್ಛಕ್ತಿಯನ್ನು ೧೦೫ ಮೈಲು ದೂರದಿಂದ ತರಬೇಕಾಗುವದರಿಂದ ಕನಿಷ್ಠ ೭೦೦೦ ಕಿಲೊವ್ಯಾಟುಗಳಷ್ಟು ಶಕ್ತಿ ಇದ್ದರೆ ಉಪಯೋಗವಾಗುವದು. ಇಷ್ಟು ತಂದರೂ ಒಂದು ಯೂನಿಟ್ಟಿಗೆ. ೮೭ (ಸುಮಾರು ೧೦ ಪೈ) ಆಕರೀಳುವದು. ಇಷ್ಟು ಶಕ್ತಿಯನ್ನು ತಂದ ಮೇಲೆ ಈ ಬೆಲೆಗೆ ವೆಚ್ಚವಾದರೆ ಪ್ರಶ್ನೆ ಬಗೆಹರಿಯುವದು. ಕರ್ನಾಟಕದ ಉದ್ದಿಮೆದಾರರು ಇಷ್ಟು ಬೆಲೆ ಕೊಡಲು ಸಿದ್ಧರಿದ್ದಾರೆಂದು ಇಂದಿನ ಸಭೆಗಳಲ್ಲಿ ಅವರು ತಿಳಿಸಿದರು. ಆದರೆ ಅಷ್ಟು ಶಕ್ತಿಯನ್ನು ವೆಚ್ಚ ಮಾಡುವದೆಂತು? ಹುಬ್ಬಳ್ಳಿಯೊಂದರಲ್ಲಿಯೇ ಅಷ್ಟು ಖರ್ಚಾಗುವದು ಸಾಧ್ಯವಿಲ್ಲ. ಆದುದರಿಂದ ಗದಗ ಧಾರವಾಡ ಮತ್ತು ಬೆಳಗಾವಿ ಈ ನಗರಗಳ ಬೇಡಿಕೆಗಳನ್ನೂ ಲೆಕ್ಕಕ್ಕೆ ತೆಗೆದುಕೊಂಡರೆ ಬೇಡಿಕೆಯು ಸದ್ಯಕ್ಕೆ ನಾಲ್ಕರಿಂದ ಐದುಸಾವಿರ ಕಿಲೊವ್ಯಾಟುಗಳಷ್ಟು ಮತ್ತು ಐದು ವರ್ಷಗಳ ನಂತರ ಏಳರಿಂದ ಎಂಟುಸಾವಿರ ಕಿಲೊವ್ಯಾಟಗಳಷ್ಟಾಗುವದು. ಆದುದರಿಂದ ಮೇಲೆ ಹೇಳಿದ ಧಾರಣೆಯಂತೆ ಇಲ್ಲಿಯ ಉದ್ದಿಮೆದಾರರು ವಿದ್ಯುಚ್ಛಕ್ತಿಯನ್ನು ತೆಗೆದುಕೊಳ್ಳಲು ಸಿದ್ಧರಾದರೆ ಅದು ಸಿಗುವ ಸಂಭವವಿದೆ. ಕೆಲಸ ಪ್ರಾರಂಭವಾದ ಮೇಲೆ ಶಕ್ತಿ ಸಿಗಬೇಕಾದರೆ ಮೂರು ವರ್ಷಗಳು ಹಿಡಿಯುವವು.

ರಾಷ್ಟ್ರಪತಿಗಳಾದ ಆಚಾರ್ಯ ಕೃಪಲಾನಿಯವರು ಬಿಹಾರ ಕೇರಳ ಮೈಸೂರು ಜಯಪುರ ಸಂಸ್ಥಾನಗಳಲ್ಲಿ ಇತ್ತೀಚೆಗೆ ಸಂಚರಿಸಿದಾಗ ಅವರಿಗೆ ಒಪ್ಪಿಸಿದ ನಿಧಿ ೫॥ ಲಕ್ಷ ರೂಪಾಯಿಗಳನ್ನು ಮಿಕ್ಕಿದೆಂದು ತಿಳಿಯುತ್ತದೆ.



೫೫ ಪ್ರಶ್ನೆಗಳು

೫ ಪ್ರಶ್ನೆಗಳನ್ನು ಬರೆದು ಕವರಿನಲ್ಲಿಟ್ಟು ಸೀಲ್ ಮಾಡಿ ಕಳುಹಿಸಿದರೆ ದೇವೀ ಮಹಿಮೆಯಿಂದ ಉತ್ತರ ರೂಪದಲ್ಲಿ ಭವಿಷ್ಯ ಬರೆದು, ಅದೇ ನಿಮ್ಮ ಕವರಿನೊಂದಿಗೆ ರೂ. ೩ಕ್ಕೆ ವ್ಹಿ. ಪಿ. ಮಾಡಲಾಗುವದು.

ಸಿದ್ಧಾಂತಿ ಎಂ. ಆರ್. ಸುಬ್ಬಯ್ಯ

ನಂ. ೧೨, ಕಂಚನಾಯಕನಗಲ್ಲಿ ಗಾಣಿಗರಪೇಟೆ, ಬೆಂಗಳೂರು ಸಿಟಿ

ಕಾಂಗ್ರೆಸ್ ವಿಧಾಯಕ ಕಾರ್ಯ ಸಮಿತಿ

ದೇಶದಲ್ಲಿ ವಿಧಾಯಕ ಕಾರ್ಯಕ್ರಮವು ಹೆಚ್ಚು ಜೋರಿನಿಂದ ಸಾಗುವದಕ್ಕಾಗಿ ಮತ್ತು ಸುಸಂಘಟಿತ ಹಾಗು ಸರ್ವಾಂಗೀಣ ಉನ್ನತಿಯನ್ನು ಸಾಧಿಸಲು ಕಾಂಗ್ರೆಸ್ ಕಾರ್ಯಸಮಿತಿಯು ವಿಧಾಯಕ ಸಮಿತಿಯೊಂದನ್ನು ನೇಮಿಸಿದೆ. ವಿದ್ಯಾರ್ಥಿ ಕೂಲಿಕಾರ ಮತ್ತು ರೈತ ಸಮಸ್ಯೆಗಳ ಬಗ್ಗೆ ಕಾಂಗ್ರೆಸ್ಸಿನ ಕೇಂದ್ರ ಕಚೇರಿಯಲ್ಲಿ ಪ್ರತ್ಯೇಕ ವಿಭಾಗಗಳನ್ನು ತೆರೆಯಲಿದ್ದು ಉಳಿದ ಖಾದಿ, ಗ್ರಾಮೋದ್ಯೋಗ, ಮೂಲ ಶಿಕ್ಷಣ, ಹರಿಜನ ಹಿಂದುಸ್ತಾನೀ ಪ್ರಚಾರ ಮತ್ತು ಪ್ರೌಢ ಶಿಕ್ಷಣ ಈ ಮುಖ್ಯ ಕಾರ್ಯಗಳನ್ನು ವಿಧಾಯಕ ಕಾರ್ಯ ಸಮಿತಿಗೆ ಒಪ್ಪಿಸಲಾಯಿತು. ಈ ಸಮಿತಿಯ ಮೊದಲನೆ ಸಭೆ ಕಳೆದ ತಿಂಗಳು ೨೬—೨೭ ನೇ ತಾರೀಖುಗಳಲ್ಲಿ ದಿಲ್ಲಿಯಲ್ಲಿ ಸೇರಿ ಮಹತ್ವದ ಕೆಲ ನಿರ್ಣಯಗಳನ್ನು ಕೈಕೊಳ್ಳಲಾಯಿತು. ಮೊದಲನೆಯದಾಗಿ ವಿಧಾಯಕ ಕಾರ್ಯಕ್ರಮಗಳು ಕೆಳಗಿನಂತೆ ಸದಸ್ಯರಲ್ಲಿ ಹಂಚಲಾದವು.

ಶ್ರೀ ಶಂಕರರಾವ ದೇವ:— ಖಾದಿ
,, ಪಿ. ಸಿ ಘೋಷ:— ಗ್ರಾಮೋದ್ಯೋಗ
,, ಸುಚೇತಾ ಕೃಪಲಾನಿ:- ಮೂಲಶಿಕ್ಷಣ
,, ದಿವಾಕರ:— ಹಿಂದುಸ್ತಾನೀ ಪ್ರಚಾರ ಮತ್ತು ಪ್ರೌಢಶಿಕ್ಷಣ
,, ಜಯರಾಮದಾಸ ದೌಲತರಾಮ:—— ಹರಿಜನಕಾರ್ಯ

ಈ ವರ್ಷ ಇಡೀ ದೇಶದ ಒಂದುಲಕ್ಷ ಹೊಸ ಸ್ವಾವಲಂಬಿ ಖಾದಿ ಧಾರಿಗಳನ್ನು ಕೂಡಿಸಬೇಕೆಂದು ನಿಶ್ಚಯವಾಯಿತು. ಇವರು ಸತತ ಖಾದಿಧಾರಿಗಳಾಗಿರಬೇಕಲ್ಲದೆ ಪ್ರತಿ ವರುಷ ೪೦ ಲಡಿಗಳನ್ನು ತಾವೇ ಸ್ವತಃ ನೂಲಬೇಕು. ಸ್ವತಃ ಹಂಜಿ ಮಾಡಿದರೆ ೬೦ ಲಡಿ ನೂಲಬೇಕು. ಕರ್ನಾಟಕದಲ್ಲಿ ೬೦೦೦ ಸ್ವಾವಲಂಬಿಗಳನ್ನು ಕೂಡಿಸಬೇಕಾಗಿ ಸಮಿತಿಯವರು ನಿರ್ಣಯಿಸಿರುವರು. ಗ್ರಾಮೋದ್ಯೋಗ ಕಾರ್ಯದಲ್ಲಿ ಸದ್ಯಕ್ಕೆ ೧೦೦೦೦ ದಷ್ಟು ಜನವಸತಿಯಿರುವ ಒಂದು ಪ್ರದೇಶವನ್ನು ತೆಗೆದುಕೊಂಡು ಅದು ಸಾಧಾರಣವಾಗಿ ಅನ್ನ ವಸ್ತ್ರ ಶಿಕ್ಷಣ ಮುಂತಾದ್ದರಲ್ಲಿ ಸ್ವಯಂಪೂರ್ಣವಾಗುವ[illegible] ಯತ್ನಿಸಬೇಕು. ೫ ವರ್ಷಗಳಲ್ಲಿ ಇದನ್ನು ವಿಸ್ತರಿಸಿ ಸುಮಾರು ಒಂದುಲಕ್ಷ ಜನರು ಒತ್ತಟ್ಟಿಗಿದ್ದ ಪ್ರದೇಶ ಸ್ವಯಂ ಪೂರ್ಣವಾಗುವಂತೆ ಪ್ರಯತ್ನಿಸಬೇಕು. ಪ್ರತಿಯೊಂದು ಪ್ರಾಂತದಲ್ಲಿಯೂ ಒಂದೆರಡು ಕೇಂದ್ರ ತೆಗೆದು ಕಾರ್ಯ ಮಾಡಬೇಕೆಂದು ಗೊತ್ತಾಗಿದೆ. ಪ್ರತಿ ಪ್ರಾಂತದಲ್ಲಿ ಕನಿಷ್ಠ ೫ ಮೂಲ ಶಿಕ್ಷಣ ಕೇಂದ್ರಗಳನ್ನಾದರೂ ತೆಗೆಯಬೇಕೆಂದು ಗೊತ್ತಾಗಿದೆ. ಆಯಾ ಪ್ರಾಂತೀಯ ಕಾಂಗ್ರೆಸ ಸಮಿತಿಗಳ ನೇತೃತ್ವದಲ್ಲಿ ಈ ಕೆಲಸ ನಡೆಯಬೇಕೆಂದು ಗೊತ್ತಾಗಿದೆ.

ಈಗ ದೇಶದಲ್ಲಿ ಇಂಗ್ಲೀಶ್ ಭಾಷೆ ಆಕ್ರಮಿಸಿರುವ ಅಂತಃಪ್ರಾಂತೀಯ ಹಾಗೂ ರಾಷ್ಟ್ರೀಯಸ್ಥಾನವನ್ನು ಬದಲಿಸಿ ಆ ಸ್ಥಳಕ್ಕೆ ಹಿಂದುಸ್ತಾನಿಯನ್ನು ತರುವದೇ ಹಿಂದುಸ್ತಾನೀ ಪ್ರಚಾರ ಕಾರ್ಯದ ಉದ್ದೇಶ. ಹಾಯಸ್ಕೂಲ ಮತ್ತು ಕಾಲೇಜಗಳಲ್ಲಿ ಹಿಂದುಸ್ತಾನಿಯನ್ನು ಐಚ್ಛಿಕ ವಿಷಯವನ್ನಾಗಿ ಮಾಡಬೇಕು. ಬೇರೆಯ ಪ್ರಾಂತದವರೊಡನೆ ವ್ಯವಹಾರ ನಡೆಸುವಷ್ಟು ಹಿಂದುಸ್ತಾನಿ ಜನಸಾಮಾನ್ಯರಿಗೆ ಬರಬೇಕೆಂಬುದೆ ಉದ್ದೇಶವಾಗಿದೆ. ಹರಿಜನ ಕಾರ್ಯ ಮಾಡುವಾಗ ಕೇವಲ ಹರಿಜನರನ್ನಷ್ಟೆ ಗಣಿಸದೆ ಉಳಿದ ಹಿಂದುಳಿದ ಎಲ್ಲ ಜನರ ಬಗ್ಗೆಯೂ ಪ್ರಯತ್ನ ಮಾಡಿ ಅವರಿಗೆ ಸಮಾಜದಲ್ಲಿ ನಾಗರಿಕ ಸ್ವಾತಂತ್ರ್ಯ ಹಕ್ಕು ದೊರೆಯುವಂತೆ ಪ್ರಯತ್ನಿಸಬೇಕು. ಈ ಎಲ್ಲ ಕಾರ್ಯ ಸಂಘಟಿತ ರೀತಿಯಿಂದ ಮತ್ತು ಸುವ್ಯವಸ್ಥಿತವಾಗಿ ಸಾಗುವಂತೆ ನೋಡಿಕೊಳ್ಳಲಾಗುವದು.

ಅಂತರ_ರಾಷ್ಟ್ರೀಯ ವಾಣಿಜ್ಯ ಪರಿಷತ್ತು, ಜಿನಿವಾ



ಏಪ್ರಿಲ ೧೦ ನೇ ತಾರೀಖಿಗೆ ಸೇರಿದ ಅಧಿವೇಶನದ ನೋಟ

ಈ ಚಿತ್ರದಲ್ಲಿ ಕೆಲ ಹಿಂದೀ ಪ್ರತಿನಿಧಿಗಳನ್ನು ಕಾಣಬಹುದು. ಮುಂದಿನ ಸಾಲಿನಲ್ಲಿ ಎಡದಿಂದ ಬಲಕ್ಕೆ ಶ್ರೀ ಎಚ್. ಎಸ್. ಮಲಿಕ್ (ಪತಿಯಾಳಾ), ಶ್ರೀ ದ ಪ ಕರಮರಕರ (ಕರ್ನಾಟಕ), ಶ್ರೀ ಸತ್ತಾರ ಶೇಠ (ಲೀಗ), ಹಿಂದಿನ ಸಾಲಿನಲ್ಲಿ ಶ್ರೀ ಅಹುಜಾ (ಕಾನಡಾದಲ್ಲಿ ಹಿಂದೀ ವ್ಯಾಪಾರಿ ಪ್ರತಿನಿಧಿಗಳು), ಶ್ರೀ ಇಕ್ರಮುಲ್ಲಾ (ಕೇಂದ್ರ ಸರಕಾರದ ವಾಣಿಜ್ಯ ಶಾಖೆಯ ಕಾರ್ಯದರ್ಶಿಗಳು) ಶ್ರೀ ಎಂ. ಪಿ. ಪೈ (ಕೇಂದ್ರ ಸರಕಾರದ ಉದ್ಯೋಗ ಶಾಖೆಯ ಕಾರ್ಯದರ್ಶಿಗಳು-ಕನ್ನಡಿಗರು), ಮೂರನೇ ಸಾಲು ಡಾ. ಗಾಂಗುಲಿ (ದಿಲ್ಲಿ ವಿಶ್ವವಿದ್ಯಾಲಯ), ಡಾ. ಲೋಕನಾಥನ್ (ಈಸ್ಟರ್ನ ಏಕಾನೊಮಿಸ್ಟ ಪತ್ರಿಕೆಯ ಸಂಪಾದಕರು)

ಮುಂಬಯಿಯಲ್ಲಿ ನ್ಯಾ. ಲೋಕೂರರಿಗೆ ಸತ್ಕಾರ

ಮುಂಬಯಿ ಸಂಯುಕ್ತ ಕರ್ನಾಟಕ ಸಂಘದವರು ಲೋಕೂರರ ಷಷ್ಠ್ಯಬ್ದ ಸಮಾರಂಭದ ನಿಮಿತ್ತ ಎಪ್ರಿಲ ೨೭ಕ್ಕೆ ಮಾನಪತ್ರ ಕೊಡುವಾಗ ತೆಗೆದ ಭಾವಚಿತ್ರವಿದು



ಎಡದಿಂದ ಬಲಕ್ಕೆ:— ಶ್ರೀ ಜಾಗೀರದಾರ ರಂಗಾಚಾರ್ಯರು, ಡಾ. ಕುರ್ತಕೋಟಿ ಶಂಕರಾಚಾರ್ಯರು, ನ್ಯಾ ಲೋಕೂರ ನಾರಾಯಣರಾಯರು ಸೌ. ಲಕ್ಷ್ಮೀಬಾಯಿ ಲೋಕೂರರು

ಗದಗಿನಲ್ಲಿ ಶ್ರೀ ಜಯಪ್ರಕಾಶರು

ಎಡಗಡೆ:— ಮುನಸಿಪಲ್ ಬಯಲಿನಲ್ಲಿ ಸಾರ್ವಜನಿಕ ಸಭೆಯಲ್ಲಿ ಶ್ರೀ ಜಯಪ್ರಕಾಶರು ಹೂಮಾಲೆಯನ್ನು ಸ್ವೀಕರಿಸುತ್ತಿರುವರು.

ನಡುವೆ-ಶ್ರೀ ಜಯಪ್ರಕಾಶರು ತಮ್ಮ ಪತ್ನಿಯೊಂದಿಗೆ ಶ್ರೀ ಗೋಖಲೆಯವರ ಮನೆಯಿಂದ ಹೊರಗೆ ಬರುತ್ತಿರುವದು.

ಬಲಗಡೆ:— ಮುನಸಿಪಲ ಬಯಲಿನಲ್ಲಿ ಕೂಡಿದ ಸಾರ್ವಜನಿಕ ಸಭೆಯ ನೋಟ.

ಫೋಟೊ— ''ರಾಜ''







ಬೆಂಗಳೂರು—ಮೈಸೂರು

ಬೆಂಗಳೂರು ನಗರ ಸಭೆಯು ಮೇ ೧ ರ ಸಭೆಯಲ್ಲಿ ನಗರದಲ್ಲಿ ಪಾರ್ಕುಗಳ ರಚನೆಯ ವಿಷಯಕ್ಕೆ ವರದಿಮಾಡಲು ನೇಮಿಸಲ್ಪಟ್ಟಿದ್ದ ಉಪಸಮಿತಿಯ ವರದಿಯು ಚರ್ಚೆಯಾಯಿತು. ಮುಸ್ಲಿಂ ಮತ್ತು ಇತರ ಅಲ್ಪ ಸಂಖ್ಯಾತರಿಗೆ ಸ್ಥಾನ ಕಾಯ್ದಿಡುವದು ಪ್ರತ್ಯೇಕ ಮತದಾನ, ನಾಮಕರಣ ಸದಸ್ಯರು ಬೇಕೋ ಬೇಡವೋ ಮೊದಲಾದ ವಿಷಯಗಳ ಮೇಲೆ ಬಗೆಹರಿಯದ ಚರ್ಚೆನಡೆದು ಸಭೆಮುಂದೆ ಬಿತ್ತು. ನಗರ ಸಭೆಯ ಸದಸ್ಯ ಸಂಖ್ಯೆ ೩೦ ರಿಂದ ೪೫ ಕ್ಕೇರಿಸಬೇಕೆಂದು ಮಾತ್ರ ಒಪ್ಪಲ್ಪಟ್ಟಿತು.

ಹತ್ತಿ ವ್ಯವಸಾಯದಲ್ಲಿ ತಜ್ಞರಾದ ಇಂಗ್ಲೆಂಡಿನ ಡಾ ಡಬ್ಲ್ಯು ಎಲ್. ಬಾಲ್ಸರು ಹಿಂದೀ ಕೇಂದ್ರ ಅರಳೆಸಮಿತಿಯ ಆಮಂತ್ರಣದ ಮೇರೆಗೆ ಹಿಂದುಸ್ಥಾನಕ್ಕೆ ಬಂದವರು ಬೆಂಗಳೂರಿಗೂ ಬರುವರು. ಅವರು ಮೈಸೂರಿನಲ್ಲಿ ಇಜಿಪ್ಶನ್ ಹತ್ತಿಬೆಳೆಸುವ ವಿಚಾರದಲ್ಲಿ ಸಲಹೆ ಕೊಡಲಿರುವರು.

ಬೆಂಗಳೂರಲ್ಲಿ ಈಗಾಗಲೆ ಇರುವ ಸಭೆಮುರವಣಿಗೆಗಳ ಪ್ರತಿಬಂಧಾಜ್ಞೆಯ ಅವಧಿಯನ್ನು ಜೂನ ೩೦ ರ ವರೆಗೂ ಬೆಳೆಸಲಾಗಿದೆ.

ಬೆಂಗಳೂರಿನಲ್ಲಿ ಈಚೆಗೆ ನಡೆದ ಜಾತೀಯ ಗಲಭೆಗಳ ಸಂಬಂಧದಲ್ಲಿ ಸ್ಥಾನಬದ್ಧರಾಗಿರಿಸಲ್ಪಟ್ಟವರಲ್ಲಿ ಇನ್ನೂ ಬಂಧನದಲ್ಲಿದ್ದ ೨೬ ಜನರನ್ನು ಜಿಲ್ಲಾ ಮ್ಯಾಜಿಸ್ಟ್ರೇಟರ ಆಜ್ಞೆಯಂತೆ ತಾ. ೧ ಕ್ಕೆ ಬಿಡುಗಡೆ ಮಾಡಲಾಯಿತು.

ಹರಿದ್ವಾರದಲ್ಲಿ ಮೇ ೧೧ ಕ್ಕೆ ನಡೆಯುವ ಅ. ಭಾ. ಪೆಥಾಲಾಜಿಕಲ್ ಮತ್ತು ಆಯುರ್ವೇದ ಪರಿಷತ್ತಿನ ಅಧ್ಯಕ್ಷರಾಗಿ ಮೈಸೂರಿನ ಪಾರ್ಥನಾರಾಯಣ ಪಂಡಿತರು ಆರಿಸಲ್ಪಟ್ಟಿದ್ದಾರೆ.

ಮೇ ೨೮ ಕ್ಕೆ ಮೈಸೂರು ಪ್ರಜಾಪ್ರತಿನಿಧಿ ಸಭೆಯ ಆಯವ್ಯಯದ ಅಧಿವೇಶನ ಪ್ರಾರಂಭವಾಗುವದು.

ಹೈದರಾಬಾದ ದಿವಾಣರಾದ ಸರ್ ಮಿರ್ಜಾ ಎಂ. ಇಸ್ಮಾಯಿಲರನ್ನು ಬೆಂಗಳೂರಲ್ಲಿ ನವಲಗುಂದ ಶ್ರೀ ಬಸವಲಿಂಗ ಸ್ವಾಮಿಗಳೂ ಶ್ರೀ ಶಿವಮೂರ್ತಿ ಶಾಸ್ತ್ರಿಗಳೂ ತಾ ೩ ಕ್ಕೆ ಸಂದರ್ಶಿಸಿದರು. ಸಂಸ್ಥಾನದಲ್ಲಿ ಹಿಂದೂ ಧರ್ಮದ ರಕ್ಷಣೆಯಾಗಬೇಕೆಂದು ನಿವೇದಿಸಿ ಸಂಸ್ಥಾನದಲ್ಲಿರುವ ಕೊಳ್ಳಿ ಮೊದಲಾದ ಕ್ಷೇತ್ರಗಳ ಉದ್ಧಾರಕ್ಕೆ ಸರಕಾರದ ಸಮ್ಮತಿ ದೊರೆಕಿಸಬೇಕು, ಕನ್ನಡ ಭಾಷೆಗೆ ಪ್ರೋತ್ಸಾಹ ದೊರೆಯಬೇಕು ಎಂದಿತ್ಯಾದಿಯಾಗಿ ಸೂಚಿಸಿದ್ದಕ್ಕೆ ಸರ್ ಮಿರ್ಝಾ ಅವರು ಸಹಾನುಭವತಿಪರವಾಗಿ ಉತ್ತರವಿತ್ತರೆಂದು ತಿಳಿಯುತ್ತದೆ. ಬಸವಜಯಂತ್ಯುತ್ಸವ ಕಾಲಕ್ಕೆ ಯಾದಗಿರಿಯಲ್ಲಿ ನಡೆದ ದಂಗೆಯ ಬಗ್ಗೆ ತಾವು ಯೋಗ್ಯಕ್ರಮತೆಗೆದುಕೊಳ್ಳುವದಾಗಿಯೂ ಅವರ ಆಶ್ವಾಸನ ದೊರೆಯಿತು.

ಚನ್ನಪಟ್ಟಣ ಗಲಭೆ ಸಂಬಂಧದಲ್ಲಿ ಮುಸ್ಲಿಮ ಚಕ್ಕಡಿಯವನೊಬ್ಬನ ಮೇಲೆ ಕೈಮಾಡಿದ ಆರೋಪಕ್ಕಾಗಿ ವಿಚಾರಣೆಗೆ ಗುರಿಯಾಗಿದ್ದ ಕರಿಯ ಮತ್ತು ಬೇರೆ ಮೂವರಿಗೆ ಬೆಂಗಳೂರು ವಿಶೇಷ ಜಿಲ್ಲಾ ಮ್ಯಾಜಿಸ್ಟ್ರೇಟರು ತಲಾ ೧೦೦ ರೂಪಾಯಿ ದಂಡ ತಪ್ಪಿದರೆ ೮೫ ದಿನ ಶಿಕ್ಷೆ ವಿಧಿಸಿದರು. ಅದೇ ಗಲಭೆಯ ಸಂಬಂಧದಲ್ಲಿ ಮುಳುವೈಯ್ಯ ಎಂಬವನಿಗೆ ೬ ತಿಂಗಳ ಶಿಕ್ಷೆಯಾಗಿದೆ. ಆ ಗಲಭೆಯಲ್ಲಿಯ ಮುಸ್ಲಿಂ ಬೀಡಿ ಅಂಗಡಿಯೊಂದನ್ನು ಸುಲಿದುದಕ್ಕೆ ಹೋಟೆಲಕಿಟ್ಟ ಮತ್ತಿಬ್ಬರಿಗೆ ತಲಾ ೩ ತಿಂಗಳ ಶಿಕ್ಷೆ ವಿಧಿಸಿದರು.

ನೂಲಿನ ಕಳ್ಳ ಸಾರಿಗೆಯನ್ನು ಶಂಕಿಸಿ ಮೈಸೂರು ಪತ್ರಿಕೆಯಲ್ಲಿ ಬರೆದ ಒಂದು ಲೇಖದ ಸಂಬಂಧದಲ್ಲಿ ಮೈಸೂರು ನಗರ ಸಭೆಯ ಕಾಂಗ್ರೆಸ ಸದಸ್ಯರಾದ ಶ್ರೀ. ಪಿ. ಇ. ಸಂಜಪ್ಪನವರೂ ಆ ಪತ್ರಿಕೆಯ ಸಂಪಾದಕರಾದ ಶ್ರೀ. ಟಿ. ನಾರಾಯಣರಾಯರ ಮೇಲೆ ಹೂಡಿದ ಕಟ್ಲೆಯಲ್ಲಿ ಮೈಸೂರು ವಿಶೇಷ ಪ್ರಥಮ ನ್ಯಾಯಾಧೀಶರು ಸಂಪಾದಕರನ್ನು ನಿರ್ದೋಷಿಗಳೆಂದು ಸಾರಿದರು.

ಅ. ಭಾ. ಟ್ರೇಡ ಯೂನಿಯನ್ ಕಾಂಗ್ರೆಸ್ ಅಧ್ಯಕ್ಷರೂ ಕಮ್ಯುನಿಸ್ಟ ಪಕ್ಷದ ಪ್ರಮುಖರೂ ಆದ ಎಸ್. ಎ. ಡಾಂಗೆಯವರು ತಾ. ೪ ಕ್ಕೆ ಬೆಂಗಳೂರಲ್ಲಿ ಭಾಷಣಮಾಡಿ ರಾಜಕೀಯ ಸ್ವಾತಂತ್ರ್ಯ ಮಾತ್ರ ಸಾಲದು ಅರ್ಥಿಕ ಸ್ವಾತಂತ್ರ್ಯವೂ ಅವಶ್ಯವೆಂದು ಪ್ರತಿಪಾದಿಸಿದರು.

ಚನ್ನಪಟ್ಟಣದಲ್ಲಿ ಕೆಲ ತಿಂಗಳಹಿಂದೆ ನಡೆದ
ಜಾತೀಯ ಗಲಭೆಗಳಲ್ಲಿ ಸಂಬಂಧದಲ್ಲಿ ಹಲವು
...ಬಂದುಗಳ ಮೇಲೆ ಹೂಡಿದ ಪ್ರಕರಣದ ವಿಚಾ
...ಣೆ ಬೆಂಗಳೂರಲ್ಲಿ ವಿಶೇಷ ಜಿಲ್ಲಾ ಮ್ಯಾಜಿ
...ಸ್ಟ್ರೇಟರ ಮುಂದೆ ಪ್ರಾರಂಭವಾಗಿ ಸರಕಾರ
...ಪಕ್ಷದ ಸಾಕ್ಷಿದಾರರಾದ ಪೋಲಿಸ್ ಇನಸ್ಪೆ
...ಕ್ಟರ ಹನುಮಂತರಾಯರ ಸಾಕ್ಷ್ಯವಾಯಿತು.
...ವರು ಕಾಂಗ್ರೆಸ್ ಅಧ್ಯಕ್ಷರ ಸಂಚಾರ ಮತ್ತು
...ಗಳಲ್ಲಿ ಜಾತೀಯ ದ್ವೇಷಕ್ಕೆ ಕಾರಣವಾದ

ದಕ್ಷಿಣ ಕನ್ನಡ

ಶಿಕ್ಷಕರ ಬೇಡಿಕೆಗಳನ್ನು ಜನಮನೋಚಿತ ಮಾಡುವದಕ್ಕಾಗಿ ಮದ್ರಾಸ ಅಧ್ಯಾಪಕ ಸಂಘದವರು ಸೂಚಿಸಿದಂತೆ ದಕ್ಷಿಣ ಕನ್ನಡದಲ್ಲಿಯೂ ತಾ. ೨೦ ಕ್ಕೆ ಅಲ್ಲಲ್ಲಿ ಪ್ರಾಥಮಿಕ ಶಿಕ್ಷಕ ದಿನಾಚರಣೆ ನಡೆಯಿತು. ಸಭೆ, ಭಾಷಣ ಮೊದಲಾದ ಕಾರ್ಯಕ್ರಮಗಳಿದ್ದವು.

ದಕ್ಷಿಣ ಕನ್ನಡ ಜಿಲ್ಲಾ ಅಂಚೆಯಾಳು ಮತ್ತು ಕೆಳ ನೌಕರರ ಸಂಘದ ಕಾರ್ಯಕಾರಿ ಸಭೆಯಲ್ಲಿ (ತಾ. ೨೭-೪-೪೭) ಈ ವರ್ಗಕ್ಕೆ ಸೇರುವ ಜಿಲ್ಲೆಯ ನೌಕರರೆಲ್ಲರ ಯಾದಿಯನ್ನು ತಯಾರಿಸಿ ಅವರನ್ನು ಸಂಘದ ಸದಸ್ಯರನ್ನಾಗಿ ಮಾಡಿಕೊಳ್ಳಬೇಕು, ಮಂಗಳೂರಲ್ಲಿ ಪ್ರಾಂತಿಕ ಸಮ್ಮೇಲನವನ್ನು ದಿಸೆಂಬರದೊಳಗಾಗಿ ಸೇರಿಸಬೇಕೆಂದು ಪ್ರಾಂತಿಕ ಸಂಘವನ್ನು ಕೇಳಿಕೊಳ್ಳಬೇಕೆಂದು ಮುಂತಾಗಿ ಗೊತ್ತುವಳಿಗಳಾದವು.

ಕಾಂಗ್ರೆಸ್ ಕಾರ್ಯ ಸಮಿತಿಯ ನಿಷೇಧವನ್ನು ಲೆಕ್ಕಿಸದೆ ಕಾಂಗ್ರೆಸ್ ಸಮಿತಿಗಳಲ್ಲಿ ಅಧಿಕಾರಸ್ಥಾನದಲ್ಲಿರುವ ಅನೇಕ ಕಾರ್ಯಕರ್ತರು ಶ್ರೀ ಜಯಪ್ರಕಾಶರ ಸಭೆ, ಸನ್ಮಾನ ನಿಧಿ ಸಮರ್ಪಣೆಯೇ ಮೊದಲಾದವು ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದರ ಬಗ್ಗೆ ಕಾಂಗ್ರೆಸ್ ವರ್ಗಗಳಲ್ಲಿ ಅತೃಪ್ತಿಯುಂಟಾಗಿದೆಯೆಂದು ತಿಳಿಯುತ್ತದೆ.

ಮೈಸೂರಿಗೆ ಒಂದು ಬಗೆಯ ಹೊಣೆಗಾರಸರಕಾರ

ದಿವಾಣರ ಹೇಳಿಕೆ

ಮುಂದಿನ ಮಂತ್ರಿಗಳು ಶಾಸನಸಭೆಯೊಳಗಿಂದ ಆರಿಸಿಕೊಳ್ಳಲ್ಪಡಬೇಕೆಂದು ನನ್ನ ಅಭಿಪ್ರಾಯ" ಎಂಬುದಾಗಿ ಮೈಸೂರ ದಿವಾಣರಾದ ಸರ್ ರಾಮಸ್ವಾಮಿ ಮುದಲಿಯಾರರು ಮೈಸೂರ ರಾಜಕೀಯ ಸುಧಾರಣೆಗಳಸಂಬಂಧದಲ್ಲಿ ಹೊರಡಿಸಿದ ಹೇಳಿಕೆಯೊಂದರಲ್ಲಿ ಹೇಳಿದ್ದಾರೆ. "ಈಗ ನಡೆದಿರುವ ಮಾತುಗಳ ಫಲಿತಾಂಶವಾಗಿ ಮೈಸೂರು ಸಂಸ್ಥಾನದ ಪ್ರಜೆಗಳಿಗೆ ಒಗ್ಗುವ ಒಂದು ಬಗೆಯ ಹೊಣೆಗಾರಸರಕಾರ ರೂಪಿಸಲ್ಪಡುವದೆಂದು ನನ್ನನಂಬಿಕೆ ಮಾತ್ರ. ಇದು ಶ್ರೀಮನ್ಮಹಾರಾಜರ ಸಾರ್ವಭೌಮತ್ವಕ್ಕೆ ಅಂಕಿತವಾಗಿರಬೇಕೆಂದು ಸ್ಪಷ್ಟವಿದೆ.

ಮಹಾಸ್ವಾಮಿಯವರು ತಮ್ಮ ಪ್ರಜೆಗಳಿಗೆ ಕರುಣಿಸಿದ ಸಂದೇಶ ಈಗ ಕೆಲ ಸಮಯದಿಂದ ಮೈಸೂರು ಜನರ ಮುಂದಿದೆ. ಈ ಸಂದೇಶಕ್ಕೆ ವಿವರಣೆಯಾಗಲಿ ಸ್ಪಷ್ಟೀಕರಣವಾಗಲಿ ಅವಶ್ಯವಿಲ್ಲೆಂದು ನನ್ನ ಮತ. ನಾನು ಪ್ರಭುಗಳಿಗೆ ಒಪ್ಪಿಸಬೇಕಾದ ಸೂಚನೆಗಳಲ್ಲಿ, ಈ ಧ್ಯೇಯವನ್ನು ಅಂದರೆ ಎಲ್ಲರಿಗೂ ಸಮಾನ ಸಂದರ್ಭಗಳು ಸಿಗಬೇಕು, ಶಾಂತಿ, ತುಷ್ಟಿ, ಸುರಕ್ಷಿತತೆಗಳು ಸಂಸ್ಥಾನದಲ್ಲಿ ನೆಲಸಬೇಕು. ಎಂಬವುಗಳನ್ನು ನೆನಪಿನಲ್ಲಿಟ್ಟುಕೊಳ್ಳುವದು ನನ್ನ ಕರ್ತವ್ಯವೆಂದು ಭಾವಿಸಿದ್ದೇನೆ.

ಈ ಉದ್ದೇಶವನ್ನು ಸಾಧಿಸಲು ಯಾವ ಬಗೆಯ ಸರಕಾರವನ್ನು ಭಾವಿಸಿಕೊಳ್ಳಲಾಗಿದೆಯೆಂದು ನನ್ನನ್ನು ಕೇಳುತ್ತಾರೆ. ಮುಂದಿನ ಮಂತ್ರಿಗಳನ್ನು ಶಾಸನಸಭೆಯೊಳಗಿಂದ ಆರಿಸಿಕೊಳ್ಳಬೇಕೆಂದು ನನ್ನ ಅಭಿಪ್ರಾಯ. ಶಾಸನಸಭೆಗೆ ಮಂತ್ರಿಗಳು ತೋರಿಸಬೇಕಾದ ಹೊಣೆಗಾರಿಕೆ ಮತ್ತು ಅವರ ಪ್ರಮಾಣ ಒಂದೊಂದು ಬಗೆಯಾಗಿದೆ, ರಾಜ್ಯಘಟನೆಯಲ್ಲಿ ಇರಿಸಬೇಕಾದ ವಿಧಿ, ನಿರ್ಬಂಧ ಇತಿಮಿತಿಗಳೂ ಬೇರೆ ಬೇರೆ ಕಡೆಯಲ್ಲಿ ಬೇರೆ ಬೇರಾಗಿದೆ. ಈ ಸ್ಥೂಲ ವಿಷಯಗಳನ್ನು ಅಭಿಪ್ರಾಯಗಳನ್ನು ಗಮನದಲ್ಲಿಟ್ಟುಕೊಂಡೇ ಮಾತುಕತೆ ನಡೆಸಬೇಕು. ಮತ್ತು ನನ್ನ ಅಭಿಪ್ರಾಯಗಳನ್ನು ರೂಪಗೊಳಿಸಿಕೊಳ್ಳಬೇಕೆಂದು ಆಶಿಸುತ್ತೇನೆ. ಈ ಮಾತುಕತೆಗಳಿಂದ ವಿಶಾಲ ಪ್ರಮಾಣದ ಐಕಮತ್ಯ ಸಾಧ್ಯವಾದೀತೆಂದೂ ನನ್ನ ಆಶೆ"

ಈ ಹೇಳಿಕೆಯ ಪರಿಣಾಮವಾಗಿಯೇ ಮೈಸೂರು ಕಾಂಗ್ರೆಸ್ಸು ಸತ್ಯಾಗ್ರಹದ ಸನ್ನಾಹವನ್ನು ತಡೆಹಿಡಿದಿದೆ. ಈ ವಿಷಯವನ್ನು ಪರ್ಯಾಲೋಚಿಸಲು ಅ. ಮೈ. ಕಾಂ. ಸಮಿತಿ ಅಧಿವೇಶನವನ್ನು ಕೂಡಿಸಬಹುದೆಂದು ನಂಬಲಾಗಿದೆ.

ವರ್ತನೆಗಳಿದ್ದಿಲ್ಲವೆಂದು ಹೇಳಿದಲ್ಲದೆ ತಾವು ಗಲಭೆಯಲ್ಲಿ ಗಾಯಗೊಂಡ ಒಬ್ಬನೇ ಒಬ್ಬ ಮುಸ್ಲಿಮನನ್ನು ಅಥವಾ ಹಿಂದುಗಳು ಮುಸ್ಲಿಮರನ್ನು ಹೊಡೆಯುತಿದ್ದುದನ್ನು ನೋಡಿಲ್ಲವೆಂದೂ ಅನೇಕ ಸಣ್ಣ ಓಣಿಗಳಲ್ಲಿ ಮುಸ್ಲಿಮರು ಹಿಂದುಗಳನ್ನು ಗುಂಪಾಗಿ ಅಭಿಯೋಗಿಸುತಿದ್ದರೂ ಹಿಂದುಗಳು ಪ್ರತಿಭಟಿಸುತಿದ್ದಿಲ್ಲವೆಂದೂ ತಿಳಿಸಿದರು.



ಮುಂಬಯಿ ಶೇರ ಪೇಟೆ

ತಾ ೭

ಅನೇಕ ಕಂಪನಿಗಳು ಉತ್ತಮ ಲಾಭಾಂಶ ಹಂಚಿದ್ದರಿಂದ ಕಳೆದವಾರ ಪಾಲುಗಳ ಬೆಲೆ ಉತ್ತಮ ಗೊಂಡಿತ್ತು. ಆದರೆ ಈ ವಾರದಲ್ಲಿ ರಾಜಕೀಯ ರಂಗದ ಅಕಲ್ಯಾಣ ಕಲ್ಪನೆಗಳಿಂದ ಅವು ತಿರುಗಿ ಹಿಂದೆ ಬೀಳತೊಡಗಿದವು. ಹೀಗೆ ಶುಕ್ರವಾರ ೨೨೨೫-೦.೦ ರಲ್ಲಿದ್ದ ಟಾಟಾ ಡೆಫರ್ಡ ೨೧೧೫-೦-೦ ಕ್ಕಿಳಿಯಿತು. ಆದರೆ ಕೊನೆಗೆ ಅದು ೨೧೬೦-೦-೦ಕ್ಕೇರಿತು. ಡಾಯಿಂಗ್ ೧೧೩೨-೮-೦ ಯಿಂದ ೧೦೪೭-೮-೦ ಗಿಳಿದು ೧೦೭೦-೦-೦ಕ್ಕೆ ಸುಧಾರಿಸಿದವು. ಫಿನ್ಲೆ ೩೨೦-೦-೦ ರಿಂದ ೩೦೯-೦-೦ ಕ್ಕಿಳಿದು ೩೧೪-೦-೦ಕ್ಕೂ ಸ್ವದೇಶಿ ೬೩೨-೦-೦ ರಿಂದ ೬೧೫-೦-೦ ಕ್ಕಿಳಿದು ೬೨೨—೦—೦ ಕ್ಕೂ ಗೋಕಾಕ ೩೦೬-೦-೦ ರಿಂದ ೩೦೧-೦—೦ ಕ್ಕಿಳಿದು ತಿರುಗಿ ೩೦೬-೦-೦ ಕ್ಕೂ ಕೋಹಿನೂರು ೬೬೩-೦-೦ ರಿಂದ ೬೪೯-೦-೦ ಕ್ಕೂ ಸುಧಾರಿಸಿದವು. ಟಾಟಾ ಕೆಮಿಕಲ್ ೩೫-೧೦-೦ ರಿಂದ ೩೩-೧೪-೦ ಕ್ಕಿಳಿದು ೩೪-೧೨-೦ ಕ್ಕೂ ಇಂಡಿಯನ್ ಆಯರ್ನ್ ೨೬೭-೦-೦ ರಿಂದ ೨೫೮—೦—೦ಕ್ಕಿಳಿದು ೨೬೨-೦-೦ಕ್ಕೂ ಸುಧಾರಿಸಿದವು. ಬ್ಯಾಂಕುಗಳಲ್ಲಿ ಇಂಪೀರಿಯಲ್ ಎಸ್. ಸಿ. ೨೩೧೫-೦-೦ರಿಂದ ೨೨೯೫-೦-ಕ್ಕಿಳಿದು ೨೩೨೦-೦-೦ಕ್ಕೂ ರಿಝರ್ವ ೧೧೮-೦-೦ ರ ಸುತ್ತಲೂ ಹಾಗು ಸೆಂಟ್ರಲ ೧೦೬-೦-೦ ರಿಂದ ೧೦೪-೦-೦ ಕ್ಕಿಳಿದು ೧೦೫-೦-೦ ಕ್ಕೂ ಬದಲಿಸಿದವು. ಸರಕಾರಿ ಸಾಲಪತ್ರಗಳಲ್ಲಿ ಜಿ. ಪಿ. ೧೦೧-೬-೦ ರಿಂದ ೧೦೧-೧೪-೬ ಕ್ಕೆ ಸುಧಾರಿಸಿತು.

ಚಿನ್ನ ಬೆಳ್ಳಿ

ಕಳೆದ ವರ್ಷ ಗಂಡಾಂತರ ಪರಿಸ್ಥಿತಿಯನ್ನು ಸಾರಿದ ಬುಲಿಯನ್ ಎಕ್ಸಚೇಂಜದವರ ಕೃತಿಯ ಬಗ್ಗೆ ಎದ್ದ ವಿವಾದಗಳು ಇನ್ನೂ ತೀರ್ಮಾನವಾಗದೆ ಉಳಿದು ವ್ಯಾಪಾರ ಸ್ಥಗಿತವಾಗಿದೆ. ತಯಾರಿ ಚಿನ್ನ ೧೦೭-೮-೦ ರಿಂದ ೧೦೯-೦-೦ ರ ವರೆಗೂ ಹೋಗಿ ೧೦೮-೧೨.೦ ರಲ್ಲಿದೆ. ಬೆಳ್ಳಿ ೧೭೦-೦-೦ ರಿಂದ ೧೭೩-೦-೦ ಕ್ಕೇರಿದರೂ ೧೬೬-೮-೦ ಗೆ ಬಂದು ೧೬೯-೮-೦ ಗೇರಿದೆ ವಾಯದಾ ವ್ಯಾಪಾರವಿಲ್ಲ.

ಅರಳೆ

ಅರಳೆ ಪೇಟೆಯಲ್ಲಿ ಏನೇನೂ ಅಸ್ಥೆಯಿಲ್ಲ. ಬೆಲೆ ನೆಲಮಟ್ಟದಿಂದ ಹೇಳಿಕೊಳ್ಳುವಷ್ಟು ಮೇಲೇಳುವದಿಲ್ಲ. ಜುಲೈ ೪೩೨-೧೨.೦ ರಿಂದ ೪೩೧-೮-೦ ಗಿಳಿದು ೪೩೩-೧೨-೦ಕ್ಕೇರಿತು. ಸಪ್ಟೆಂಬರ ೪೪೧—೮—೦ ಯಲ್ಲಿ ಕೊನೆಗೊಂಡವು.

ಎಣ್ಣೆಕಾಳು

ಶೇಂಗಾ	೧೫೫-೦-೦
ಅಗಸಿ	೨೬-೬-೦
ಅಗಸಿ ಎಣ್ಣೆ	೧೮-೧೨-೦

ಶಿವಮೊಗ್ಗೆ

ಅಡಿಕೆ ದೇಶಾವರ ನಂ ೧ ಮಣ ೧ಕ್ಕೆ	೫೦-೫೩
,, ,, ೨	೪೮-೪೮
ಚಿಟ್ಟೆ ವಂತಿ	೩೩-೩೪
ಬೆಟ್ಟೆ	೨೮-೩೦
ಕೋರಸಾಲು	೪೪-೪೫
ರಾಜಾಅಲವು	೪೫-೪೮
ನುಲಿ	೪೫-೪೮

ಸಾಂಗಲಿ ಪೇಟೆ

ಅರಿಷಣ ಹೇರು	೯೭-೧೦೨
ಮೆಣಸಿನಕಾಯಿ ಹೇರು ,,	೭೫ ೧೨೫
ಶೇಂಗಾ ಖಂಡಿ	೧೧೨

ಹುಬ್ಬಳ್ಳಿ ಪೇಟೆ

ಹೊಸ ಜಯವಂತ ಹತ್ತಿ ನಂ. ೧	೨೬೦
,, ನಂ. ೨	೨೩೦-೨೪೫
,, ನಂ. ೩	೨೦೦-೨೨೫
ಹಳೆ ,,	೨೬೫-೨೭೫
ಅಪ್ಲಂಡ ಹತ್ತಿ	೨೬೫-೨೭೦
ಹೊಸಜಿನ	೧೭೦-೧೭೫
ಹಳೆ ಜಿನ	೧೮೦-೧೮೨
ಡಬಲರೋಲ	೧೬೦-೧೬೫

ಹೈದ್ರಾಬಾದ ಹಾಗು ಸಿಕಂದರಬಾದಗಳಲ್ಲಿ ಬೆಲ್ಲವನ್ನು ಸೀದಾ ಪದ್ಧತಿಯಿಂದ ಕೊಡಲಾಗುವದು. ಆಡು ಕುರಿಗಳನ್ನು ಅಪ್ಪಣೆಯಿಲ್ಲದೆ ಸಂಸ್ಥಾನದಿಂದ ಹೊರಗೆ ಕಳಿಸಕೂಡದೆಂದೂ ಕಳಿಸಿದವರಿಗೆ ಶಿಕ್ಷೆ ವಿಧಿಸಲಾಗುವದೆಂದೂ ಸರಕಾರದ ಪ್ರಕಟನೆ ಹೊರಟಿದೆ.


ದಾವಣಗೆರೆ ತಾಲೂಕಿನ ಮಳಲ್ಕೆರೆ ಗ್ರಾಮದಲ್ಲಿ ಮನೆ ಸುಟ್ಟುಕೊಂಡು ನಿರಾಶ್ರಿತರಾದವರಿಗೆ ಕಾಂಗ್ರೆಸ್ ಸಮಿತಿ ಅಧ್ಯಕ್ಷರು ೨೬೫ ರೂ. ನಿಧಿ ಕೂಡಿಸಿ ಪ್ರತಿಕುಟುಂಬಕ್ಕೂ ೧೫ದಿನದ ಸೀದಾ, ಸೀರೆ, ಪಂಚೆ, ಅಂಗಿ ಮೊದಲಾದವುಗಳನ್ನು ಖರೀದಿ ಮಾಡಿಕೊಟ್ಟರು. ಕುಡಿಯುವ ನೀರಿನ ಭಾವಿಯುಳ್ಳ ನಾಲ್ಕು ಎಕರೆ ಉತ್ತಮ ವಿಶಾಲ ಭೂಮಿಯನ್ನಾರಿಸಿ ಮನೆಗಳನ್ನು ಕಟ್ಟಿಕೊಳ್ಳಲು ಏರ್ಪಾಡು ಮಾಡಿರುವರು ಈ ಜನರಿಗೆ ಸಹಾಯ ಮಾಡಲು ಅಮಲ್ದಾರರೂ ಕ್ಷಾಮ ನಿವಾರಣಾ ಸಂಘದವರೂ ಮುಂದೆ ಬಂದಿದ್ದಾರೆ.

SALES TAX

Important Notice (Carrection)

In the above Notice published in Karmveer dated 5-5-1947 on 10 th Page read the first para correcting the figure "Rs 100,000" occuring in the 4th line as "10,000"

ಲಲಿತಾ ಮತ್ತು ಪದ್ಮಿನಿ



ಮದ್ರಾಸಿನಲ್ಲಿ ಜರಗಿದ ಅ. ಭಾ. ಸಂಪಾದಕ ಸಮ್ಮೇಲನದಲ್ಲಿ ಅಪೂರ್ವ ಭಾರತೀಯ ನೃತ್ಯಗಳನ್ನು ಪ್ರದರ್ಶಿಸಿ ಸಂಪಾದಕರ ಪ್ರಶಂಸೆಗೆ ಪಾತ್ರರಾದರು. ಇವರು ತಿರ್ವಾಂಕೂರಿನ ಪ್ರಸಿದ್ಧ ಮನೆತನದವರು.

ಸ್ತ್ರೀ ಶಕ್ತಿಯನ್ನು ಕೆಲಸಕ್ಕೆ ಹಚ್ಚುವದೇ ಕರ್ತವ್ಯ

ಕನ್ನಡ ನಾರಿಯರು ಕರ್ನಾಟಕದ ನಿರ್ಮಾಣಕ್ಕಾಗಿ ಹೆಣಗಬೇಕು

ಸ್ತ್ರೀಗೋಷ್ಠಿಯ ಅಧ್ಯಕ್ಷಣಿಯರ ಭಾಷಣ



ಅಧ್ಯಕ್ಷಣಿ ಪಾರ್ವತಿಬಾಯಿ

ಹರಪನಹಳ್ಳಿಯಲ್ಲಿ ಮೇ ೪ಕ್ಕೆ ಕೂಡಿದ ಸ್ತ್ರೀಗೋಷ್ಠಿಯ ಅಧ್ಯಕ್ಷಣಿಯರಾದ ಶ್ರೀ ಪಾರ್ವತಿದೇವಿ ಕೇಸರಿಯವರು ಈ ಆಶಯದ ಭಾಷಣ ಮಾಡಿದರು.

ತಮನ್ನು ಅಧ್ಯಕ್ಷರನ್ನಾರಿಸಿದ್ದಕ್ಕಾಗಿ ಧನ್ಯವಾದಗಳನ್ನರ್ಪಿಸುತ್ತ ಹೀಗೆ ಹೇಳಿದರು.

ನಮ್ಮ ಕಾಲವು ಬಹು ಮಹತ್ವದ ಕಾಲವು. ನಮ್ಮ ಪ್ರಿಯ ಭಾರತ ಮಾತೆಯು ತನ್ನ ಶೃಂಖಲೆಗಳನ್ನು ಕಡಿದೊಗೆದು ಪೃಥ್ವಿಯ ಮೇಲಿನ ರಾಷ್ಟ್ರಗಳ ಸ್ವಾಭಾವಿಕವಾದ ಧುರೀಣತೆಯನ್ನು ವಹಿಸಿಕೊಳ್ಳಲಿಕ್ಕೆ ಮುಂದೆ ಬಂದ ಕಾಲವಿದು. ಮಾನವನ ಆಕಾಂಕ್ಷೆಗಳು ಈ ವರೆಗೆ ಕನಸುಗಳಾಗಿದ್ದವು. ಇನ್ನು ನನಸಾಗುವ ಕಾಲವು ನಮ್ಮ ಬಾಗಿಲಿಗೆ ಬಂದು ನಿಂತು ನಮ್ಮನ್ನು ಎಚ್ಚರಗೊಳಿಸುತ್ತಿದೆ. ಇಂತಹ ಭಾರತ ಮಾತೆಯ ಪುತ್ರಿಯರಾದ ನಾವಾದರೂ ನಮ್ಮ ಶೃಂಖಲೆಗಳನ್ನು ಕಡಿದೊಗೆಯುವ ಕಾಲವಲ್ಲವೇ ಇದು! ಇಂಥ ಶೃಂಖಲೆಗಳನ್ನು ಕಡಿದೊಗೆಯುವ ಶಕ್ತಿಯು ಯಾವ ಆಯುಧದಲ್ಲಿದೆ? ಇಂಥ ಶಕ್ತಿಯು ಸಾಹಿತ್ಯದಲ್ಲಲ್ಲದೆ ಬೇರೆಡೆಯಲ್ಲಿಲ್ಲ. ಸಾಹಿತ್ಯದಲ್ಲಿ ಅ್ಯಟಂ ಬಾಂಬಿಗಿಂತ ಮಿಗಿಲಾದ ಶಕ್ತಿಯಿದೆಯೆಂದರೆ ಅತಿಶಯೋಕ್ತಿಯಾಗಲಾರದು. ಆದ್ದರಿಂದಲೇ ಕತ್ತಿಗಿಂತ ಮಿಗಿಲಾದ ಶಕ್ತಿ ಲೆಕ್ಕಣಿಕೆಯಲ್ಲಿದೆ. ಕತ್ತಿಯನ್ನು ಕೆಲಸಕ್ಕೆ ಹಚ್ಚುವ ಶಕ್ತಿ ಲೆಕ್ಕಣಿಕೆಯಲ್ಲಿದೆ. ಇದೇ ಲೇಖನಿಯೇ ಫ್ರಾನ್ಸ ಮತ್ತು ಅಮೇರಿಕೆಯಲ್ಲಿಯ ಕ್ರಾಂತಿಯನ್ನೆಬ್ಬಿಸಿ ಜನತಾ ರಾಜ್ಯವನ್ನು ಸ್ಥಾಪಿಸಿತು! ಅಂದ ಮೇಲೆ ಇಂಥ ಪವಿತ್ರ ಶಕ್ತಿಯಿಂದಲೇ ನಾವಾದರೂ ಪಾರಾಗಬೇಕಾಗಿದೆ.

ಸಹೋದರಿಯರೇ, ಸಮಾಜದಲ್ಲಿ ಸ್ತ್ರೀಯರ ಅಂಗವೇನಿದೆ ಎಂಬುದನ್ನು ಸ್ವಲ್ಪದರಲ್ಲಿ ವಿಚಾರಿಸೋಣ. ಪ್ರಪಂಚದ ಚರಿತ್ರೆಯಲ್ಲಿ ಮಹಿಳೆ ಪವಿತ್ರ ಸ್ಥಾನವನ್ನು ಪಡೆದಿದ್ದಾರೆ ಎಂದರೆ "ಯಾವಳ ಕೈಯಲ್ಲಿ ತೊಟ್ಟಿಲ ಸೂತ್ರವಿದೆಯೋ ಅವಳ ಕೈಯಲ್ಲಿಯೇ ರಾಜ್ಯಸೂತ್ರವಿದೆ" ಎಂದು ಹೇಳುವ ನಾಣ್ಣುಡಿಯೊಂದರಿಂದಲೇ ಸ್ತ್ರೀಯರ ಪ್ರಮುಖ ಸ್ಥಾನಗಳು ವಿಶದವಾಗುವದು. ನಮ್ಮ ಮುಂದಿನ ಸಂತತಿಯ ಪುರೋಭಿವೃದ್ಧಿಗೂ ಪ್ರಾಬಲ್ಯಕ್ಕೂ ನಾವೇ ಮೂಲ ಕಾರಣರೆಂದು ಬೇರೆ ಹೇಳುವ ಅವಶ್ಯಕತೆಯೇ ಇಲ್ಲ. ಇಂದಿನ ಶಿಶುವು ಭಾವೀ ರಾಷ್ಟ್ರದ ನಾಗರಿಕ. ಭಾವೀ ರಾಷ್ಟ್ರದ ಏಳಿಗೆಯು ಇಂಥ ಶಿಶುಗಳನ್ನೇ ಅವಲಂಬಿಸಿದೆ. ಅಂದಮೇಲೆ ರಾಷ್ಟ್ರೋನ್ನತಿಗೆ ಇಂದಿನ ಪೀಳಿಗೆಯ ಅಭಿವೃದ್ಧಿಯೇ ತಳಹದಿ. ಇಂತಹ ರಾಷ್ಟ್ರೋನ್ನತಿಗೆ ಕಾರಣರಾದ ಮಹಿಳೆಯರ ಶೀಲಸ್ವಭಾವಗಳು ಯಾವ ರೀತಿಯಲ್ಲಿರುವವೋ ಅದರಂತೆ ಮುಂದಿನ ಪೀಳಿಗೆಯು ಆಗಿರುವದೆಂಬುದು ಸರ್ವಶ್ರುತವಾಗಿದೆ. ಆದ್ದರಿಂದ ಪ್ರಪಂಚದ ಜ್ಞಾನವೇ ಇಲ್ಲದೇ ಇದ್ದ ತಾಯಿಯವರಿಂದ ಪುರೋಭಿವೃದ್ಧಿಯು ಹೇಗಾದೀತು? ಮುಂದಿನ ಪೀಳಿಗೆಯ ಅಭಿವೃದ್ಧಿಗೆ ಕಾರಣರಾದ ಮಾತೆಯರು ವಿದ್ಯಾವಿನಯ ಸಂಪನ್ನೆಯರಾಗಿ ವೀರಮಾತೆಯರಾಗಿ ಮೆರೆಯಬೇಕು. ಪಾಶ್ಚಿಮಾತ್ಯರಲ್ಲಿ ಸ್ತ್ರೀಯರಿಗಿರುವ ಮರ್ಯಾದೆಯನ್ನು ಕೇಳಿದರೆ ಆಶ್ಚರ್ಯವಾಗದಿರದು. ಯಾವ ಸಭೆ ಸಮಾರಂಭಗಳಲ್ಲಿಯೂ ಸ್ತ್ರೀಯರಿಗೇ ಮೊದಲು ಸಂಬೋಧನೆ. ಇದನ್ನು ನಮ್ಮ ಈಗಿನ ರೂಢಿಯೊಡನೆ ಹೋಲಿಸಿ ನೋಡಿದರೆ ಅದು ವ್ಯತಿರಿಕ್ತವಾಗಿದೆ. ಆದರೆ ಬಹು ಹಿಂದಿನ ನಮ್ಮ ರೂಢಿಯಾದರೂ ಪಾಶ್ಚಿಮಾತ್ಯರಿಗೆ ಹೋಲುತ್ತಿತ್ತು. ದೇವರ ಹೆಸರನ್ನು ಹೇಳುವಾಗಲು ಸಹಿತ ಮೊದಲು ದೇವಿಯ ಹೆಸರನ್ನೇ ಮೊದಲು ಹೇಳುವರು.

ಸ್ತ್ರೀಯರಿಗೆ ಪುರುಷರಿಗಿಂತಲೂ ಶ್ರೇಷ್ಠತೆಯೂ ಬೇಕೆಂದಾಗಲಿ ಅಥವಾ ಪುರುಷರ ಮೇಲೆ ಅಧಿಕಾರಿಣಿಯರಾಗಬೇಕೆಂದಾಗಲಿ ನನ್ನ ಅಭಿಪ್ರಾಯವಿಲ್ಲ. ಆದರೆ ಸ್ತ್ರೀಯರು ದಾಸ್ಯವನ್ನು ಕಡಿದೊಗೆದು ವಿದ್ಯಾವತಿಯರಾಗಿ ಅರ್ಧಾಂಗಿಯರಾಗಿ, ವೀರ ಮಾತೆಯರಾಗಿ ಭಾರತ ಮಾತೆಯ ಅಕ್ಕರೆಯ ಪುತ್ರಿಯರಾಗಿ ಮೆರೆಯಬೇಕು. ಸ್ತ್ರೀಯೆಂದರೆ ಅಬಲೆಯೆಂದು, ಅವರನ್ನು ದಾಸ್ಯದಲ್ಲಿ ನೂಕಿ ಅಜ್ಞಾನಾಂಧಃಕಾರದಲ್ಲಿ ಮುಳುಗಿಸಿ ವಿದ್ಯಾವಿಹೀನರಾದ ಪಶುಗಳನ್ನಾಗಿ ಮಾಡದೆ ಅವರನ್ನು ದೇಶಾಭಿವೃದ್ಧಿಯ ಅನೇಕ ಕಾರ್ಯಗಳಿಗೆ ಸಹಾಯಕರಾಗುವಂತೆ ಸೌಲಭ್ಯ ಕೊಡಬೇಕಾಗಿ ಪ್ರಾರ್ಥನೆ.

ಕನ್ನಡತಿಯರೇ, ಜ್ಞಾನಾಭಿವೃದ್ಧಿಗೆ ಕಾರಣವಾದ ವಿದ್ಯೆಯು ಪುರುಷರಿಗೆ ಹೇಗೋ ಹಾಗೆ ಸ್ತ್ರೀಯರಾದ ನಮಗೂ ಪರಮ ಪ್ರಯೋಜನಕಾರಿಯಾದುದೆಂಬುದರಲ್ಲಿ ಸಂದೇಹವಿಲ್ಲ. ಇಂಥ ಜ್ಞಾನ ನೇತ್ರಕ್ಕೆ ಸಹಕಾರಿಯಾದ ವಿದ್ಯೆಯೇ ಸಾಹಿತ್ಯದ ತಾಯಿಯು. ತಾಯಿಯಿಲ್ಲದೆ ಮಗುವು ಹೇಗೆ ಹುಟ್ಟುವದಿಲ್ಲವೋ ಹಾಗೆ ವಿದ್ಯೆ ಇಲ್ಲದೆ ಸಾಹಿತ್ಯವಿಲ್ಲವೆಂಬುದನ್ನು ಬೇರೆ ಹೇಳಬೇಕಾಗಿಲ್ಲ. ಸಾಹಿತ್ಯವೆಂಬುದು ಕೇವಲ ಪಂಡಿತ ವರ್ಗಕ್ಕೆ ಮೀಸಲಾಗಿಟ್ಟಿಲ್ಲ. ಇದು ಸಮಸ್ತ ವರ್ಗಗಳ ಅನುದಿನದ ಜೀವನಕ್ಕೂ ಸಂಬಂಧಿಸಬೇಕು. ಈ ಸಮ್ಮೇಲನದ ಧ್ಯೇಯವಾದ ಸಾಹಿತ್ಯದ ಬಗ್ಗೆ ಕೆಲವು ಮಾತುಗಳನ್ನಾಡುವದು ನನ್ನ ಆದ್ಯ ಕರ್ತವ್ಯವಾಗಿದೆ. ಸಾಹಿತ್ಯವೇ ಜನಜೀವಾಳ. ಸಾಹಿತ್ಯವು ಜನಜೀವನದ ಪಡಿನೆಳಲು, ಪ್ರತಿಬಿಂಬ. ಸಾಹಿತ್ಯ ಮತ್ತು ಜೀವನ ಸಮರಸವಾಗಿವೆ. ಅವುಗಳನ್ನು ಬೇರ್ಪಡಿಸುವದು ಮನುಷ್ಯ ಮಾತ್ರನಿಗೆ ಸಾಧ್ಯವಿಲ್ಲ. ಸಾಹಿತ್ಯದಿಂದಲೇ ಸ್ತ್ರೀ-ಪುರುಷರನ್ನು ದೇವದೇವತೆಗಳನ್ನಾಗಿ ಮಾಡಬೇಕು. ಸಾಹಿತ್ಯರಂಗದಲ್ಲಿ ನಮ್ಮ ಕನ್ನಡತಿಯರು ತಮ್ಮ ಕರ್ತವ್ಯಗಳನ್ನು ತಿಳಿಯಬೇಕಾಗಿದೆ. ನಮ್ಮ ಹಿಂದಿನ ಸಾಹಿತ್ಯವನ್ನು ತೆಗೆದು ನೋಡಿದರೆ ನಮ್ಮ ಆರ್ಯ ಮಹಿಳೆಯರು ಎಷ್ಟು ಉನ್ನತ ಶಿಖರಕ್ಕೆ ಮುಟ್ಟಿದ್ದರೆಂಬುದು ತಿಳಿಯುತ್ತದೆ. ಈ ಸಾಹಿತ್ಯ ಈಗ ಹೊಸದಾಗಿ ಹುಟ್ಟಿಬಂದದ್ದಲ್ಲದೆಂಬುದಕ್ಕೆ ನಮ್ಮ ಆರ್ಯ ಮಹಿಳೆಯರ ಸಚ್ಚರಿತ್ರೆಗಳೇ ನಿದರ್ಶನಗಳಾಗಿವೆ. ಆ ಮಹಿಳೆಯರು ಜೀವನದ ಪ್ರತಿಯೊಂದು ರಂಗದಲ್ಲಿಯೂ ತಮ್ಮ ಪಾತ್ರವನ್ನು ವಹಿಸುತ್ತಿದ್ದರು. ಅರಸುತನದಲ್ಲಿ ಕೆಳದಿ ಚೆನ್ನಮ್ಮ, ಮೈಲಾಲದೇವಿ, ಪರಾಕ್ರಮದಲ್ಲಿ ಕಿತ್ತೂರ ಚೆನ್ನಮ್ಮ ಮತ್ತು ಓಬವ್ವ, ಶಿಲ್ಪಕಲೆಯಲ್ಲಿ ಲೋಕಮಹಾದೇವಿ, ಸಂಗೀತಕಲೆಯಲ್ಲಿ ಸಾವಲದೇವಿ ಕೀರ್ತಿಯನ್ನು ಪಡೆದಿದ್ದರು. ಕಂತಿದೇವಿ, ಹೊನ್ನಮ್ಮ ಮುಂತಾದವರು ಪಾಂಡಿತ್ಯದಲ್ಲಿ, ಮೀಸಲಾಗಿದ್ದರೆ ದೇಕಬ್ಬೆ, ಸುಗ್ಗಲದೇವಿ, ಪಾತಿವ್ರತ್ಯದಲ್ಲಿಯೂ, ಹೆಳವನಕಟ್ಟೆ ಗಿರಿಯಮ್ಮ, ಮಹಾದೇವಿಯಕ್ಕ ವೈರಾಗ್ಯದಲ್ಲಿ ಹೆಚ್ಚಳವನ್ನು ಪಡೆದಿದ್ದರು.

ಈ ಮೇರೆಗೆ ಪ್ರತಿಯೊಂದು ವಿಷಯದಲ್ಲಿಯೂ ಕನ್ನಡ ಮಹಿಳೆಯರು ಹಿಂದೆ ತುಳಿದಿರುವ ಹಾದಿಯು ಆದರ್ಶವೂ ಅನುಪಮವೂ ಆಗಿದೆಯೆಂದು ಯಾರು ತಾನೆ ಹೇಳಲಾರರು? ಇಂತಹ ಮಹಿಳೆಯರ ರಕ್ತವು ನಮ್ಮ ರಕ್ತನಾಳಗಳಲ್ಲಿ ಹರಿಯುತ್ತದೆ. ಆದರೆ ಆ ಶಕ್ತಿಯ ಅರಿವು ನಮಗೆ ಇಲ್ಲದಂತಾಗಿದೆ. ನಮ್ಮಲ್ಲಿರುವ ಶಕ್ತಿಯು ಬಹು ದೊಡ್ಡದು. ಆದರೆ ಅರಿವು ಇಲ್ಲಿಯವರೆಗೆ ನಮಗೆ ಇರಲಿಲ್ಲ. ಈಗ ಅರಿವಾಗಹತ್ತಿದೆ. ನಮ್ಮಲ್ಲಿರುವ ಶಕ್ತಿಯನ್ನು ಕೆಲಸಕ್ಕೆ ಹಚ್ಚಬೇಕಾಗಿದೆ.

ಎಷ್ಟೋ ವರ್ಷಗಳಿಂದ ತೊಂದರೆಗಳಿಂದ ಕೊಳಲಾಡುತ್ತಿದ್ದ ದಕ್ಷಿಣ ಆಫ್ರಿಕೆಯ ಹಿಂದೀಯರ ಪ್ರಶ್ನೆಯನ್ನು ಶ್ರೀಮತಿ ವಿಜಯಲಕ್ಷ್ಮಿ ಪಂಡಿತರವರು ತಮ್ಮ ವಾಗ್ಝರಿಯಿಂದ ಪ್ರಪಂಚವನ್ನೇ ದಂಗುಬಡಿಸಿ ಸುಗಮವಾಗಿ ಬಿಡಿಸಿಕೊಂಡು ಬಂದು ಕೀರ್ತಿಯುತರಾಗಿದ್ದರೆ. ಏಶಿಯಾಖಂಡದ ರಾಷ್ಟ್ರಗಳ ಪರಿಷತ್ತಿನ ಧುರೀಣತ್ವನನ್ನು ವಹಿಸಿ ಹಿಂದುಸ್ಥಾನದ ಕವಿಕೋಕಿಲ ಕೆನ್ನಿಸಿದ ಶ್ರೀಮತಿ ಸರೋಜಿನಿದೇವಿ ನಾಯಡು ಅವರು ಪಾರುಗಾಣಿಸಿದ್ದಾರೆ. ಶ್ರೀಮತಿ ಕಮಲಾದೇವಿಯವರಾದರೂ ತಮ್ಮ ವಾಕ್ಪಾಂಡಿತ್ಯದಿಂದ ಅಮೇರಿಕೆಯ ಜನರನ್ನು ಆಶ್ಚರ್ಯಾನ್ವಿತರನ್ನಾಗಿ ಮಾಡಿದ್ದಾರೆ. ಮತ್ತು ಹೆಸರಿನಿಂದ ಅಬಲೆಯೆನಿಸಿದರೂ ಸಬಲರಿಗಿಂತ ಸಬಲೆಯಾಗಿ ಎಷ್ಟೋ ಕಷ್ಟಗಳನ್ನು ಸಹಿಸಿ ಯುದ್ಧಕಾಲದಲ್ಲಿ ಬ್ರಹ್ಮದೇಶದ ಯುದ್ಧರಂಗದಲ್ಲಿ ಕಾದಾಡಿ ಹೆಸರಾದ ಕ್ಯಾಪ್ಟನ್ ಲಕ್ಷ್ಮೀಯವರ ಹೆಸರು ಸುವರ್ಣಾಕ್ಷರಗಳಿಂದ ಕೆತ್ತಲ್ಪಡುವಂಥದ್ದಾಗಿದೆ. ಇಂಥ ಭಾರತ ಮಹಿಳೆಯರಿಂದೊಡಗೂಡಿದ ನಮ್ಮ ದೇಶವು ಇಡೀ ಪ್ರಪಂಚವನ್ನೇ ತಲ್ಲಣಿಸಿದೆ. ಇದೇ ಪರಂಪರೆಯನ್ನು ಅನುಸರಿಸಿ ನಮ್ಮ ಕರ್ನಾಟಕದ ಸ್ತ್ರೀಯರಾದರೂ ಕೆಲಸ ಮಾಡಿದ್ದಾರೆಂದು ತೋರಿಸುವ ಮಾಸ್ತಿ ಕಲ್ಲುಗಳು ಈಗಲೂ ನಮ್ಮ ಕರ್ನಾಟಕದಲ್ಲಿ ಸಿಕ್ಕುತ್ತವೆ.

ಹಿಂದುಸ್ಥಾನದಲ್ಲಿ ಕರ್ನಾಟಕವು ಮುಖ್ಯ ಭಾಗವಾಗಿದೆ. ಕರ್ನಾಟಕಕ್ಕೆ ಪೂರ್ವ ಪರಂಪರೆ ಇದೆ. ಇತಿಹಾಸವಿದೆ, ಸಾಮ್ರಾಜ್ಯವಿದೆ, ಫಲವತ್ತಾದ ಭೂ ಪ್ರದೇಶವಿದೆ. ಪ್ರತಿಯೊಂದು ಕೆಲಸಕ್ಕೂ ಸಹಾಯಕ್ಕೆ ಬೇಕಾದ ಜನಸಮುದಾಯವಿದೆ. ಕರ್ನಾಟಕವನ್ನು ಸ್ವರ್ಗವನ್ನಾಗಿ ಮಾಡುವ ಸರ್ವ ಸಾಧನಗಳಿವೆ. ಆದರೆ ಇಷ್ಟೆಲ್ಲ ಇದ್ದ ನಮ್ಮ ಕರ್ನಾಟಕವು ಹರಿದು ಹಂಚಿ ಹೋಗಿದೆಯೆಂದು ಹೇಳಲು ವಿಷಾದವಾಗುತ್ತದೆ. ಇದನ್ನು ಒಂದುಗೂಡಿಸಿ, ಪರಿಸ್ಥಿತಿಯನ್ನು ಸುಗಮವಾಗಿ ಮಾಡಲು ನಮ್ಮ ಕರ್ನಾಟಕ ಬಾಂಧವರು ಅವಿಶ್ರಾಂತ ಶ್ರಮ ವಹಿಸುತ್ತಿರುವದು ಅಭಿನಂದನೀಯವಾದದ್ದು. ಇಂತಹ ಮಹತ್ಕಾರ್ಯಗಳಿಗೆ ನಾವಾದರೂ ನಮ್ಮ ಕೈಲಾದಮಟ್ಟಿಗೆ ಸಹಾಯ ಮಾಡಲು ಮುನ್ನುಗ್ಗಬೇಕಾಗಿದೆ.

ನನ್ನ ನಚ್ಚಿನ ಅಕ್ಕ-ತಂಗಿಯರೇ. ಇನ್ನೊಂದು ಮಾತನ್ನು ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ. ಸಾಹಿತ್ಯದ ಮಹಾತ್ಮೆಯ ವಿಚಾರವನ್ನು ಇನ್ನೊಮ್ಮೆ ಹೇಳುವ ಅವಶ್ಯಕತೆ ಉಳಿದಿಲ್ಲ. ಈಗ ಕಾರ್ಯತಃ ಆಚರಿಸುವ ಕಾಲವೊದಗಿದೆ. ಶಿಕ್ಷಣಕ್ಕೆ ಗಮನ ಕೊಡಬೇಕೆಂದು ಹೇಳಿದ ಮಾತ್ರಕ್ಕೆ ಕೇವಲ ಅಕ್ಷರಾಭ್ಯಾಸದ ಶಿಕ್ಷಣಕ್ಕಷ್ಟೇ ಅಲ್ಲ. ಅಷ್ಟೇ ಕಲಾಶಿಕ್ಷಣಕ್ಕೂ ಔದ್ಯೋಗಿಕ ಶಿಕ್ಷಣಕ್ಕೂ ಮಹತ್ವಕೊಡಬೇಕು. ಅಂದರೇನೆ ನಮ್ಮ ಸಾಂಪತ್ತಿಕ ಸ್ಥಿತಿಯು ಸುಧಾರಿಸಿ ಉತ್ತಮ ಶಿಕ್ಷಣವನ್ನು ಹೊಂದಲು ಬಲವು ಬರುವದು. ಕಲಾವೃತ್ತಿಯು ಪ್ರತಿಯೊಬ್ಬ ಮಹಿಳೆಗೂ ನಿಜವಾಗಿ ಬಂದಿರುವದು. ಸಂಗೀತ, ನೃತ್ಯಾದಿಕಲೆಗಳು ಸ್ತ್ರೀಯರಿಗೆ ಬಹು ಬೇಗನೆ ಹಸ್ತಗತವಾಗುವವು. ಔದ್ಯೋಗಿಕ ಶಿಕ್ಷಣದ ಮಹತಿಯನ್ನು ಎಷ್ಟು ಬಣ್ಣಿಸಿದರೂ ಕಡಿಮೆಯೇ. ಇದು ಬಡವರ ಕಾಮಧೇನು. ಇಂದಿನ ಕಠಿಣ ಕಾಲದಲ್ಲಿ ಕುಟುಂಬದವರೆಲ್ಲರೂ ಹಗಲಿರುಳು ದುಡಿದರೂ ಎಷ್ಟೋ ಸಾರೆ ಉಪವಾಸ ಬೀಳುತ್ತಿರುವದು ವಿಷಾದದ ಸಂಗತಿಯು. ಈ ವಿಷಮ ಪ್ರಸಂಗವನ್ನು ದೂರೀಕರಿಸಲಿಕ್ಕೆ ಔದ್ಯೋಗಿಕ ಶಿಕ್ಷಣದಂತಹ ಸುಲಭ ಸಾಧನವೂ ಮಹಾಮಂತ್ರವೂ ಬೇರೊಂದಿಲ್ಲ. ಇದರಿಂದ ಸ್ತ್ರೀಯರಿಗೆ ಹೆಣಿಕೆ, ಹೊಲಿಗೆ, ಕೋಟೆಬಟ್ಟೆ ಇನ್ನಿತರ ಎಷ್ಟೋ ಕೈಗಾರಿಕೆಗಳು ಅವಶ್ಯವಾಗಿ ಬರಲೇಬೇಕು. ಸ್ತ್ರೀಯರು ಡಾಕ್ಟರರಾಗಲು ಮತ್ತು ಉಪಾಧ್ಯಾಯಿನಿಯರಾಗಲು ಬಹು ಯೋಗ್ಯರು. ಸ್ತ್ರೀಯರು ಬಹು ಸಹನಶೀಲರಾದ್ದರಿಂದ ಮಕ್ಕಳಿಗೆ ಶಿಕ್ಷಣವನ್ನು ಕೊಟ್ಟು ಮತ್ತು ರೋಗಿಗಳ ಸೇವೆಯನ್ನು ಮಾಡಿ ಉತ್ತಮ ಫಲಕಾರಿಯಾಗುವರು. ನಮ್ಮ ಕರ್ನಾಟಕದಲ್ಲಿ ಅದರಲ್ಲಿಯೂ ಸ್ತ್ರೀಯರು ನಿರಕ್ಷರಿಗಳು ಬಹಳ. ನಮ್ಮ ಕರ್ನಾಟಕದ ಯಾವದೇ ತರದ ಉನ್ನತಿಯಾಗಬೇಕಾದರೆ, ಜನರಲ್ಲಿ ಜಾಗ್ರತಿಯಾಗಬೇಕು ಈ ಜನಜಾಗ್ರತಿಯು ಶಿಕ್ಷಣದ ವಿನಾ ಅಸಾಧ್ಯವು.

ಆದ್ದರಿಂದ ನಾವು ಸಾಕ್ಷರತಾ ಪ್ರಸಾರವನ್ನು ಕೈಕೊಂಡು ನಮ್ಮ ಬಂಧು-ಭಗಿನಿಯರನ್ನು ಉನ್ನತದಿಸೆಗೆ ಮುಟ್ಟಿಸುವದು ನಮ್ಮ ಪ್ರಥಮ ಕರ್ತವ್ಯವಾಗಿದೆ. ಆದ್ದರಿಂದ ನನ್ನ ಭಗಿನಿಯರು ಆದಷ್ಟು ಮುಂದೆ ಸಾಹಿತ್ಯ ರಂಗದಲ್ಲಿ ಕಾಲಿಟ್ಟು ಕರ್ನಾಟಕ ಏಕೀಕರಣಕ್ಕೂ ಕರ್ನಾಟಕ ವಿಶ್ವವಿದ್ಯಾಲಯಕ್ಕೂ ಸಹಾಯಕರಾಗಬೇಕು. ಕರ್ನಾಟಕ ಮಾತೆಯರಾದ ನಾವು ಭಾರತದ ಸ್ವತಂತ್ರ ರಾಜ್ಯಸ್ಥಾಪಕರಾಗಿ ಲೋಕಾಭಿರಾಮರಾಗಿ ಮೆರೆಯುತ್ತಿರುವ ಪಂ. ನೆಹರು ಮತ್ತು ಅಬುಲ್ ಕಲಂ ಅಝಾದ್ ಮ. ಗಾಂಧಿಯಂಥ ಪುತ್ರರತ್ನಗಳಿಗೂ ಸ್ತ್ರೀಯರ ಕಷ್ಟಸುಖಗಳನ್ನರಿತು ಕಾಯಿದೆ ಮಂಡಲದಲ್ಲಿ ಹೋರಾಡಿ ಬಾಲ್ಯವಿವಾಹ ಮತ್ತು ಬಹುಪತ್ನಿತ್ವ ನಿರೋಧಕ ನಿರ್ಣಯವನ್ನು ಮಾಡಿ ಸ್ತ್ರೀ ಸಮಾಜಕ್ಕೆ ಮಹದುಪಕಾರ ಮಾಡಿದ ಶ್ರೀಮತಿ ಲೀಲಾವತಿ ಮುನ್ಷಿ ಮತ್ತು ಅರುಣಾ ಅಸಫಅಲಿ, ಹಂಸಾ ಮೇಥಾ ಇವರಂಥ ವೀರಸ್ತ್ರೀಯರನ್ನು ಕೊಟ್ಟು ಕರ್ನಾಟಕದ ಮುಖ್ಯಾಂಗಗಳನ್ನಾಗಿ ಮಾಡಬೇಕೆಂದು ಆಶಿಸುತ್ತೇನೆ.

ಎಂದು ಮುಂತಾಗಿ ಹೇಳಿ ಹರಪನ ಹಳ್ಳಿಯ ಅಕ್ಕ—ತಂಗಿಯರಿಗೆ ಧನ್ಯವಾದಗಳನ್ನರ್ಪಿಸಿ ಭಾಷಣ ಮುಗಿಸಿದರು.

ಲಸ್ಟರ್ ಫೀವರ್ ಕ್ಯೂರ್

ಮಲೇರಿಯಾ ಮತ್ತು ಇತರ ಜ್ವರಗಳ ಮೇಲೆ ಖಾತ್ರಿಯಾದ ಔಷಧ



ಅಮೃತಬಳ್ಳಿ, ಗಿಢೂನಿಂಬ, ಪುಷ್ಕರಮೂಲ, ಬೃಹತಿ ಕಟುಕರೋಹಿಣಿ, ಜೇನುತುಪ್ಪ ವಗೈರೆ ಘನಮೂಲಿಕೆಗಳನ್ನೊಳಗೊಂಡ ಜ್ವರದ ಸಿರಪ್, ಅತಿ ಶೀಘ್ರವಾಗಿ ಜ್ವರದ ತಾಪವನ್ನು ತಗ್ಗಿಸಿ, ರೋಗಿಯನ್ನು ಕಾಪಾಡುವದು. ಹೃದಯಕ್ಕೆ ಶಕ್ತಿಕೊಡುವದು 102–103ಡಿಗ್ರಿ ಜ್ವರವು 3–4 ಹೊತ್ತಿನ ಔಷಧದಲ್ಲೇ ಮಾಯವಾಗುವದು ಇದರ ಸೇವನೆಯಿಂದ ಎಲ್ಲ ತರಹ ಮಲೇರಿಯಾ ಜ್ವರ, ಇನಫ್ಲೂಯಂಜ, ನೆಗಡಿಯುಕ್ತಜ್ವರ, ವಾಯುವಿಷ ಜ್ವರ, ಶ್ವಾಸನಾಳಜ್ವರ, ಡೆಂಗ್ಯೂ, ಕಾಲಆಜಾರ್, ಸಾಧಾರಣ ಜ್ವರಗಳು ನಾಶವಾಗುವವು. ಜ್ವರ ಸಂಬಂಧವಾದ ತಲೆ ನೋವು, ವಾಂತಿ, ಪಿತ್ತ, ಮೈಕೈ ಕಾಲುನೋವು ಸಹ ನಿವಾರಣೆಯಾಗುವದು.

೨ ಔನ್ಸ್ ಬಾ. ೧—೪—೦ ೪ ಔ. ೨-೪-೦ [ಎಲ್ಲಾ ಅಂಗಡಿಗಳಲ್ಲೂ ದೊರಕುತ್ತೆ.]

ಮಲೇರಿಯ ವಿಷಕ್ರಿಮಿಗಳಿರುವ ವ್ಯಾಧಿಗ್ರಸ್ಥನಿಗೆ, 'ಲಸ್ಟರ್ ಫೀವರ್ ಕ್ಯೂರ್' ಉಪಯೋಗಿಸಿದೆವು. ರಕ್ತ ಪರೀಕ್ಷೆ ಮಾಡಿದ್ದರಲ್ಲಿ, ವಿಷ ಕ್ರಿಮಿಗಳು ನಾಶವಾಗಿದ್ದವು. ಜ್ವರವು ೭೨ ಗಂಟೆಗಳೊಳಗಾಗಿಯೆ ನಿವಾರಣೆಯಾಯಿತು —ವಾರ್ಡ ಥಾಂಸನ್ ಆಸ್ಪತ್ರೆ, ಚಿಕ್ಕಬಳ್ಳಾಪುರ

ದೀರ್ಘಕಾಲದಿಂದ ನರಳುತ್ತಿರುವ ಕೆಲವು ಮಲೇರಿಯಾ ಕೇಸುಗಳಲ್ಲಿ "ಲಸ್ಟರ್ ಫೀವರ್ ಕ್ಯೂರ್" ಉಪಯೋಗಿಸಿ ಗುಣವಾದ ಸಂಗತಿಯನ್ನು ತಿಳಿಸಲು ತುಂಬಾ ಸಂತೋಷವಾಗುತ್ತದೆ.

—A. G. ಸ್ಮಿತ್, ಲೇಡಿ ಅಪಾತಿಕೆರಿ, [ರಿಟೈರ್ಡ] ಹಾಸನ

"ಲಸ್ಟರ್ ಫೀವರ್ ಕ್ಯೂರ್" ಆಯುರ್ವೇದದಲ್ಲಿ ಪ್ರಖ್ಯಾತಿಯಾದ ಗಿಡಮೂಲಿಕೆಗಳಿಂದ ತಯಾರಿಸಿದ ಔಷಧವಾಗಿರುತ್ತೆ. ಮಲೇರಿಯ ಜ್ವರ ಬಂದವರಿಗೆ ಇದನ್ನು ಕೊಟ್ಟಾಗ ಶೀಘ್ರವಾಗಿ ಗುಣವಾಯಿತೆಂದು ತಿಳಿಸಲು ಸಂತೋಷಿಸುತ್ತೇನೆ. ಕಂಪನಿಯು ಅಭಿವೃದ್ಧಿಗೆ ಬರಲೆಂದು ಹಾರೈಸುತ್ತೇನೆ. —ಭೂಪಾಳಂ ಪುಟ್ಟನಂಜಪ್ಪ M. A. L. L. B. ಅಡ್ವೊಕೇಟ್, ಶಿವಮೊಗ್ಗಾ.

ಡಿಸ್ಟ್ರಿಬ್ಯೂಟರರು:—

ಸ್ಟಾಕಿಸ್ಟರು:— (೧) ಧಾರವಾಡ ಫಾರ್ಮಸಿ, ಧಾರವಾಡ, (೨) ಕರ್ನಾಟಕ ಸ್ಟೋರ್ಸ, ಹುಬ್ಬಳ್ಳಿ, (೩) ಮೊಸರ್ಕತ್ತಿ ಅ್ಯಂಡ ಸನ್ಸ, ವಿಜಾಪೂರ, (೪) ಲಕ್ಷ್ಮೀ ಸ್ಟೋರ್ಸ್, ಬಾಗಲಕೋಟೆ (೫) ಸಿ. ಪಿ. ವೀರಭದ್ರಪ್ಪ. ಹೊಸಪೇಟೆ, (೬) ಶಿರ್ಶಿ ಡ್ರಗ್ ಸ್ಟೋರ್ಸ್, ಶಿರ್ಶಿ (೭) ದೇವಪ್ಪ ಪಾಯ್ಕ & ಸನ್ಸ, ಕುಮಟಾ, (೮) ವೆಂಕಟೇಶ ಫಾರ್ಮಸಿ, ರಾಣೆಬೆನ್ನೂರ, (೯) ಮುಜುಮುದಾರ ಅ್ಯಂಡ ಕಸಬೇಕರ ಬ್ರಾಸ್, ಕಾರವಾರ. (೧೦) ಹಾರ್ವಿ ಮತ್ತು ಬಿ. ಜನರಲ್ ಮರ್ಚಂಟ ಬಳ್ಳಾರಿ (೧೧) ದಿ ಯುನೈಟೆಡ ಸೇಲ ಏಜನ್ಸೀಜ ಶಹಾಪುರ ಬೆಳಗಾವಿ.



ಜ್ಯೋತಿಷಿ:-ಕೃಷ್ಣಶಾಸ್ತ್ರಿ ಭಿತೆ, ಭವಿಷ್ಯಕಥನ ಕಾರ್ಯಾಲಯ, ಖಡೇಬಜಾರ ಬೆಳಗಾವಿ

ಮೇ ೧೨ ರಿಂದ ೧೮ ರ ವರೆಗೆ

ಮೇಷ

ಪ್ರಕೃತಿಯಲ್ಲಿ ಬಹಳ ಜೋರು ಬಂದಂತೆನಿಸುವದು. ಆದರೆ ಹುಣ್ಣು ಹುರುಕು ಬಾವು ಉಷ್ಣ ಜನ್ಯ ವಿಕಾರಗಳಿಂದ ಸ್ವಲ್ಪ ತೊಂದರೆ. ಸ್ತ್ರೀ ಸುಖದಲ್ಲಿ ಕೆಲ ಶ್ರಮ ಪ್ರಾಪ್ತ ಮಾತುಕತೆಗಳಿಂದ ವ್ಯತ್ಯಯ. ಉಳಿದ ವಿಷಯುಗಳಲ್ಲಿ ಪ್ರಾಪಂಚಿಕ ಸುಖ ಅಷ್ಟಕಷ್ಟೆ ಮಕ್ಕಳಲ್ಲಿ ಒಬ್ಬರಿಂದ ಅತ್ಯಂತ ಸ್ಸಾಹಸದ ಮತ್ತು ಸ್ಪೃಹಣೀಯವಾದ ಕೃತ್ಯಗಳು ಉದ್ಯೋಗದಲ್ಲಿ ಪ್ರಗತಿ ಮತ್ತು ಪ್ರತಿಷ್ಠೆ ಜೋರಿನಿಂದ ಬೆಳೆಯುತ್ತ ನಡೆಯುವದು ಮತ್ತು ದ್ರವ್ಯ ಲಾಭ ಅಂದಾಜಿನಷ್ಟು. ಡಾಗಾ ಡಂಗುರ ಇಲ್ಲವೆ ಗುಪ್ತ ರೀತಿಯಿಂದ ವ್ಯಸನ ಇಲ್ಲವೆ ನಿಂದಿತ ಕೃತ್ಯಗಳಲ್ಲಿ ಹೆಚ್ಚು ವೆಚ್ಚ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಅನುಕೂಲತೆ. ಆದರೆ ಸಹಾಯಕರ್ತರ ಚಟುವಟಿಕೆಗಳು ಸಂಶಯಾಸ್ಪದ. ಪ್ರವಾಸಾದಿ ಕೆಲಸ ಸುಖಾವಹ ಆದರೆ ಅಶ್ವಿನಿಯ ಕೊನೆಯ ೩ ಮತ್ತು ಭರಣಿಯ ಮೊದಲನೇ ಚರಣಕ್ಕೆ ತೊಂದರೆಯಿಂದಲೆ ಯಶಸ್ಸು. ತಾ. ೧೨, ೧೩, ೧೪, ೧೮ ಅನುಕೂಲ.

ವೃಷಭ

ಮಕ್ಕಳಿಗೆ ಕ್ಲೇಶ ಇಲ್ಲವೆ ಕೆಲ ಅಪಕರ್ಷಣದ ಮಾತುಗಳು ಮತ್ತು ಅದೇ ವಿಷಯದಲ್ಲಿ ಹೆಂಡತಿಯಿಂದ ಪಕ್ಷಪಾತ ಮಾಡಲ್ಪಡುವದರಿಂದ ಉಭಯತರಲ್ಲಿ ತೀವ್ರ ವಾದಗಳು. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಮತ್ತು ಲಾಭ ಉತ್ತಮ. ಆದರೆ ಸಾಲ ಮಾಡಿ ಸಂಗ್ರಹದಿಂದ ವೆಚ್ಚ ಮಾಡುವ ಪ್ರಸಂಗ. ಸೊಸೆ ಅಳಿಯ ಇಲ್ಲವೆ ಮಿತ್ರರು ಅವಮಾನಾಸ್ಪದ ರೀತಿಯಿಂದ ವರ್ತಿಸುವರು. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಹೊಳ್ಳು ಅನುಕೂಲತೆ. ಬಂಧು ವರ್ಗದವರಲ್ಲಿ ಉನ್ನತಿ ಕೊಡತಕ್ಕೊಳ್ಳುವ ವ್ಯವಹಾರದಲ್ಲಿ ಸಾವಕಾರ ಇಲ್ಲವೆ ಸಾಲಗಾರರ ಕಡೆಯಿಂದ ಮನಸ್ತಾಪವಾಗುವಷ್ಟು ಬೆದರಿಕೆ. ಪ್ರವಾಸ ಮತ್ತು ಭೆಟ್ಟಿ ಅನುಕೂಲ. ಆದರೆ ಪತ್ರವ್ಯವಹಾರ ಅತ್ಯಂತ ತೊಂದರೆಯದು. ರೋಹಿಣಿಯ ಕೊನೆಯ ೩ ಮತ್ತು ಮೃಗಾದ ೧ ನೇ ಚರಣಕ್ಕೆ ಹೆಚ್ಚು ತೊಂದರೆ. ೧೨, ೧೩, ೧೬, ೧೭ ಅನುಕೂಲ.

ಮಿಥುನ

ಎಲ್ಲರ ಪ್ರಕೃತಿ ಉತ್ತಮ ಮತ್ತು ಬಹುತರ ವಿಷಯುಗಳಲ್ಲಿ ಏಕಮತ್ಯವಾಗುತ್ತ ನಡೆಯುವದರಿಂದ ಪ್ರಾಪಂಚಿಕ ಆನಂದದಲ್ಲಿ ಬಹಳ ಹೆಚ್ಚಳ. ಉದ್ಯೋಗದಲ್ಲಿ ಪ್ರಗತಿ ಮತ್ತು ಪ್ರತಿಷ್ಠೆ ಹೇವವನ್ನು ಹುಟ್ಟಿಸುವಷ್ಟು ಉತ್ತಮ. ಆದರೆ ಲಾಭವೂ ಅಂದಾಜಿಗಿಂತ ಬಹಳಹೆಚ್ಚು. ಮಿತ್ರರಲ್ಲಿ ಉತ್ಕರ್ಷ ಮತ್ತು ಅವರಿಂದ ನಿಮ್ಮ ಅಭಿಮಾನಾಸ್ಪದ ಗೌರವ. ಚಾಕರರಲ್ಲಿ ಇಲ್ಲವೆ ಮನೆಗೆ ಬಂದ ಅತಿಥಿಗಳಿಗೆ ಮಾತ್ರ ಒಮ್ಮೆಲೆ ಪೀಡೆ. ಅವಚಿತವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಸುಯಶ. ಅವಚಿತ ಲಾಭದ ಸಂಭವ. ಪ್ರವಾಸ ಮತ್ತು ಭೆಟ್ಟಿ ಅನುಕೂಲವೆ. ಆದರೆ ಅದಕ್ಕಿಂತ ಪತ್ರವ್ಯವಹಾರ ಹೆಚ್ಚು ಅನುಕೂಲ. ಆರಿದ್ರೆಯ ಕೊನೆಯ ೩ ಮತ್ತು ಪುನರ್ವಸುವಿನ ೧ ನೇ ಚರಣಕ್ಕೆ ತೊಂದರೆಯಿಂದಲೆ ಯಶಸ್ಸು. ತಾ. ೧೪, ೧೫, ೧೬, ೧೮ ಅನುಕೂಲ.

ಕರ್ಕ

ಎಲ್ಲರ ಪ್ರಕೃತಿ ಅನುಕೂಲ ಆದರೆ ವರ್ತನೆ ಅಷ್ಟೇ ವಿಚಿತ್ರ ಮತ್ತು ಪ್ರಾಪಂಚಿಕ ಪ್ರತಿಯೊಬ್ಬರಿಗೆ ಅಸ್ಥಾನದಲ್ಲಿ ದೊಡ್ಡಸ್ತನ ತೋರಿಸುವ ಚಟ ಬರುವದರಿಂದ ಬಹಳ ನಗೆಗೇಡು. ಉದ್ಯೋಗದಲ್ಲಿ ಉತ್ತಮ ಪ್ರಗತಿ ವಿಪುಲ ಲಾಭ ಮತ್ತು ಅತ್ಯಂತ ಪ್ರತಿಷ್ಠೆ ಸತ್ತೆ ಇಲ್ಲವೆ ವರ್ಚಸ್ವದ ಅಪೇಕ್ಷಿತ ಹೆಚ್ಚಳ. ಮಿತ್ರ ಸುಖ ಉತ್ತಮ ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಹಿಮ್ಮೆಟ್ಟಿಸುವ ಅಂಜಿಕೆಯಿಂದ ಸ್ವಲ್ಪ ಹಾನಿಯನ್ನು ಒಪ್ಪಿಸಿಯೂ ಒಡಂಬಡಿಕೆಯ ಸಂಭವ. ಪ್ರವಾಸ ತೊಂದರೆಯದು. ಆದರೆ ಭೆಟ್ಟಿ ಮತ್ತು ಪತ್ರವ್ಯವಹಾರ ಅನುಕೂಲ. ಪುಷ್ಯದ ಕೊನೆಯ ೩ ಮತ್ತು ಆಶ್ಲೇಷಾದ ೧ ನೇ ಚರಣಕ್ಕೆ ತೊಂದರೆಯಿಂದಲೆ ಯಶಸ್ಸು. ತಾ. ೧೨, ೧೬, ೧೭, ೧೮ ಅನುಕೂಲ.

ಸಿಂಹ

ಪ್ರಕೃತಿ ಉತ್ತಮ ಆಮಾನದಿಂದ ಹೆಂಡತಿ ಮತ್ತು ಪ್ರಾಪಂಚಿಕ ಸುಖ ಬಹಳ ಕಡಮೆ ಮಕ್ಕಳಲ್ಲಿ ಉನ್ನತಿ ಆದರೆ ಅದಕ್ಕಾಗಿ ವಿಪರೀತ ವೆಚ್ಚ. ಉದ್ಯೋಗದಲ್ಲಿ ಪ್ರಗತಿ ಮತ್ತು ಲಾಭ ಉತ್ತಮ. ಆದರೆ ಪ್ರತಿಷ್ಠೆ ಕುಂದುತ್ತ ವಿಪರೀತ ನಡೆಯುವದು ಮಾನಸಿಕ ತೊಂದರೆಯೂ ವಿಪರೀತ. ಸಾಹಸದ ವಿರಹಪಡುವವರನ್ನು ವಂಚಿಸುವ ಪ್ರಸಂಗ. ಸಾಹಸದ ಮಾಪದಿಂದ ಯಶಸ್ಸು ಕಡಮೆ ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಸಾಮಾನ್ಯ ಅನುಕೂಲತೆ. ಪ್ರವಾಸಾದಿ ಕೆಲಸಗಳು ಕಷ್ಟ ಸಾಧ್ಯ. ಮಘಾದ ಕೊನೆಯ ೩ ಮತ್ತು ಪೂರ್ವಾದ ೧ ನೇ ಚರಣಕ್ಕೆ ಹೆಚ್ಚು ತೊಂದರೆ ತಾ. ೧೪, ೧೫, ೧೮ ಅನುಕೂಲ.

ಕನ್ಯಾ

ಪ್ರಕೃತಿ ಸುಧಾರಣೆ ಪ್ರಾಪಂಚಿಕ ಸುಖ ಅನುಕೂಲ. ಮಕ್ಕಳಲ್ಲಿ ಮತ್ತು ಮಿತ್ರರಲ್ಲಿ ಒಳ್ಳೆ ಉನ್ನತಿ ಉದ್ಯೋಗದಲ್ಲಿ ಪ್ರಗತಿ ಮತ್ತು ಪ್ರತಿಷ್ಠೆ ಕುಂದುತ್ತ ಹೋಗುವವು. ಮಿತ್ರ ಸುಖ ಉತ್ತಮ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಬಹಳ ಅನುಕೂಲತೆ ಅವಚಿತ ಲಾಭದ ಸಂಭವ. ಪ್ರವಾಸ ಅನುಕೂಲ ಆದರೆ ಭೆಟ್ಟಿ ಮತ್ತು ಪತ್ರವ್ಯವಹಾರ ಅಷ್ಟಕಷ್ಟೆ. ಹಸ್ತಾದ ಕೊನೆಯ ೩ ಮತ್ತು ಚಿತ್ರಾದ ೧ ನೆ ಚರಣಕ್ಕೆ ತೊಂದರೆಯಿಂದಲೆ ಯಶಸ್ಸು. ತಾ. ೧೨, ೧೬, ೧೭ ಉತ್ತಮ.

ತುಲಾ

ಪ್ರಕೃತಿ ಮತ್ತು ಪ್ರಾಪಂಚಿಕ ಸುಖ ಅನುಕೂಲ ಆದರೆ ಸ್ತ್ರೀವರ್ಗದಲ್ಲಿ ಅನಾದರ. ಉದ್ಯೋಗದಲ್ಲಿ ಉತ್ತಮ ಪ್ರಗತಿ. ಮಿತ್ರರಿಗೂ ಹ್ಯಾವ ಹುಟ್ಟುವಷ್ಟು ಉತ್ತಮ ಪ್ರತಿಷ್ಠೆ. ಅಂದಾಜುಮೀರಿ ಲಾಭ. ಪ್ರಿಯ ಜನರ ಭೆಟ್ಟಿ ಸಂದರ್ಶನ ಆದರೆ ಅವರಿಗೆ ಪರಸ್ಪರ ಶತ್ರುಸಹಾನುಭೂತಿ ಕಡಮೆ. ತಿರುಗಿ ಅಸೂಯೆಯ ಭಟವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಲಾಭ ಪಕ್ಷದವರದೂ ಜೋರು. ಪ್ರವಾಸಾದಿ ಕೆಲಸ ಅನುಕೂಲ ಸ್ವಾತಿಯ ಕೊನೆಯ ೩ ಮತ್ತು ವಿಶಾಖಾದ ೧ ನೇ ಚರಣಕ್ಕೆ ತೊಂದರೆಯಿಂದಲೆ ಯಶಸ್ಸು. ತಾ. ೧೪, ೧೫, ೧೮ ಅನುಕೂಲ.

ವೃಶ್ಚಿಕ

ಪ್ರಕೃತಿ ಉಷ್ಣಜನ್ಯವಿಕಾರದಿಂದ ಸ್ವಲ್ಪ ಕೆಡುವದು. ಮಕ್ಕಳ ಆರೋಗ್ಯದ ಬಗ್ಗೆಯೂ ಏನಾದರೂ ತಕರಾರು ಇದ್ದದೆ. ಸ್ತ್ರೀಸುಖ ಉತ್ತಮ ಆದರೆ ಬಹುತರ ವಿಷಯುಗಳಲ್ಲಿ ಪ್ರಾಪಂಚಿಕ ತೊಂದರೆ ಹೆಚ್ಚುತ್ತ ಹೋಗುವ ಘಟನೆಗಳು ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಉತ್ತಮ ಆದರೆ ಲಾಭ ಬಹಳ ಕಡಮೆ. ಅಳತೆಮೀರಿ ವೆಚ್ಚ ಘುತ್ತಿಂದು ಮುಂದೆ ಬರುವದು. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಸಮಾನ ಯಶಸ್ಸು ಆದರೆ ಈ ಕೂಟವನಿಗೆ ವೈಮೇಲೆಬೀಳುವ ಹೊಡೆತಗಳಿಂದ ಶತ್ರು ಮತ್ತು ಸಂಕಟಗಳು ಯದೃಚ್ಛೆಯಿಂದ ಹಾರಿಹೋಗುವವು. ಕಲಾಭಿಜ್ಞ ಜನರ ಸಹವಾಸ. ವರ್ತನೆಯಲ್ಲಿ ಗರ್ವ ಮತ್ತು ಡೌಲು ಬಹಳ. ಪತ್ರವ್ಯವಹಾರ ತೊಂದರೆಯದು. ಆದರೆ ಪ್ರವಾಸ ಮತ್ತು ಭೆಟ್ಟಿ ಅನುಕೂಲ. ಅನುರಾಧೆಯ ಕೊನೆಯ ೩ ಮತ್ತು ಜೇಷ್ಠಾದ ೧ ನೇ ಚರಣಕ್ಕೆ ಹೆಚ್ಚು ತೊಂದರೆ. ತಾ. ೧೨, ೧೬, ೧೭ ಅನುಕೂಲ.

ಧನು

ಪ್ರಕೃತಿ ನಿಮ್ಮದು ಉತ್ತಮ. ಅದರಂತೆ ಹೆಂಡತಿ ಮತ್ತು ಮಕ್ಕಳಲ್ಲಿ ಆರೋಗ್ಯ ಅನುಕೂಲ ಉಳಿದು ಪ್ರಾಪಂಚಿಕ ಸುಖದ ಹೆಚ್ಚಳ. ಪ್ರಿಯ ಜನರ ಸಹವಾಸ ಉತ್ಸವದ ಕಾರ್ಯಗಳು. ಉದ್ಯೋಗದಲ್ಲಿ ಒಳ್ಳೆ ಪ್ರಗತಿ ಮತ್ತು ಪ್ರತಿಷ್ಠೆ ಲಾಭ ಇವುಗಳ ಬಗ್ಗೆ ಕುರಕುರಿ ಇದ್ದದೆ ಉತ್ತಮ ವಾಹನಯೋಗ. ದರ್ಶನೀಯ ಸ್ಥಳ ಇಲ್ಲವೆ ವ್ಯಕ್ತಿಗಳ ಸಹವಾಸ. ವಾದದಲ್ಲಿ ಯಶಸ್ಸು ಆದರೆ ಶತ್ರುಗಳು ಹೊಸಪೇಚು ಹಾಕಲು ಪ್ರಾರಂಭಿಸುವರು. ಮೂಲಾದ ಕೊನೆಯ ೩ ಮತ್ತು ಪೂರ್ವಾಷಾಢಾದ ೧ ನೇ ಚರಣಕ್ಕೆ ತೊಂದರೆಯಿಂದಲೆ ಯಶಸ್ಸು. ತಾ. ೧೨, ೧೩, ೧೪, ೧೫ ಅನುಕೂಲ.

ಮಕರ

ಪ್ರಕೃತಿ ಮತ್ತು ಪ್ರಾಪಂಚಿಕ ಸುಖ ಉತ್ತಮ ಸ್ಥಾವರದಲ್ಲಿ ಅನುಕೂಲ ಘಟನೆದಗಳು ರಸವತ್ತಾಗಿ ಮಾತಾಡುವದರಿಂದ ಕಠಿಣ ಕಾರ್ಯಗಳೂ ಬೇಗನೆ ಸಾಧ್ಯವಾಗುವ ಯೋಗ. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಮತ್ತು ಲಾಭ ಉತ್ತಮ. "ಸರಿಯುದ್ದದೂ ಅಡ್ಡಮಾರ್ಗದಿಂದ ಬೇಗನೆ ಸಾಧ್ಯ. ನೆರೆಯವರೊಡನೆ ಸ್ಪರ್ಧೆ ಮತ್ತು ವಾಗ್ವಾದ. ಮಿತ್ರರಲ್ಲಿ ಪರಸ್ಪರರ ಬಗ್ಗೆ ಮತ್ಸರ ಬೆಳೆಯುತ್ತ ಹೋಗುವದು ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಉಭಯ ಪಕ್ಷಗಳಲ್ಲಿ ಒಂದೆ ಸವನೆ ಮೋಸದ ಪೇಚುಗಳು. ಪ್ರವಾಸ ಮತ್ತು ಭೆಟ್ಟಿಗಿಂತ ಪತ್ರವ್ಯವಹಾರ ಅನುಕೂಲ. ಶ್ರವಣಾದ ಕೊನೆಯ ೩ ಮತ್ತು ಧನಿಷ್ಠಾದ ೧ ನೇ ಚರಣಕ್ಕೆ ತೊಂದರೆಯಿಂದಲೆ ಯಶಸ್ಸು ತಾ. ೧೪, ೧೫, ೧೬, ೧೭ ಅನುಕೂಲ.

ಕುಂಭ

ಪ್ರಕೃತಿ ಹೆಚ್ಚು ಶ್ರಮದಿಂದ ಬಂದಿದಂತಹದು ಆದರೆ ಹೆಂಡತಿ ಮಕ್ಕಳು ಮತ್ತು ಪ್ರಾಪಂಚಿಕ ಸುಖ ಉತ್ತಮ ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಮತ್ತು ಲಾಭ ಉತ್ತಮ. ಆದರೆ ವೆಚ್ಚವೂ ಒಂದೂವರೆ ಪಟ್ಟು. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಅನುಕೂಲತೆ ಆದರೆ ಶತ್ರುಗಳು ಹೊಸ ಹುರುಪಿನಲ್ಲಿ. ಪ್ರವಾಸಕ್ಕಿಂತ ಭೆಟ್ಟಿ ಮತ್ತು ಪತ್ರವ್ಯವಹಾರ ಹೆಚ್ಚು ಅನುಕೂಲ. ಶತತಾರಿಕೆಯ ಕೊನೆಯ ೩ ಮತ್ತು ಪೂರ್ವಾಭಾದ್ರಪದದ ೧ ನೇ ಚರಣಕ್ಕೆ ತೊಂದರೆಯಿಂದಲೆ ಯಶಸ್ಸು. ತಾ. ೧೪, ೧೫, ೧೬, ೧೮ ಅನುಕೂಲ.

ಮೀನ

ಪ್ರಕೃತಿ ಉತ್ತಮ ಕೌಟುಂಬಿಕ ಉತ್ಕರ್ಷದ ಬಹಳ ಕೆಲಸಗಳು ಆದರೆ ಪ್ರತ್ಯಕ್ಷ ಸುಖ ಸಮಾಧಾನ ಕಡಮೆಯೇ. ಮಿತ್ರರ ಮತ್ತು ಶತ್ರುಗಳ ಸಹವಾಸ ಒಂದೇ ಕಾಲಕ್ಕೆ ಸಂಭವಿಸುವದರಿಂದ ಮನಸು ಅತಿ ಗೊಂದಲದಲ್ಲಿ ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಮತ್ತು ಲಾಭ ಒಟ್ಟಿನಲ್ಲಿ ಅನುಕೂಲ. ಆದರೆ ಅಪ್ರಿಯ ಕೆಲ ಸಂಗತಿಗಳನ್ನು ಮಾಡಬೇಕಾದ ಪ್ರಸಂಗ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಸಮಾನ ಸ್ಥಿತಿ. ಪ್ರವಾಸ ಭೆಟ್ಟಿ ಮತ್ತು ಪತ್ರವ್ಯವಹಾರ ಕಷ್ಟಸಾಧ್ಯ ಅನುಕೂಲ ಉತ್ತರಾಭಾದ್ರಪದದ ಕೊನೆಯ ೩ ಮತ್ತು ರೇವತಿಯ ೧ ನೇ ಚರಣಕ್ಕೆ ತೊಂದರೆಯಿಂದಲೆ ಯಶಸ್ಸು ತಾ. ೧೨, ೧೬, ೧೭, ೧೮ ಅನುಕೂಲ.

ನಾರದಕತೆ

(೩ ನೇ ಪುಟದಿಂದ)

ನ್ನುಂಟು ಮಾಡಿದರೆ ಅವಳ ಪ್ರಾಣವೇ ಹೋಗುವದು. ಸ್ವಲ್ಪ ತಡೆಯಿರಿ ಬಡವನ ಮೇಲೆ ಕೃಪೆ ಮಾಡಿರಿ. ,, ಎಂದು ದೈನ್ಯದಿಂದ ಬೇಡಿಕೊಂಡನು.

"ಅಂದರೆ? ನಾವೇನು ಹುಡುಗರೆಂದು ತಿಳಿದಿರುವೆಯಾ?" ಎಂದು ಮೂವರಲ್ಲಿ ಒಬ್ಬನು ನುಡಿದನು "ನಾವು ಸಮೀಪದಲ್ಲಿರುವ ಹುಚ್ಚರ ಆಸ್ಪತ್ರೆಯ ಕಾವಲಗಾರರು! ನಮಗೇನು ಹೇಳುವಿ. ನಿನ್ನ ಹೆಂಡತಿಯ ಶಸ್ತ್ರಕ್ರಿಯೆ? ಎಲೊ. ಈ ಡಾಕ್ಟರನು ನಮ್ಮ ಆಸ್ಪತ್ರೆಯ ಒಬ್ಬ ಹುಚ್ಚನು. ಎರಡು ತಾಸಿನ ಹಿಂದೆ ನಮ್ಮ ಕಣ್ಣು ತಪ್ಪಿಸಿ ಬಂದಿರುವನು. ಇದು ಅವನ ಹಳೇಮನೆ ಅವನು ಇಲ್ಲಿಯೇ ಬಂದಿರಬಹುದೆಂಬ ಸಂಶಯದಿಂದ ನಾವು ಅವನ ಶೋಧಕ್ಕೆ ಬಂದಿರುವೆವು."

ಇದನ್ನು ಕೇಳಿದ ಕೂಡಲೇ ಪತಿಯು. ತೀರ ಅಳುಮೋರೆಗೆ ಬಂದನು. ಅವನಿಗೆ ಧೈರ್ಯ ಹೇಳುವದಕ್ಕಾಗಿ ಅವರಲ್ಲಿಯ ಹಿರಿಯನು ಮುಂದೆ ಬಂದು "ರಾಯರೇ ಅಷ್ಟೊಂದು ಹೆದರುವ ಕಾರಣವಿಲ್ಲ, ಅವನ ಮನಸ್ಸಿಗೆ ಬಂದರೆ ನಿಮ್ಮ ಹೆಂಡತಿಯನ್ನು ಉಳಿಸಬಲ್ಲ. ಒಂದು ಕಾಲದಲ್ಲಿ ಅವನು ಪ್ರಸಿದ್ಧ ಸರ್ಜನ್ನನಾಗಿದ್ದನು. ಎಷ್ಟೋ ಕಾಲ ಅವನ ಕೈಹಿಡಿಯುವವರು ಯಾರೂ ಇದ್ದಿಲ್ಲ. ಅಲ್ಲಿಯ ವ್ಯವಸಾಯ ಬಿಟ್ಟುಗೊಟ್ಟು ಈ ಶಾಂತಪ್ರದೇಶದಲ್ಲಿ ಇರಹತ್ತಿದ. ಇದು ಅವನ ಸ್ವಂತಮನೆ. ಇಲ್ಲಿಯೇ ದೂರ ದೂರಿಂದ ಶಸ್ತ್ರಕ್ರಿಯೆಗಾಗಿ ಜನರು ಬರುತ್ತಿದ್ದರು. ಅವನ ಉದ್ಯೋಗವು ಚನ್ನಾಗಿ ನಡೆಯಹತ್ತಿತು ಆದರೆ ನಾಲ್ಕಾರು ವರ್ಷಗಳಲ್ಲಿ ಅವನ ತಲೆ ಕೆಟ್ಟಿತು. ಅಂದಿನಿಂದ ಅವನನ್ನು ಹೊರಗಿಡುವದು ಸಾರ್ವಜನಿಕ ಹಿತದೃಷ್ಟಿಯಿಂದ ಘಾತುಕವೆಂದು ಕಂಡುಬಂತು. ಕೂಡಲೇ ಅವನನ್ನು ಹುಚ್ಚರ ಆಸ್ಪತ್ರೆಗೆ ಕಳಿಸಬೇಕಾಯಿತು. ದೇವರ ಮನಸ್ಸಿಗೆ ಬಂದರೆ ಮತ್ತು ಅವನ ತಲೆಯು ಸರಿಯಾಗಿದ್ದರೆ ಅವನು ನಿಮ್ಮ ಹೆಂಡತಿಯನ್ನು ಉಳಿಸಬಲ್ಲನು. ಆದರೆ ರಾಯರೇ ಯಾರು ಹೇಳಬೇಕು. ಹುಚ್ಚರ ಕೆಲಸ!" ಎಂದು ಸಂಗಡಿಗರ ಕಿವಿಯಲ್ಲಿ ಏನೋ ಹೇಳಿದ. ಶಸ್ತ್ರಕ್ರಿಯೆಯು ಮುಗಿಯುವ ವರೆಗೆ ಅವರು ಹೊರಗೆ ನಿಲ್ಲಲು ನಿರ್ಧರಿಸಿದರು.

ಶಸ್ತ್ರಕ್ರಿಯೆಯು ಮುಗಿದು ಹೊರಗೆ ಬಂದ ಕೂಡಲೇ ಅವನನ್ನು ಮರಳಿ ಆಸ್ಪತ್ರೆಗೆ ಒಯ್ದರು. ಆದರೆ ಅವರಲ್ಲಿಯ ಹಿರಿಯನು ಹೋಗುವಾಗ ಆಸ್ಪತ್ರೆಯ ಡಾಕ್ಟರ ಹಾಗು ಸರ್ಜನ್ನರನ್ನು ಕಳಿಸುವದಾಗಿ ಹೇಳಿದನು. "ದೇವರು ನಿನಗೆ ಕಲ್ಯಾಣ ಮಾಡಲಿ" ಎಂದು ಹೇಳಲು ಮರೆಯಲಿಲ್ಲ.

ಹೆಂಡತಿಗೆ ಸ್ವಲ್ಪ ಗುಣವಾದೊಡನೆ ಅವಳನ್ನು ಮುಂಬೈಗೆ ಕರೆದೊಯ್ದು. ಪ್ರಸಿದ್ಧ ಸರ್ಜನ್ನರ ಆಸ್ಪತ್ರೆಯಲ್ಲಿ ಶುಶ್ರೂಷೆಗಾಗಿ ಇಡಲಾಯಿತು. ಅವಳ ಶಸ್ತ್ರಕ್ರಿಯೆಯನ್ನು ಸೂಕ್ಷ್ಮ ರೀತಿಯಿಂದ ತಪಾಸ ಮಾಡಿ ಸರ್ಜನನು ಆಶ್ಚರ್ಯಚಕಿತನಾದ. ಅವನು "ನಿಮ್ಮ ಹೆಂಡತಿಗೆ ಇನ್ನೇನೂ ಭಯವಿಲ್ಲ. ಸ್ವಲ್ಪ ದಿನದಲ್ಲಿ ಅವರು ಮೊದಲಿನಂತಾಗುವರು. ಆದರೆ ಏನು ಹೇಳಲಿ! ಶಸ್ತ್ರಕ್ರಿಯೆಯನ್ನು ಯಾರು ಮಾಡಿದರು? ನಾನಂತೂ ಇದನ್ನು ನೋಡಿ ಆಶ್ಚರ್ಯಚಕಿತನಾಗಿರುವೆನು. ಒಂದು ವಿಶಿಷ್ಟತರದ ಶಸ್ತ್ರಕ್ರಿಯೆಯಿಂದಲೇ ನಿಮ್ಮ ಹೆಂಡತಿಯು ಉಳಿಯಲು ಶಕ್ಯವಾಯಿತು. ಆದರೆ ಇಂತಹ ಶಸ್ತ್ರಕ್ರಿಯೆಯಲ್ಲಿ ಇಲ್ಲಿಯ ವರೆಗೆ ಯಾರೂ ಯಶಸ್ವಿಗಳಾಗಿಲ್ಲ. ಕೆಲ ದಿನಗಳಹಿಂದೆ ಮುಂಬೈಯಲ್ಲಿಯ ಒಬ್ಬನೇ ಒಬ್ಬ ಡಾಕ್ಟರನು ಇಂತಹ ಶಸ್ತ್ರಕ್ರಿಯೆಯನ್ನು ಮಾಡಲು ಸಮರ್ಥನಾಗಿದ್ದನು. ಅದಕ್ಕಾಗಿಯೇ ನಾನು ಇಷ್ಟೊಂದು ಆಶ್ಚರ್ಯಚಕಿತನಾದದ್ದು. ಬಹಳ ದಿನಗಳಿಂದಲೂ ಅವನು ಹುಚ್ಚನಾಗಿರುವನೆಂದು ನನಗೆ ಗೊತ್ತು. ಮತ್ತು ಅವನು ಅಂದಿನಿಂದಲೂ ಧಾರವಾಡದ ಹುಚ್ಚರ ಆಸ್ಪತ್ರೆಯಲ್ಲಿರುವನೆಂದು ಕೇಳಿರುವೆ." ಎಂದನು.

—ಒಂದು ಇಂಗ್ಲೀಷ ಕತೆಯ ಆಧಾರದಿಂದ

ವಿಶ್ವ ಪರಿಷತ್ತಿನ ಆವಶ್ಯಕತೆ

(ಮೊದಲನೇ ಪುಟದಿಂದ ಬಂದುದು)

ಎಂದು ಮನೋವಾಕ್ಕಾಯಗಳಲ್ಲಿ ನಿರ್ಧರಿಸಲಿ; ಪ್ರಾಂತಃಕರಣ ಶುದ್ಧಿಗಾಗಿ ಅದನ್ನಾವಾಗಲೂ ಹೃದಯದಲ್ಲಿ ಪಳಗಿಸಲಿ; ಇತರರಿಗೆ ಗೊತ್ತಾಗುವುದಕ್ಕಾಗಿ ಅದನ್ನೇ ಆಡಲಿ; ಪ್ರಪಂಚ ಹಿತಕ್ಕಾಗಿ ಆಚರಿಸಲಿ ಈ ಏಶಿಯನ್ ಜನಾಂಗ ಸಮ್ಮೇಳನದ ಗುರಿ ಎಂದರೆ ಇಷ್ಟು ಮಾತ್ರವೇ.

ಸಹ ನಾವವತು ಸಹ ನೌ ಭುನಕ್ತು
ಸಹ ವೀರ್ಯಂಕರವಾವಹೈ
ತೇಜಸ್ವಿನಾವಧೀತಮಸ್ತು ಮಾ ವಿದ್ವಿಷಾವಹೈ
ಓಂ ಶಾಂತಿ: ಶಾಂತಿ: ಶಾಂತಿ:
(ಕಠೋಪನಿಷತ್ತು)

ದಿ ನೂತನ ಆಯುರ್ವೇದ ಕಾರ್ಯಾಲಯ, ಲಿ. ವಿಜಾಪುರ

ಪೋಷಕ-ಔಷಧಿ-ಆಹಾರ

ಚ್ಯವನಪ್ರಾಶ

ರಸ-ರಕ್ತಾದಿಧಾತುಗಳನ್ನು ಪೋಷಿಸಿ, ಬುದ್ಧಿ, ಸ್ಮರಣ ಶಕ್ತಿಗಳನ್ನು ಬೆಳೆಸಿ, ಕಾರ್ಯಕ್ಷಮತೆ, ಉತ್ಸಾಹಗಳನ್ನು ಹೆಚ್ಚಿಸಿ ಶರೀರವನ್ನು ಪರಿಪುಷ್ಟವಾಗಿ ಮಾಡುವ ಉತ್ತಮ - ಧಾತುಪೌಷ್ಟಿಕ ಔಷಧ.

ಹುಬ್ಬಳ್ಳಿ ಶಾಖೆ:- ಕೊಪ್ಪೀಕರರೋಡ, ಹುಬ್ಬಳ್ಳಿ

ಶ್ರೀ ಬಸವರಾಜ ಮೆಡಿಕಲ್ ಫಾರ್ಮಸಿ

ಮದನಕಾಮಾನಂದ ಗುಟಿ

[ವೀರ್ಯಸ್ತಂಭನ ವಟಿ ಕಿಮ್ಮತ್ತು ರೂ. ೫-೦-೦]

ಕ್ಷೀಣರಿಗೂ ವಾರ್ಧಕ್ಯ ಹೊಂದಿದವರಿಗೂ ವಿಷಯಾನಂದದ ಪ್ರೇಮೀ ಹಾಗೂ ರಸಿಕ ಜನರಿಗೆ ಅತ್ಯವಶ್ಯಕ ಔಷಧ

ಶೀಘ್ರಸ್ಖಲನವನ್ನು ನಿರ್ಮೂಲಮಾಡಿ ಸ್ತಂಭನಶಕ್ತಿ ಹಾಗೂ ಕಾಮಶಕ್ತಿಯನ್ನು ಹೆಚ್ಚಿಸಿ ಸಂಭೋಗದಲ್ಲಿ ಯೌವನದ ಪರಮಾವಧಿಯನ್ನುಂಟು ಮಾಡುವದಕ್ಕಾಗಿ ಇದು ಸಾವಿರಾರು ಜನರಿಂದ ಪರೀಕ್ಷಿಸಲ್ಪಟ್ಟ ಅಪಾಯರಹಿತವಾದ ಔಷಧವಾಗಿದೆ.

ಸಂಭೋಗಕ್ಕಿಂತಲೂ ಮುಂಚಿತವಾಗಿ ಒಂದು ಗುಳಿಗೆಯನ್ನು ಸೇವಿಸುವದರಿಂದ ಒಂದೇ ತಾಸಿನಲ್ಲಿ ಶೀಘ್ರ ವೀರ್ಯಸ್ಖಲನವನ್ನು ತಡೆಗಟ್ಟಿ, ಸಂಭೋಗದಲ್ಲಿ ಹರ್ಷ, ಆನಂದ ಮತ್ತು ಪ್ರಚಂಡ ಉತ್ಸಾಹ ಉತ್ಪನ್ನಮಾಡಿ ಕಾಮಶಕ್ತಿಯ ಪ್ರಬಲವಾಸನೆ ಮತ್ತು ಸ್ತಂಭನಶಕ್ತಿ ಹೆಚ್ಚಾಗುವದರಿಂದ ಸಂಭೋಗದಲ್ಲಿ ಸ್ತ್ರೀಯನ್ನು ಪರಾಜಯಿಸುವ ಶಕ್ತಿ, ಮದ ಮತ್ತು ತೇಜ ಉಂಟಾಗುತ್ತದೆ.

ಪತ್ತೆ:- ವೈದ್ಯರಾಜ ವಿ. ಬಿ. ಶಿದವಾಳೆ
ಮನೆ ನಂಬರ ೧೩೮೯ (ಕೆ. ವೀ.) ಬಸವನಗಲ್ಲಿ. ಬೆಳಗಾವಿ

ಈ ಪತ್ರಿಕೆಯು ಹುಬ್ಬಳ್ಳಿಯ ಸಂಯುಕ್ತ-ಕರ್ನಾಟಕ ಮುದ್ರಣಾಲಯದಲ್ಲಿ "ಲೋಕಶಿಕ್ಷಣ ಟ್ರಸ್ಟದ" ಪರವಾಗಿ ಹ. ರಾ. ಮೋಹರೆಯವರಿಂದ ಮುದ್ರಿತವಾಗಿ ಪ್ರಕಟವಾಯಿತು.